بِسْمِ اللهِ الرَّحْمٰنِ الرَّحِيْمِ      نَحْمَدُهٗ وَنُصَلِّیْ عَلٰی رَسُوْلِهِ الْکَرِیْمِ      وَعَلٰی عَبْدِهِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 04

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 24

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

15 ಜೂನ್ 2023, 15 ಎಹ್ಸಾನ್ 1402 ಹಿಜರಿ ಶಮ್‌ಸಿ,
25 ಝಿಲ್‌ಖಅ್‌ದಃ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَرَحْمَتِیْ وَسِعَتْ كُلَّ شَیْءٍ ؕ فَسَاَكْتُبُهَا لِلَّذِیْنَ یَتَّقُوْنَ وَیُؤْتُوْنَ الزَّكٰوةَ وَالَّذِیْنَ هُمْ بِاٰیٰتِنَا یُؤْمِنُوْنَ (اعراف:157)

**(ಅಲ್-ಅಅ್‌ರಾಫ್: 157)**

ಅಂದರೆ: ನನ್ನ ಕರುಣೆಯು ಸರ್ವವನ್ನೂ ಆವರಿಸಿಕೊಂಡಿದೆ. ಆದ್ದರಿಂದ ಭಯಭಕ್ತಿ ಹೊಂದಿದವರಿಗೂ ಝಕಾತ್ ನೀಡುವವರಿಗೂ ನಮ್ಮ ದೃಷ್ಟಾಂತಗಳಲ್ಲಿ ವಿಶ್ವಾಸವಿರಿಸುವವರಿಗೂ ಅದನ್ನು (ಕರುಣೆಯನ್ನು) ನಾನು ವಿಧಿಸಿದ್ದೇನೆ.'

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಪ್ರಾಣಿಗಳಿಗೆ ನೀರು ಕುಡಿಸುವುದರ ಪ್ರತಿಫಲ

**(2363)** ಹ‌ಝ್‌ರತ್ ಅಬೂಹುರೈರಾ(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನುಡಿದರು: ಒಮ್ಮೆ ಒಬ್ಬ ವ್ಯಕ್ತಿಯು (ದಾರಿಯಲ್ಲಿ) ನಡೆದುಕೊಂಡು ಹೋಗುತ್ತಿದ್ದಾಗ ಅವನಿಗೆ ತುಂಬಾ ಬಾಯಾರಿಕೆಯಾಯಿತು. ಅವನು ಬಾವಿಗೆ ಇಳಿದು ನೀರು ಕುಡಿದನು. ತದನಂತರ, ಅವನು ಹೊರಗೆ ಬಂದಾಗ, ಬಾಯಾರಿಕೆಯಿಂದ ಉಸಿರುಕಟ್ಟಿಕೊಂಡು ಕೆಸರನ್ನು ನೆಕ್ಕುತ್ತಿದ್ದ ನಾಯಿಯನ್ನು ನೋಡಿದನು, ಆದ್ದರಿಂದ ಆ ವ್ಯಕ್ತಿ (ಅವನ ಮನಸ್ಸಿನಲ್ಲಿ) ನನಗೆ ಸಂಭವಿಸಿದ ಅದೇ ನೋವಿನಿಂದ ಈ ಪ್ರಾಣಿಯು ಸಹ ಬಳಲುತ್ತಿದೆ ಎಂದುಕೊಂಡು ಅವನು ತನ್ನ ಕಾಲುಚೀಲದಲ್ಲಿ ನೀರನ್ನು ತುಂಬಿಕೊಂಡು ಅದನ್ನು ತನ್ನ ಬಾಯಿಯಲ್ಲಿ ಹಿಡಿದುಕೊಂಡು ಮೇಲಕ್ಕೆ ಹತ್ತಿ ನಾಯಿಗೆ ನೀರನ್ನು ಕುಡಿಸಿದನು. ಸರ್ವಶಕ್ತನಾದ ಅಲ್ಲಾಹನು ಅವನ ಈ ಕೆಲಸವನ್ನು ಮೆಚ್ಚಿ ಅವನ ಪಾಪಗಳನ್ನು ಕ್ಷಮಿಸಿದನು. ಸಹಚರರು ಕೇಳಿದರು: ಯಾ ರಸೂಲಲ್ಲಾಹ್! ಪ್ರಾಣಿಗಳಿಗೆ ನೀರು ಕುಡಿಸಿದರೂ ನಮಗೆ ಪ್ರತಿಫಲ ಸಿಗುತ್ತದೆಯೇ? ಅದಕ್ಕೆ ಪ್ರವಾದಿ(ಸ) ಹೇಳಿದರು: ತಾಜಾವಾಗಿರುವ ಪ್ರತಿಯೊಂದು ಸ್ಥಳಕ್ಕೂ ಒಂದು ಪ್ರತಿಫಲವಿದೆ (ಅಂದರೆ ಪ್ರತಿ ಜೀವಿಯನ್ನು ಚೆನ್ನಾಗಿ ಪರಿಗಣಿಸಿದ್ದಕ್ಕಾಗಿ ಪ್ರತಿಫಲವಿದೆ).

**(ಸಹೀಹ್ ಬುಖಾರಿ, ಸಂಪುಟ-4, ಕಿತಾಬ್ ಅಲ್-ಮುಸಾಖಾ, 2008 ಖಾದಿಯಾನ್ ಪ್ರಕಟಿತ)**

**ನಮ್ಮ ಪ್ರವಾದಿ ಮುಹಮ್ಮದ್(ಸ.ಅ) ಪ್ರವಾದಿತ್ವದ ಎಲ್ಲಾ ಪರಿಪೂರ್ಣತೆಗಳನ್ನು ಹೊಂದಿದ್ದರು ಸಹಾಬರನ್ನು ನೋಡಿ, ಪೂರ್ಣ ಪ್ರಗತಿಯನ್ನು ತಲುಪಬೇಕೆಂದು ಅವರು ಬಯಸುತ್ತಿದ್ದರು, ಅಂತಿಮವಾಗಿ, ಸಹಾಬರು, ಜಗತ್ತು ಎಂದಿಗೂ ನೋಡದ್ದನ್ನು ಪಡೆದುಕೊಂಡರು ಮತ್ತು ಯಾರೂ ನೋಡದ್ದನ್ನು ನೋಡಿದರು.**

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಪ್ರವಾದಿಗಳಲ್ಲಿ ಸಹಾನುಭೂತಿಯ ಉತ್ಸಾಹ

ಪ್ರವಾದಿಯ ಆಗಮನವು ಅಗತ್ಯವಾಗಿದೆ. ಅವರೊಂದಿಗೆ ದೈವಿಕಶಕ್ತಿ ಇರುತ್ತದೆ ಮತ್ತು ಅವರ ಹೃದಯದಲ್ಲಿ ಜನರ ಬಗ್ಗೆ ಸಹಾನುಭೂತಿ, ಉಪಕಾರ ಮತ್ತು ಸಾಮಾನ್ಯವಾಗಿ ಉಪಕಾರಕ್ಕಾಗಿ ತುಡಿಯುವ ಉತ್ಸಾಹವಿರುತ್ತದೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಬಗ್ಗೆ ಸರ್ವಶಕ್ತನಾದ ಅಲ್ಲಾಹನು ಹೀಗೆ ನುಡಿದಿದ್ದಾನೆ, **ಫಲಅಲ್ಲಕ ಬಾಖಿಉನ್ನಫ್‌ಸಕ ಅಲ್ಲಾ ಯಕೂನು ಮುಮಿನೀನ್** (ಅಶ್ಶೂರಾಅ್:04) ಅಂದರೆ: ಪ್ರಾಯಶಃ, ಅವರು ನಂಬುವುದಿಲ್ಲವೆಂಬ ಕಾರಣದಿಂದ (ವ್ಯಾಕುಲಗೊಂಡು) ನೀನು ನಿನ್ನ ಜೀವವನ್ನು ಹಾನಿಗೊಳಿಸುವೆ. ಅದರಲ್ಲಿ ಎರಡು ಬದಿಗಳಿವೆ, ಒಂದು ಅವಿಶ್ವಾಸಿಗಳ ಬಗ್ಗೆ, ಅವರು ಏಕೆ ಮುಸ್ಲಿಮರಾಗುತ್ತಿಲ್ಲ ಎಂದು? ಎರಡನೆಯದಾಗಿ, ಮುಸ್ಲಿಮರಿಗೆ ಸಂಬಂಧಿಸಿದಂತೆ, ತಾವು ಕಂಡುಕೊಳ್ಳುವ ಉನ್ನತ ಮಟ್ಟದ ಆಧ್ಯಾತ್ಮಿಕ ಶಕ್ತಿಯನ್ನು ಅವರು ಏಕೆ ಅಭಿವೃದ್ಧಿಪಡಿಸುವುದಿಲ್ಲ? ಎಂದು. ಪ್ರಗತಿಯು ಕ್ರಮೇಣವಾಗಿರುವುದರಿಂದ, ಸಹಾಬಿಗಳ ಪ್ರಗತಿಯು ಕ್ರಮೇಣವಾಗಿತ್ತು, ಆದರೆ ಪ್ರವಾದಿಗಳ ಹೃದಯವು ಸಹಾನುಭೂತಿಯಿಂದ ಕೂಡಿರುತ್ತದೆ ಮತ್ತು ನಮ್ಮ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಮೇಲೆ ಪ್ರವಾದಿತ್ವವು ಎಲ್ಲಾ ಪರಿಪೂರ್ಣತೆಗಳನ್ನು ಹೊಂದಿತ್ತು. ಅವರಲ್ಲಿ ಈ ಸಹಾನುಭೂತಿಯೂ ಪರಿಪೂರ್ಣ ಮಟ್ಟದಲ್ಲಿತ್ತು. ಅವರು ತಮ್ಮ ಸಹಚರರು ಕೂಡ ತಮ್ಮನ್ನು ನೋಡಿ ಪೂರ್ಣ ಪ್ರಗತಿಯನ್ನು ಅವರು ತಲುಪಬೇಕೆಂದು ಬಯಸುತ್ತಿದ್ದರು. ಆದರೆ ಈ ಅಭಿವೃದ್ಧಿ ಒಂದು ಕಾಲಕ್ಕೆ ಉದ್ದೇಶಿಸಲಾಗಿತ್ತು. ಅಂತಿಮವಾಗಿ, ಸಹಾಬರವರ ಜಗತ್ತು ಎಂದಿಗೂ ಕಾಣದ್ದನ್ನು ಕಂಡುಕೊಂಡರು ಮತ್ತು ಯಾರೂ ನೋಡದದನ್ನು ನೋಡಿದರು.

### ಸಕಲ ಕಕ್ಷೆಗಳು ಮುಜಾಹಿದಾದ (ಪ್ರಯತ್ನದ) ಮೇಲೆ ಅವಲಂಬಿತವಾಗಿದೆ

ಸಂಪೂರ್ಣ ಕಕ್ಷೆಯು ಮುಜಾಹಿದಾದ ಮೇಲೆ ಅವಲಂಬಿತವಾಗಿದೆ. ಸರ್ವಶಕ್ತನಾದ ಅಲ್ಲಾಹನು ನುಡಿಯುತ್ತಾನೆ **ವಲ್ಲಝೀನ ಜಾಹದೂ ಫೀನಾ ಲಹ್ದಿಯನ್ನಹುಮ್ ಸುಬುಲನಾ** (ಅಲ್-ಅನ್ಕಬೂತ್: 70) ಅಂದರೆ: ನಮ್ಮ ಮಾರ್ಗದಲ್ಲಿ ಯಾರು ಅತ್ಯಂತ ಪ್ರಯತ್ನ ಮಾಡುತ್ತಾರೋ, ಖಂಡಿತವಾಗಿಯೂ ನಾವು ಅವರನ್ನು ನಮ್ಮ ಪಥದಲ್ಲಿ ನಡೆಸುವೆವು. ಪ್ರಯತ್ನವಿಲ್ಲದೆ ಏನೂ ಆಗಲು ಸಾಧ್ಯವಿಲ್ಲ. ಸೈಯದ್ ಅಬ್ದುಲ್ ಖಾದಿರ್ ಜೀಲಾನಿ(ರ) ಅವರು ಓರ್ವ ಕಳ್ಳನನ್ನು ಒಂದು ನೋಟದಲ್ಲಿಯೇ ದೈವಪುರುಷನನ್ನಾಗಿ ಮಾಡಿದರು ಎಂದು ಹೇಳುವವರು ತಪ್ಪಾಗಿದ್ದಾರೆ ಮತ್ತು ಅಂತಹ ಮಾತುಗಳು ಜನರನ್ನು ಕೊಂದು ಹಾಕಿವೆ. ಯಾರಾದರು ಮಾತಮಂತ್ರದಿಂದ ಒಬ್ಬ ವ್ಯಕ್ತಿಯು ಸಂತನಾಗುತ್ತಾನೆ ಎಂದು ಜನರು ಭಾವಿಸುತ್ತಾರೆ.

ದೇವರೊಂದಿಗೆ ಆತುರಪಡುವವರು ನಾಶವಾಗುತ್ತಾರೆ. ಪ್ರಪಂಚದ ಎಲ್ಲದರ ಅಭಿವೃದ್ಧಿಯು ಕ್ರಮೇಣವಾಗುತ್ತದೆ. ಆಧ್ಯಾತ್ಮಿಕ ಬೆಳವಣಿಗೆಯು ಸಹ ಅದೇ ರೀತಿಯಲ್ಲಿ ನಡೆಯುತ್ತದೆ ಮತ್ತು ಪ್ರಯತ್ನವಿಲ್ಲದೆ ಏನೂ ಆಗುವುದಿಲ್ಲ ಮತ್ತು ಸರ್ವಶಕ್ತನಾದ ಅಲ್ಲಾನಹಲ್ಲಿ ತಲ್ಲೀನನಾಗಿ ಪ್ರಯತ್ನಿಸುವುದು ಪ್ರಯತ್ನವಾಗಿದೆ. ಜೋಗಿಗಳಂತೆ ಪವಿತ್ರ ಖುರ್‌ಆನ್‌ನ ವಿರುದ್ಧ ನಿಷ್ಪ್ರಯೋಜಕ ತಪಸ್ಸು ಮತ್ತು ಪ್ರಯತ್ನಗಳನ್ನು ಸೂಚಿಸುತ್ತಾ ಕುಳಿತುಕೊಳ್ಳಬೇಕು ಎಂದು ಅಲ್ಲ. ಅಲ್ಲಾಹನು ನನ್ನನ್ನು ನೇಮಿಸಿದ ಕೆಲಸ ಇದಾಗಿದ್ದು, ಮನುಷ್ಯ ಸರ್ವಶಕ್ತನಾದ ಅಲ್ಲಾಹನನ್ನು ಹೇಗೆ ತಲುಪಬಹುದು? ಎಂಬುದನ್ನು ಜಗತ್ತಿಗೆ ತೋರಿಸಬಲ್ಲೆ. ಇದು ನೈಸರ್ಗಿಕ ನಿಯಮವಾಗಿದೆ. ಎಲ್ಲರೂ ವಂಚಿತರಾಗಿ ಉಳಿಯುವುದಿಲ್ಲ ಮತ್ತು ಎಲ್ಲರೂ ಮಾರ್ಗದರ್ಶನವು ಪಡೆಯುವುದಿಲ್ಲ."

**(ಮಲ್‌ಫೂಝಾತ್, ಸಂಪುಟ-1, ಪುಟ-460, 2018 ಪ್ರಕಟಿತ ಖಾದಿಯಾನ್)**

### ***128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.** **(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

# ಖುತ್‌ಬ ಜುಮುಅ

ಅಲ್ಲಾಹನ ಸೃಷ್ಟಿಗಳೊಡನೆ ನಿಮ್ಮ ಸಂಬಂಧ ಹೇಗಿರಬೇಕೆಂದರೆ ಅದರಲ್ಲಿ ಯಾವುದೇ ತೋರಿಕೆ ಆಡಂಬರವಿರಬಾರದು. (ಹಝ್ರತ್ ಮಸೀಹ್ ಮೌಊದ್(ಅ)

ನಿಜವಾದ ಸತ್ಯವಿಶ್ವಾಸಿಯು ತನ್ನ ವಿಶ್ವಾಸವನ್ನು ದೃಢಪಡಿಸಲು ಅಲ್ಲಾಹನ ಆಜ್ಞೆಗಳ ಹಾಗೂ ಉಪದೇಶಗಳಂತೆ ನಡೆದುಕೊಳ್ಳಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಈ ವಚನದ ವ್ಯಾಖ್ಯಾನ ಎಂತಹ ಜ್ಞಾನಪೂರ್ಣ ರೀತಿಯಲ್ಲಿ ಮಾಡಿದ್ದಾರೆಂದರೆ, ಅದರಿಂದ ವಾಸ್ತವವಾಗಿ ಅಲ್ಲಾಹನ ಸಂಬಂಧದ ಕುರಿತು ಜ್ಞಾನ ಲಭಿಸುತ್ತದೆ. ಅದು ಒಬ್ಬ ಸತ್ಯವಿಶ್ವಾಸಿಯ ವಿಶ್ವಾಸ ಮತ್ತು ಭರವಸೆಯನ್ನು ಹೊಸ ಉನ್ನತ ದರ್ಜೆಗಳವರೆಗೆ ತಲುಪಿಸುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ರವರನ್ನು ನಂಬುವುದು ಕರ್ತವ್ಯವಾಗಿರುತ್ತದೆ. ಅವರು ಅಲ್ಲಾಹನ ಆಜ್ಞೆಗಳನ್ನು ಮುಂದಿಟ್ಟು ಸುಧಾರಣೆಯನ್ನು ಮಾಡಿಕೊಳ್ಳಬೇಕು ಮತ್ತು ಲೋಕಸುಧಾರಣೆಗಾಗಿಯೂ ಪ್ರಯತ್ನಿಸಬೇಕು.

ಇಂತಹ ಪವಿತ್ರವಾದ ಶಿಕ್ಷಣ ನಮಗೆ ತೌರಾತಿನಲ್ಲಾಗಲಿ ಇಂಜೀಲ್‌ನಲ್ಲಾಗಲಿ ಕಾಣಲು ಸಿಗಲಿಲ್ಲ. ಪುಟ ಪುಟವನ್ನು ಆಧರಿಸಿ ಓದಿದ್ದೇನೆ. ಆದರೆ ಇಂತಹ ಪವಿತ್ರ ಹಾಗೂ ಪರಿಪೂರ್ಣ ಶಿಕ್ಷಣದ ಲವಲೇಶ ಮಾತ್ರವೂ ಇಲ್ಲ. (ಹಝ್ರತ್ ಮಸೀಹ್ ಮೌಊದ್ (ಅ))

ಹಝ್ರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳ ಪ್ರಕಾಶದಲ್ಲಿ ಸೂರ: ಅನ್ನಹಲ್ ವಚನ 91 ರಲ್ಲಿರುವ ಸತ್ಕರ್ಮಗಳ ಬಗ್ಗೆ ಎಂದರೆ ನ್ಯಾಯ, ಉಪಕಾರ ಮತ್ತು ಈತಾಯಿ ಝಿಲ್ ಖುರುಬಾ ಕುರಿತು ಸಾಕ್ಷ್ಯಪೂರ್ಣ ವಿವರ.

ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡಲು ಕೋರಿಕೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **05-05-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيْمِ - بِسْمِ اللهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ . اَلرَّحْمٰنِ الرَّحِيْمِ . مٰلِكِ يَوْمِ الدِّيْنِ .

اِيَّاكَ نَعْبُدُ وَاِيَّاكَ نَسْتَعِيْنُ . اِهْدِنَا الصِّرَاطَ الْمُسْتَقِيْمَ .

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ .

اِنَّ اللهَ يَأْمُرُ بِالْعَدْلِ وَالْاِحْسَانِ وَاِيْتَآئِ ذِى الْقُرْبٰى وَيَنْهٰى عَنِ الْفَحْشَآءِ وَالْمُنْكَرِ وَالْبَغْيِ ۚ يَعِظُكُمْ لَعَلَّكُمْ تَذَكَّرُوْنَ (النحل:91)

ಎಂದರೆ ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ ಪರರಿಗೆ ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. ಅಸಭ್ಯತೆಯನ್ನು ದುಷ್ಕೃತ್ಯವನ್ನೂ ನಿಯಮೋಲ್ಲಂಘನೆಯನ್ನು ಅವರು ನಿಷಿದ್ಧಗೊಳಿಸಿದ್ದಾನೆ. ಮನವರಿಕೆ ಮಾಡಲಿಕ್ಕಾಗಿ ಅವನು ನಿಮಗೆ ಉಪದೇಶ ನೀಡುತ್ತಾನೆ.

ಈ ವಚನವನ್ನು ಪ್ರತಿ ಜುಮಾ ಮತ್ತು ಈದ್ ದಿನಗಳ ಖುತುಬ ಸಾನಿಯದಲ್ಲಿ ಓದಲಾಗುತ್ತದೆ. ಈ ವಚನದಲ್ಲಿ ಕೆಲವು ಒಳಿತುಗಳನ್ನು ಮಾಡಲು ಮತ್ತು ಕೆಲವು ಕೆಡುಕುಗಳಿಂದ ದೂರವಿರಲು ಹೇಳಲಾಗಿದೆ. ಅಲ್ಲಾಹನ ಆಜ್ಞೆಗಳನ್ನು ಮತ್ತು ನಿರ್ದೇಶನಗಳನ್ನು ಪಾಲಿಸುವುದು ಒಬ್ಬ ನೈಜ ಸತ್ಯವಿಶ್ವಾಸಿಯ ಲಕ್ಷಣವಾಗಿದೆ.

ಈ ವಚನದಲ್ಲಿ ಪ್ರಸ್ತಾಪಿಸಲಾದ ಅದಲ್, ಇಹ್‌ಸಾನ್, **ಈತಾಇಝಿಲ್‌ಖುರ್‌ಬ** ಎಂಬೀ ಒಳಿತುಗಳಿಗೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್(ಅ) ರವರ ಉಪದೇಶಗಳನ್ನು ಇಂದು ನಾನು ಮುಂದಿರುಸುತ್ತಿದ್ದೇನೆ. ಎಲ್ಲ ಉಪದೇಶಗಳು ಬಾಹ್ಯವಾಗಿ ಒಂದೇ ಕೇಂದ್ರಬಿಂದುವಿನ ಸುತ್ತ ತಿರುಗುತ್ತಿವೆ. ಹೇಗಿದ್ದರೂ ಹಝ್ರತ್ ಮಸೀಹ್ ಮೌಊದ್ (ಅ) ವಿವಿಧ ರೀತಿಯಲ್ಲಿ ಉಪದೇಶಿಸಿರುವರು.

ಈ ಉಪದೇಶಗಳು ನಮ್ಮ ಜೀವಿತನವನ್ನು ಅಲ್ಲಾಹನ ಆದೇಶಗಳ ಪ್ರಕಾರ ನಡೆಸುವ ಕಡೆಗೆ ನಮಗೆ ಮಾರ್ಗದರ್ಶನ ಮಾಡುತ್ತವೆ. ನಾವು ಈ ಉಪದೇಶಗಳ ಬಗ್ಗೆ ಚಿಂತಿಸಿದರೆ ಮತ್ತು ಅವುಗಳ ಪ್ರಕಾರ ನಮ್ಮ ಜೀವನ ಮಾಡಲು ಪ್ರಯತ್ನಿಸಿದರೆ ಖಂಡಿತವಾಗಿಯೂ ನಾವು ಅಲ್ಲಾಹನೊಂದಿಗೆ ನಮ್ಮ ಸಂಬಂಧವನ್ನು ಸದೃಢಗೊಳಿಸಬಹುದು ಮತ್ತು ಪರಸ್ಪರ ಹಕ್ಕುಗಳನ್ನು ಉತ್ತಮ ರೀತಿಯಲ್ಲಿ ಈಡೇರಿಸಬಹುದಾಗಿದೆ.

ಅಲ್ಲಾಹನಿಗಾಗಿ ಸಲ್ಲಬೇಕಾದ ಹಕ್ಕುಗಳು ಮತ್ತು ಸೃಷ್ಟಿಗಳಿಗೆ ನೀಡಬೇಕಾದ ಹಕ್ಕುಗಳನ್ನು ಈಡೇರಿಸುವುದೇ ಸಾಮಾಜಿಕ ಮತ್ತು ಪೂರ್ತಿ ಲೋಕದ ಶಾಂತಿಯನ್ನು ಖಾತರಿಪಡಿಸುವ ಮಾರ್ಗವಾಗಿದೆ. ಆದರೆ ಲೋಕವು ಈ ಬಗ್ಗೆ ಗಮನಹರಿಸುವುದಿಲ್ಲವೆಂಬುದು ದುಃಖಕರ. ಮುಸ್ಲಿಂ ರಾಷ್ಟ್ರಗಳು ಮತ್ತು ಲೋಕದ ಇತರ ರಾಷ್ಟ್ರಗಳು ಎಲ್ಲವೂ ಪರಸ್ಪರ ಹಕ್ಕುಗಳನ್ನು ದೋಚುವ ಪ್ರಯತ್ನದಲ್ಲಿ ನಿಕಟವಾಗಿವೆ. ಇಂತಹ ಸ್ಥಿತಿಯಲ್ಲಿ ತಮ್ಮ ಸುಧಾರಣೆಯನ್ನು ಮಾಡುವುದರೊಂದಿಗೆ ಲೋಕವನ್ನು ಇದರ ಕಡೆಗೆ ಗಮನಹರಿಸುವಂತೆ ಮಾಡುವುದು ಹಝ್ರತ್ ಮಸೀಹ್ ಮೌಊದ್(ಅ) ರನ್ನು ನಂಬುವವರ ಹೊಣೆಗಾರಿಕೆಯಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನೀವು ಅಲ್ಲಾಹನೊಂದಿಗೆ ಮತ್ತು ಅವನ ಸೃಷ್ಟಿಗಳೊಂದಿಗೆ ನ್ಯಾಯವನ್ನು ಪಾಲಿಸಿರಿ ಎಂದು ಅವನು ಆದೇಶಿಸುತ್ತಾನೆ ಎಂದರೆ ಅಲ್ಲಾಹನಿಗೆ ಸಲ್ಲಬೇಕಾದ ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಕರ್ತವ್ಯಗಳನ್ನು ಈಡೇರಿಸಬೇಕು. ಅದಕ್ಕಿಂತ ಹೆಚ್ಚಿಗೆ ಮಾಡಲು ಸಾಧ್ಯವಿದ್ದರೆ, ನ್ಯಾಯದಿಂದ ವರ್ತಿಸುವುದು ಮಾತ್ರವಲ್ಲ, ಔದಾರ್ಯವನ್ನು ಮಾಡಿರಿ ಎಂದರೆ ಕಡ್ಡಾಯ ಕಾಯಗಳಿಗಿಂತ ಹೆಚ್ಚಿಗೆ ಮಾಡಬೇಕು. ನೀವು ಅಲ್ಲಾಹನನ್ನು ನೋಡುತ್ತಿರುವಿರಿ ಎಂಬಂತೆ ನಿಷ್ಠೆಯಿಂದ ಅವನ ಆರಾಧನೆಯನ್ನು ಮಾಡಿರಿ. ಜನರೊಡನೆ ಅವರ ಹಕ್ಕುಗಳನ್ನು ಈಡೇರಿಸುವುದಕ್ಕೂ ಮಿಗಿಲಾಗಿ ಮಾನವೀಯತೆಯಿಂದ ವರ್ತಿಸಿರಿ. ಅದಕ್ಕಿಂತ ಹೆಚ್ಚಾಗಿ ಸಾಧ್ಯವಿದ್ದರೆ, ನಿಕಟ ಸಂಬಂಧಿಗಳನ್ನು ಉತ್ಸಾಹದಿಂದ ಸಹಾಯ ಮಾಡುವ ರೀತಿಯಲ್ಲಿ ಯಾವುದೇ ಉದ್ದೇಶವನ್ನು ಇರಿಸದೆ ನಿಸ್ವಾರ್ಥವಾಗಿ ಅಲ್ಲಾಹನ ಆರಾಧನೆಯನ್ನೂ ಅಲ್ಲಹನ ಸೃಷ್ಟಿಗಳ ಸೇವೆಯನ್ನು ಮಾಡಿರಿ. (ಶಹನಾ ಎ ಹಖ್, ರೂಹಾನಿ ಖಝಾಇನ್, ಸಂಪುಟ-2, ಪುಟ-362)

ಈ ವಚನದ ಬೆಳಕಿನಲ್ಲಿ ಅಲ್ಲಾಹನ ಹಕ್ಕುಗಳನ್ನು ಮತ್ತಷ್ಟು ಸ್ಪಷ್ಟಪಡಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅವನ ಸೃಷ್ಟಿಗಳ ಹಕ್ಕುಗಳನ್ನು ಹೇಗೆ ಪಾಲಿಸಬೇಕು. ಅದನ್ನು ಸಹ ಸ್ಪಷ್ಟಪಡಿಸುತ್ತಾ ಹೇಳಿದರು. ಮೊದಲನೆಯದಾಗಿ ಈ ವಚನದ ಅರ್ಥ ನೀವು ನಿಮ್ಮ ಸೃಷ್ಟಿಕರ್ತನೊಡನೆ ನ್ಯಾಯದ ವರ್ತನೆಯನ್ನು ಪಾಲಿಸಿರಿ, ಬದಲು ದೌರ್ಜನ್ಯರಾಗಬೇಡಿ. ಸದಾ ಅಲ್ಲಾಹನ ಸನ್ನಿಧಿಯಲ್ಲಿ ನ್ಯಾಯಪಾಲನೆಯ ವಿಷಯವನ್ನು ಮರೆಯದಿರಿ. ಹಾಗೆ ಸತ್ಯದಲ್ಲಿ ಅಲ್ಲಾಹನಲ್ಲದೆ ಆರಾಧನೆಗೆ ಬೇರೆ ಯಾರೂ ಅರ್ಹರಲ್ಲ. ಯಾರು ಪ್ರೀತಿಸ್ಪಡಲು ಅರ್ಹರಲ್ಲ ಅವನಲ್ಲದೇ ಬೇರೆ ಯಾರ ಮೇಲೂ ಭರವಸೆ ಇರಿಸುವಂತಿಲ್ಲ. ಏಕೆಂದರೆ ಅವನು ಸೃಷ್ಟಿಕರ್ತನೂ ಎಲ್ಲವನ್ನು ನೆಲೆನಿಲ್ಲಿಸುವವನೂ ಮತ್ತು ಪರಿಪಾಲಕನೂ ಆದ ಕಾರಣದಿಂದ ಎಲ್ಲ ಹಕ್ಕುಗಳು ಅವನಿಗೆ ಮಾತ್ರ

ಸಲ್ಲುತ್ತದೆ. ನೀವು ಇಷ್ಟು ಮಾಡಿದರೆ ಇದು ಅದಲ್ ಆಗಿದೆ. ಅದನ್ನು ನಿರ್ವಹಿಸುವುದು ಕಡ್ಡಾಯ. ಅನಂತರ ಇದಕ್ಕಿಂತ ಹೆಚ್ಚು ಅಭಿವೃದ್ಧಿ ಹೊಂದಲು ಬಯಸುವುದಾದರೆ ಇಹ್‌ಸಾನ್ ಅಥವಾ ಔದಾರ್ಯದ ಪದವಿದೆ. ಅದೇನೆಂದರೆ, ನೀವು ಅವನ ಶ್ರೇಷ್ಠತೆಗಳನ್ನು ಒಪ್ಪಿಕೊಂಡು ಅವನ ಮುಂದೆ ತನ್ನ ಆರಾಧನೆಗಳನ್ನು ನಿಷ್ಟೆಯಿಂದ ಮಾಡಬೇಕು. ಮತ್ತು ನೀವು ಅವನ ಭವ್ಯತೆ, ಪ್ರತಾಪ ಮತ್ತು ಅನಂತವಾದ ಸೌಂದರ್ಯವನ್ನು ನೋಡಿರುವ ರೀತಿಯಲ್ಲಿ ಅವನ ಪ್ರೇಮದಲ್ಲಿ ತಲ್ಲೀನರಾಗಬೇಕು. ಅದರ ನಂತರದ ಪದವಿ ಈತಾಯಿದಿಲ್‌ಖುರ್‌ಬ ಆಗಿದೆ. ಅದನ್ನು ನಿರ್ವಹಿಸುವುದು ಕಡ್ಡಾಯ. ಅನಂತರ ಇದಕ್ಕಿಂತ ಹೆಚ್ಚು ಅಭಿವೃದ್ಧಿ ಹೊಂದಲು ಬಯಸುವುದಾದರೆ, ಇಹ್‌ಸಾನ್ ಅಥವಾ ಔದಾರ್ಯದ ಪದವಿದೆ. ಅದೇನೆಂದರೆ, ನೀವು ಅವನ ಶ್ರೇಷ್ಠತೆಗಳನ್ನು ಒಪ್ಪಿಕೊಂಡು ಅವನ ಮುಂದೆ ತನ್ನ ಆರಾಧನೆಗಳನ್ನು ಶ್ರೇಷ್ಠತೆಯಿಂದ ಮಾಡಬೇಕು ಮತ್ತು ನೀವು ಅವನ ಭವ್ಯತೆ, ಪ್ರತಾಪ ಮತ್ತು ಅನಂತವಾದ ಸೌಂದರ್ಯವನ್ನು ನೋಡಿರುವ ರೀತಿಯಲ್ಲಿ ಅವನ ಪ್ರೇಮದಲ್ಲಿ ತಲ್ಲೀನರಾಗಬೇಕು. ಅದರ ನಂತರದ ಪದವಿ ಈತಾಯಿದಿಲ್‌ಖುರ್‌ಬಾ ಆಗಿದೆ. ಅದೇನೆಂದರೆ, ನಿಮ್ಮ ಆರಾಧನೆ, ನಿಮ್ಮ ಪ್ರೇಮ ಮತ್ತು ನಿಮ್ಮ ಅನುಸರಣೆಯಲ್ಲಿ ಕಿಂಚಿತ್ತೂ ತೋರಿಕೆ ಇರಬಾರದು ಮತ್ತು ನೀವು ನಿಮ್ಮ ತಂದೆಯನ್ನು ನೆನಪಿಸುವ ರೀತಿಯಲ್ಲಿ ಅಲ್ಲಾಹನನ್ನು ನಿಕಟವಾದ ಸಂಬಂಧದೊಂದಿಗೆ ನೆನಪಿಸಿರಿ. ಯಾವ ರೀತಿಯಲ್ಲಿ ಮಗುವು ತನ್ನ ತಾಯಿಯನ್ನು ಪ್ರೀತಿಸುತ್ತದೇ ಅದೇ ರೀತಿಯಲ್ಲಿ ಅಲ್ಲಹನನ್ನು ಪ್ರೀತಿಸಬೇಕು.

ಅನಂತರ ಸೃಷ್ಟಿಗಳ ಹಕ್ಕುಗಳಿಗೆ ಸಂಬಂಧಿಸಿ, ಈ ವಚನದ ಅರ್ಥವನ್ನು ಹಝ್ರತ್ ಮಸೀಹ್ ಮೌಊದ್(ಅ) ರೀತಿ ವಿವರಿಸುತ್ತಾರೆ. ನಿಮ್ಮ ಸಹೋದರರೊಡನೆ ಮತ್ತು ಮನುಕುಲದೊಂದಿಗೆ ನ್ಯಾಯಪಾಲನೆ ಮಾಡಿರಿ. ನಿಮ್ಮ ಹಕ್ಕುಗಳಿಗಿಂತ ಹೆಚ್ಚಾಗಿ ಅವರಿಂದ ಅಲ್ಪ ಕೂಡ ಕಸಿದುಕೊಳ್ಳಬೇಡಿರಿ ಮತ್ತು ನ್ಯಾಯದಲ್ಲಿ ನೆಲೆನಿಲ್ಲಿರಿ. ಈ ಪದವಿಯಿಂದ ಅಭಿವೃದ್ಧಿ ಹೊಂದಲು ಬಯಸುವುದಾದರೆ, ಅದಕ್ಕಿಂತ ಮಿಗಿಲಾಗಿ ಔದಾರ್ಯದ (ಇಹ್‌ಸಾನ್) ಪದವಿ ಇದೆ. ಅದೇನೆಂದರೆ, ನಿಮ್ಮ ನೆಲೆ ನಿಮ್ಮ ಸಹೊದರನು ತೋರಿಸುವ ಕೆಟ್ಟ ವರ್ತನೆಗೆ ಬದಲಾಗಿ ಅವನೊಡನೆ ಒಳಿತನ್ನು ಮಾಡುವುದು. ಅವನು ನೀಡುವ ತೊಂದರೆಗಳಿಗೆ ಬದಲಾಗಿ ನೀವು ಅವನಿಗೆ ನೆಮ್ಮದಿಯನ್ನು ನೀಡಿರಿ. ಮಾನವೀಯತೆ ಮತ್ತು ಔದಾರ್ಯವಾಗಿ ಸಹಾಯವನ್ನು ಮಾಡಿರಿ. ಅನಂತರದ ಪದವಿ ಈತಯಿದಿಲ್ ಕುರ್‌ಬಾ ಆಗಿದೆ. ಅದೇನೆಂದರೆ ನೀವು ಸಹೋದರರೊಡನೆ ಮಾಡುವ ಒಳಿತುಗಳು ಅಥವಾ ಮನುಕುಲದೊಂದಿಗೆ ಮಾಡುವ ಒಳಿತುಗಳನ್ನು ಔದಾರ್ಯವೆಂದು ಭಾವಿಸಬೇಡಿರಿ. ಬದಲಾಗಿ ಸ್ವಾಭಾವಿಕವಾಗಿ, ಯಾವುದೆ ಪ್ರತಿಫಲವನ್ನು ಆಶಿಸದೇ ಅವುಗಳು ನಿಮ್ಮಿಂದ ಆಗಬೇಕು. ಸಹೋದರನೊಬ್ಬನು ನನ್ನ ಬೇರೆ ಸಹೋದರನೊಡನೆ ಒಳಿತುಗಳನ್ನು ನಿಕಟ ಸಂಬಂಧದ ಕಾರಣದಿಂದ ಉತ್ಸಾಹದಿಂದ ಮಾಡುವ ರೀತಿಯಲ್ಲಿ ಐದು ನೈತಿಕ ಅಥವಾ ಸ್ವಭಾವ ಪರವಾದ ಪ್ರಗತಿಯ ಕೊನೆಯ ಮಟ್ಟವಾಗಿದೆ ಎಂದರೆ, ಸೃಷ್ಟಿಗಳಿಗೊಂದಿಗೆ ಸಹಾಯನುಭೂತಿ ತೋರಿಸುವುದರಲ್ಲಿ ಯಾವುದೆ ಸ್ವಾರ್ಥ ಉದ್ದೇಶ ಇಲ್ಲದೇ ಸಹೋದರತೆಯ ಮತ್ತು ಮಾನವೀಯ ಸಂಬಂಧದ ಆವೇಶ ಉನ್ನತಮಟ್ಟಕ್ಕೆ ಬೆಳೆದುಕೊಂಡು ತನ್ನಷ್ಟಕ್ಕೆ ಯಾವುದೇ ತೋರಿಕೆಯಿಲ್ಲದೆ, ಯಾವುದೇ ಕೃತಜ್ಞತೆಯನ್ನೋ ಪ್ರಾರ್ಥನೆಯನ್ನೋ ಬಯಸದೇ ಅಥವಾ ಬೇರೆ ಯಾವುದೇ ರೀತಿಯ ಕಾರಣವಿಲ್ಲದೇ ತನ್ನಷ್ಟಕ್ಕೆ ಸ್ವಾಭಾವಿಕ ಆವೇಶದಿಂದ ಮಾತ್ರ ಒಳಿತುಗಳನ್ನು ಮಾಡುವುದು. (ಇಝುಲಾ ಅವ್‌ಹಾಮ್, ಭಾಗ-2, ರೂಹಾನಿ ಖಝಾಈನ್, ಸಂಪುಟ-3, ಪುಟ-550-552)

ಸೃಷ್ಟಿಗಳ ಹಕ್ಕು ಕುರಿತು ಹೇಳುತ್ತಾರೆ. ಅಲ್ಲಾಹನ ಹಕ್ಕು ನೆಲೆಯಲ್ಲಿ ಹೇಳುವುದಾದರೆ ಅಲ್ಲಾಹನ ಅನುಸರಣೆಯೂ ನ್ಯಾಯಪಾಲನೆಯಿಂದ ಮಾಡಬೇಕು. ಏಕೆಂದರೆ ಯಾರು ನಿನ್ನನ್ನು ಸೃಷ್ಟಿಸಿರುವನು ಮತ್ತು ಪೋಷಣೆ ನೀಡಿರುವನು ಮತ್ತು ಎಲ್ಲ ಸಮಯವನ್ನು ಮಾಡುತ್ತಿದ್ದಾನೆ, ಅವನ ಅನುಪಾಲನೆ ಮಾಡುವುದು, ಅದು ಅವನ ಹಕ್ಕಾಗಿದೆ. ಅದಕ್ಕಿಂತ ಹೆಚ್ಚಾಗಿ ನೀವು ತಿಳಿಯುವುದಾದರೆ ಅನುಪಾಲನೆ ಮಾತ್ರವಲ್ಲ. ಇಹ್‌ಸಾನ್ ರೂಪದಲ್ಲಿ ಅವನ ಅನುಪಾಲನೆ ಮಾಡಿರಿ. ಮೊದಲ ಅದಲ್ ಎಂದರೆ ಅವನು ನಮ್ಮ ಸೃಷ್ಟಿಕರ್ತನೆಂದು ನಂಬುವುದಾಗಿದೆ ಮತ್ತು ನಮ್ಮ ಅಗತ್ಯಗಳನ್ನು ಪೂರೈಸುತ್ತಿದ್ದಾನೆ. ಅವನು ನಮ್ಮ ಮುಹ್‌ಸಿನ್ ಆಗಿದ್ದಾನೆ. ಅವನ ಅನುಗ್ರಹಗಳು ಅಗಣಿತವಾಗಿವೆ. ಅಲ್ಲಾಹನ ಅನುಗ್ರಹಗಳನ್ನು ಎಣಿಸುತ್ತೀರಿ ಮತ್ತು ಅವನ ಅನುಗ್ರಹಗಳ ಪ್ರತಿ ಕೃತಜ್ಞತೆಯನ್ನು ವ್ಯಕ್ತಪಡಿಸಿ. ಇದು ಇಹ್‌ಸಾನ್ ಪದವಿಯಾಗಿದೆ. ಅದಲ್ ಪದವಿಯಿಂದ ಶ್ರೇಷ್ಠವಾದುದು ಅದಲ್ ಜೊತೆಯಲ್ಲಿ ಇಹ್‌ಸಾನ್ ಅನ್ನು ನೆಪಿಡಬೇಕು. ಏಕೆಂದರೆ ಯಾವಾಗಲೂ ಅವನ ಕೃಪೆ ನಮ್ಮ ಮುಂದೆ ಬರುತ್ತದೆ. ಹಾಗಾಗಿ ನಾವು ಅವನ ಆರಾಧನೆ ಅವನನ್ನು ಕಾಣುತ್ತಿದ್ದೇವೆ ಎಂಬ ನೆಲೆಯಲ್ಲಿ ಮಾಡಬೇಕು." ಇದಾಗಿದೆ ಇಹ್‌ಸಾನ್ ಕಲ್ಪನೆ. ಅಲ್ಲಾಹನ ಮೇಲಂತೂ ಯಾರು ಇಹ್‌ಸನ್ ಮಾಡಲು ಸಾಧ್ಯವಿಲ್ಲ. ಬದಲು ಅವನ ಇಹ್‌ಸಾನ್ ನಮ್ಮ ಮೇಲಿದೆ. ಅದನ್ನು ನೆನಪಿಟ್ಟುಕೊಲ್ಲುವುದು ನಮ್ಮನ್ನು ಇಹ್‌ಸನ್ ಮಾಡುವವನ ದರ್ಜೆಗೆ ತಲುಪಿಸುತ್ತದೆ. ಅಲ್ಲಾಹನ ಔದಾರ್ಯಗಳನ್ನು ನೆನಪು ಮಾಡಲು ಅವರು ತೋರಿದ ರೀತಿ ಹೀಗಿದೆ. ನಮ್ಮ ಮೇಲೆ ಔದಾರ್ಯ ತೋರುವವನ ರೂಪ ಮತ್ತು ಅವನ ಗುಣಗಳು ನಮ್ಮ ಮುಂದೆ ಬಂದು ನಿಲ್ಲುತ್ತದೆ. ಅದು ನಮ್ಮ ಮುಂದೆ ಬಂದಾಗ ಅವನೊಂದಿಗೆ ಒಂದು ಕಿಷ್ಠ ಸಂಬಂಧ ಬೆಳೆಯುತ್ತದೆ. ಅಲ್ಲಾಹನ ಪ್ರತಿ ಈ ಭಾವನೆಗಳು ಬಂದಾಗ ಇನ್ನಷ್ಟು ನಿಷ್ಠೆಯಿಂದ ಅವನ ಆರಾಧನೆ· ಮಾಡುವಿರಿ. ಮತ್ತು ಅಲ್ಲಾಹನನ್ನು ನೀವು ನೋಡುವ ರೀತಿಯಲ್ಲಿ ಈ ಆರಾಧನೆ ಮಾಡುವುದು.

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಈ ವಚನದಲ್ಲಿ ಅಲ್ಲಾಹನು ಮನುಷ್ಯನ ಜ್ಞಾನದ ಮೂರು ಪದವಿಯನ್ನೂ ಹೇಳಿರುವನು. ಮೊದಲನೇ ದರ್ಜೆಯ ಜನರು ದೇವನಿಂದ ದೂರವಾದ ಕಾರಣ, ಲೌಕಿಕ ಮೋಹ ಹೊಂದಿದ ಕಾರಣ ಅಲ್ಲಾಹನ ಉಪಕಾರವನ್ನು ಗ್ರಹಿಸುವುದಿಲ್ಲ. ಅವರ ಕಣ್ಣಿನ ಮೇಲೆ ಪರದೆ ಬಿದ್ದಿದೆ ಅಥವಾ ಅವರಿಗೆ ಲೌಕಿಕ ಸಾಧನೆಗಳ ಮೇಲೆ ಹೆಚ್ಚು ಭರವಸೆ ಇದೆ. ಆದುದರಿಂದ ಅವರ ಅವನ ಉಪಕಾರಗಳನ್ನು ಗ್ರಹಿಸಲು ಸಾಧ್ಯವಾಗುವುದಿಲ್ಲ. ಉತ್ಸಾಹವು ಅವರಲ್ಲಿ ಇರುವುದಿಲ್ಲ, ಏಕೆಂದರೆ ಅಜ್ಞಾನಿಯಾದ ಕಾರಣ ಅವರಲ್ಲಿ ಆ ಉತ್ಸಾಹವಿರುವುದಿಲ್ಲ. ಅಲ್ಲಾಹನ ಕುರಿತು ಸರಿಯಾದ ಭಾವನೆಗಳಿಲ್ಲದ ಕಾರಣ ಆ ಉತ್ಸಹ ಉಂಟಾಗುವುದಿಲ್ಲ. ಅವನ ರೂಪವು ಮುಂದೆ ಬರುವುದಿಲ್ಲ. ಅವನ ಉಪಕಾರಗಳ ಭಾವನೆಗಳು ಸಹ ಬರುವುದಿಲ್ಲ. ಅಲ್ಲಾಹನ ಪಾಲನೆ ಪೋಷಣೆಗಳ ಬಗ್ಗೆ ಮನುಷ್ಯನು ಯೋಚಿಸುವುದಿಲ್ಲ ಎಂದ ಮೇಲೆ ಅವನಲ್ಲಿ ಉತ್ಸಾಹ ಉಂಟಾಗಲು ಸಾಧ್ಯವಾಗುವುದಿಲ್ಲ. ಹೇಳಿದರು. ಅಲ್ಲಾಹನ ಯಥೇಚ್ಛ ಉಪಕಾರಗಳು ಹೃದಯದಲ್ಲಿ ಬಂದಾಗ ಯಾವ ಭಾವನೆಗಳು ಬರಲು ಸಾಧ್ಯ. ಓರ್ವ ಔದಾರ್ಯವಂತನ ಔದಾರ್ಯಗಳನ್ನು ನೆನೆಯುವುದರಿಂದ ಉಂಟಾಗುವ ರೀತಿಯಲ್ಲಿ ಭಾವನೆಗಳು ಬರಲು ಸಾಧ್ಯವಾಗುವುದಿಲ್ಲ. ಬದಲು ಕೇವಲ ಒಂದು ಸಾಧಾರಣ ರೀತಿಯಲ್ಲಿ ಅಲ್ಲಾಹನ ಸೃಷ್ಟಿಯ ಹಕ್ಕನ್ನು ಒಪ್ಪಿಕೊಂಡಿರುತ್ತಾರೆ. ಇಂತಹ ಜನರು ಸಾಮಾನ್ಯ ರೂಪದಲ್ಲಿ ಅಲ್ಲಾಹನ ಸೃಷ್ಟಿಭಾವವನ್ನು ಹೊಂದಿರುತ್ತಾರೆ. ಹೌದು ಅಲ್ಲಾಹನು ಸೃಷ್ಟಿಕರ್ತನು, ಅವನು ನಮಗೆ ಸೃಷ್ಟಿಸಿದ್ದಾನೆ, ಆದರೆ ಅದರ ಆಳವಾದ ಜ್ಞಾನ ಅವರಿಗೆ ಇರುವುದಿಲ್ಲ. ಅಲ್ಲಾಹನ ಅನುಗ್ರಹಗಳ ಪೂರ್ಣರೂಪ ಒಬ್ಬ ತೀಕ್ಷ್ಣ ದೃಷ್ಟಿಯುಳ್ಳವನ ರೀತಿಯಲ್ಲಿ ಅನುಭವಿಸುವುದಿಲ್ಲ. ಅಲ್ಲಾಹನ ಸೃಷ್ಟಿಯ ಹಕ್ಕನ್ನು ನಮ್ಮಿಂದ ಯಾವ ಕರ್ತವ್ಯವನ್ನು ಬಯಸುತ್ತದೆ. ಅದು ಅವರು ಗ್ರಹಿಸುವುದಿಲ್ಲ. ಏಕೆಂದರೆ ಲೌಕಿಕ ಮೋಹದ ಧೂಳು ನಿಜವಾದ ದೃಶ್ಯ ನೋಡುವುದರಿಂದ ತಡೆದಿರುತ್ತದೆ. ಲೌಕಿಕ ಸಾಮಾಗ್ರಿಗಳ ಧೂಳು ಅವರ ಮೇಲೆ ಬಿದ್ದಿರುತ್ತದೆ. ಆದ್ದರಿಂದ ಅಲ್ಲಾಹನ ನಿಜವಾದ ರೂಪ ಅವರಿಗೆ ಕಾಣಿಸುವುದಿಲ್ಲ. ಆದ್ದರಿಂದ ಒಬ್ಬ ನಿಷ್ಠಾವಂತನು ಕಾಣುವಂತಹ ಭಾಗ್ಯ ಇವರಿಗೆ ಲಭಿಸುವುದಿಲ್ಲ. ಆ ನಿಜವಾದ ಅನುಗ್ರಹದಾತದ ಸೌಂದರ್ಯ ಕಾಣಲಾರರು. ಏಕೆಂದರೆ ಅವರ ಅಲ್ಪ ಜ್ಞಾನ, ಆಧ್ಯಾತ್ಮಿಕತೆ ಲೌಕಿಕತೆಯಿಂದ ಕೂಡಿರುತ್ತದೆ. ಅವರಿಗೆ ಅಲ್ಲಾಹನ ಪ್ರತಿ ತೀರ ಅಲ್ಲಜ್ಞಾನವಿರುತ್ತದೆ. ಆದ್ದರಿಂದ ಮನಸ್ಸಾದಾಗ ನಮಾಝ್ ನಿರ್ವಹಿಸುತ್ತಾರೆ. ಇಲ್ಲದಿದ್ದರೆ ಬಿಟ್ಟುಬಿಡುತ್ತಾರೆ. ಬೇಕಾದಾಗ ಹಕ್ಕು ಪಾಲಿಸುತ್ತಾರೆ. ಬೇಡವಾದಾಗ ಬಿಡುತ್ತಾರೆ. ಅದರಲ್ಲಿ ಲೌಕಿಕತೆ ಸೇರಿರುತ್ತದೆ. ಲೌಕಿಕ ವಸ್ತುಗಳು, ಲೌಕಿಕ ಕಾರಣಗಳು, ಲೌಕಿಕ ಮನೋಕಾಮನೆಗಳು, ಇದರಲ್ಲಿ ಸೇರಿರುವ ಕಾರಣ ಅವರಿಗೆ ಅಲ್ಲಾಹನ ರೂಪ ಸರಿಯಾದ ರೀತಿಯಲ್ಲಿ ಕಾಣಲು ಸಾಧ್ಯವಾಗುವುದಿಲ್ಲ. ಇದೇ ಕಾರಣದಿಂದ ಅವರು ಅಲ್ಲಾಹನ ಅನುಗ್ರಹವನ್ನು ಕಾಣುವುದಿಲ್ಲ. ಸ್ವಯಂ ಕಡೆ ಗಮನಹರಿಸುವುದಿಲ್ಲ. ಅವನ ಅನುಗ್ರಹಗಳು ಲೆಕ್ಕಿಸಬೇಕಾದ ರೀತಿಯಲ್ಲಿ ಲೆಕ್ಕಿಸುವುದಿಲ್ಲ. ಒಂದು ಅಸ್ಪಷ್ಟ ರೀತಿಯ ದ್ವಂದ್ವ ಅವರ ಮೇಲೆ ಆವರಿಸಿರುತ್ತದೆ. ಆದ್ದರಿಂದ ನಿಜವಾದ ರೂಪದಲ್ಲಿ ಅವರಿಗೆ ಅಲ್ಲಾಹನ ರೂಪ ಕಾಣದು. ಕಾರಣವೇನೆಂದರೆ ಅವರು ತಮ್ಮ ಶ್ರಮದ ಮೇಲೆ ಮತ್ತು ತಮ್ಮ ಸಾಮಾಗ್ರಿಗಳ ಮೇಲೆ ಭರವಸೆ ಹೊಂದಿರುತ್ತಾರೆ. ಕೆಲವರು ಬೂಟಾಟಿಕೆ ರೀತಿಯಲ್ಲಿ ಅಲ್ಲಾಹನ ಸೃಷ್ಟಿಯ ಹಕ್ಕನ್ನು ಮತ್ತು ಅನ್ನದಾತನ ಹಕ್ಕನ್ನು ಒಪ್ಪಿರುತ್ತಾರೆ. ಸ್ಪಷ್ಟವಾದ ಜ್ಞಾನ ಅವರು ಹೊಂದಿರುವುದಿಲ್ಲ. ಅವರ ಕಾರ್ಯಗಳ ಮೇಲೆಯೇ ಅವರಿಗೆ ಭರವಸೆಯಿರುತ್ತದೆ. ನಮ್ಮಿಂದಲೇ ಈ ಕಾರ್ಯಗಳೆಲ್ಲ ಆಗಿವೆ ಮತ್ತು ಅದರ ಜೊತೆ ಜೊತೆಯಲ್ಲಿ ಧರ್ಮದ ವಾತಾವರದಲ್ಲಿರುವ ಕಾರಣ ಧರ್ಮದ ಒಂದಿಷ್ಟು ಪ್ರಭಾವವು ಇರುತ್ತದೆ. ಅಲ್ಲಾಹನು ನಮ್ಮ ಸೃಷ್ಟಿಕರ್ತ, ಅಲ್ಲಾಹನು ನಮಗೆ ಆಹಾರ ನೀಡಿರುವನು. ನಮಗೆ ಪಾಲನೆ ಪೋಷಣೆಯ ಸಾಧನೆಗಳು ನೀಡಿದನು. ಅದು ಸಹ ಮನಸ್ಸಿನಲ್ಲಿ ಭಾವನೆಗಳು ಇರುತ್ತವೆ. ಆದರೆ ಮಿಶ್ರ ರೀತಿಯಲ್ಲಿ. ಈ ಮಿಶ್ರಣ ಸ್ಥಿತಿಯಿಂದಾಗಿ ಅವರು ನಿಜವಾದ ರೀತಿಯಲ್ಲಿ ಅಲ್ಲಾಹನ ರೂಪ ಕಾಣಲು ಸಾಧ್ಯವಾಗುವುದಿಲ್ಲ. ಅಲ್ಲಾಹನು ಮನುಷ್ಯನ ಸಾಮರ್ಥ್ಯಕ್ಕಿಂತ ಹೆಚ್ಚು ಭಾರ ಹಾಕಲು ಇಚ್ಛಿಸುವುದಿಲ್ಲ. ಆದ್ದರಿಂದ ಅವರು ಈ ಸ್ಥಿತಿಯಲ್ಲಿ ಇರುವವರೆಗೆ ಅವನ ಹಕ್ಕುಗಳ ಕುರಿತು ಕೃತಜ್ಞತೆ ಭಾವ ಬಯಸುತ್ತಾನೆ. ವಚನ ಇನ್‌ಶಾಅಲ್ಲಾಹ್ ಮಮಿಮೂರು ಬಿಲ್ ಅದಲಿ ಎಂದರೆ ಅವರ ಸಾಮರ್ಥ್ಯಕ್ಕನುಗುಣವಾಗಿ ಅದಲ್ ಬಯಸುತ್ತಾನೆ. ಅಲ್ಲಾಹನ ಪರಮದಯವಂತಿಕೆ ಇಲ್ಲಿ ಕಾರ್ಯ ಪ್ರವೃತ್ತರಾಗಿರುತ್ತಾರೆ. ಅಲ್ಲಾಹನನ್ನು ಪೂರ್ಣರೀತಿಯಲ್ಲಿ ಗ್ರಹಿಸದವರ ಮೇಲೂ

ಅಲ್ಲಾಹನು ಕೃಪೆ ತೋರುತ್ತಾನೆ. ಅವರ ಈ ಸ್ಥಿತಿಯನ್ನು ಸಹ ಸ್ವೀಕರಿಸುತ್ತಾನೆ. ಇದು ಅದಲ್ ಆಗಿದೆ. ಇದೊಂದು ಮೂಲ ವಸ್ತುವಾಗಿದೆ. ಒಬ್ಬ ಮುಸಲ್ಮಾನನ ಇದು ಕನಿಷ್ಠ ಮಟ್ಟವಾಗಿದೆ. ಆದರೆ ಅದಕ್ಕಿಂತ ಮಿಗಿಲಾಗಿರುವುದು ಮನುಷ್ಯನ ದೇವಜ್ಞಾನವಾಗಿದೆ. ಅದೇನೆಂದರೆ ನಾವು ಈಗಾಗಲೇ ವಿವಿಸಿರುತ್ತೇವೆ. ಮನುಷ್ಯನ ದೃಷ್ಟಿ ಲೌಕಿಕತೆಯಿಂದ ಮುಕ್ತನಾಗಿ, ಪವಿತ್ರಗೊಂಡು ಅಲ್ಲಾಹನ ಅನುಗ್ರಹ ಮತ್ತು ಅವರ ವರದಾನಗಳನ್ನು ಅನುಭವಿಸುತ್ತಾನೆ. ಕೇವಲ ಈ ಲೌಕಿಕ ಸಾಮಗ್ರಿಗಳ ಮೇಲೆ ಭರವಸೆ ಹೊಂದಿರುವುದಿಲ್ಲ. ಬದಲು ಅಲ್ಲಾಹನ ಉಪಕಾರಗಳನ್ನು ಕಾಣುತ್ತಾನೆ. ಇದರಿಂದ ಮನುಷ್ಯನು ಮುಂದಿನ ಹೆಜ್ಜೆಗೆ ತಲುಪುತ್ತಾನೆ. ಪರಿಪೂರ್ಣ ರೀತಿಯಲ್ಲಿ ಅಲ್ಲಾಹನ ಮೇಲೆ ಭರವಸೆ ಹೊಂದುತ್ತಾನೆ. ಅವನ ಜ್ಞಾನ ಉಂಟಾಗುತ್ತದೆ. ಈ ಪದವಿಯಲ್ಲಿ ಮನುಷ್ಯನು ಲೌಕಿಕ ಸಾಮಗ್ರಿಗಳ ಮೋಹದಿಂದ ಹೊರಗೆ ಬರುತ್ತಾನೆ. ಲೌಕಿಕ ವಸ್ತುಗಳ ಮೇಲೆ ಭರವಸೆ ಇರುವುದಿಲ್ಲ. ಬದಲು ಅಲ್ಲಾಹನ ಮೇಲೆ ಪರಿಪೂರ್ಣ ಭರವಸೆ ಹೊಂದುತ್ತಾನೆ. ಹೀಗೆ ಉದಾಹರಣೆಗೆ ನನ್ನ ಶ್ರಮದಿಂದಲೇ ನನ್ನ ಬೆಳೆಗಳು ಬೆಳೆದವು. ಅಥವಾ ನನ್ನ ಪ್ರಯತ್ನದಿಂದಲೇ ಯಶಸ್ಸು ದೊರೆಯಿತು ಅಥವಾ ಒಬ್ಬನ ದಯೆಯಿಂದ ನನ್ನ ಈ ಕೆಲಸವಾಯಿತು ಮತ್ತು ಒಬ್ಬನ ಕಾವಲುಗಾರಿಕೆಯಿಂದಾಗಿ ನಾನು ವಿನಾಶದಿಂದ ತಪ್ಪಿಸಿಕೊಳ್ಳುವಂತಾಯಿತು. ಇಂತಹ ಮಾತುಗಳೆಲ್ಲ ತುಚ್ಛವಾಗಿ ಮತ್ತು ಮಿಥ್ಯವಾಗಿ ಗೋಚರಿಸತೊಡಗುತ್ತವೆ. ತಮ್ಮ ಪ್ರಯತ್ನಗಳ ಮೇಲಾಗಲಿ ತಮ್ಮ ಯಾವುದೇ ಗುಣದಿಂದಾಗಲಿ ಅಥವಾ ಇನ್ನೊಬ್ಬರ ಸಹಾಯದಿಂದಾಗಲಿ ನನ್ನ ಕೆಲಸಗಳಾದವು ಎಂಬ ದೇವನ ಶಕ್ತಿ ಮತ್ತು ಒಬ್ಬನೇ ನಿಜವಾದ ಉಪಕಾರಿ ಮತ್ತು ಒಂದೇ ಹಸ್ತ ಕಂಡುಬರುತ್ತದೆ. ಆಗ ಮನುಷ್ಯನು ಒಂದು ಸ್ವಚ್ಛವಾದ ದೃಷ್ಟಿಯಿಂದ ಲವಲೇಶ ಮಾತ್ರ ಶಿರ್ಕ್ ಅಲ್ಲದೇ, ಬಹುದೇವತ್ವದ ಧೂಳಿನಿಂದ ಹೊರತಾಗಿ ದೇವನ ಅನುಗ್ರಹಗಳನ್ನು ಕಾಣುತ್ತಾನೆ.

ಅಲ್ಲಾಹನು ಈ ರೀತಿ ಕಾಣಿಸಿಕೊಂಡಾಗ ಮನುಷ್ಯನು ಅಲ್ಲಾಹನ ಅನುಗ್ರಹಗಳನ್ನು ಕಾಣುತ್ತಾನೆ. ಈ ಕಾಣುವಿಕೆ ಎಷ್ಟೊಂದು ಸ್ವಚ್ಛ ಮತ್ತು ದೃಢವಾಗಿರುತ್ತದೆ ಎಂದರೆ, ಇಂತಹ ದಯವಂತ ಪ್ರಭುವಿನ ಆರಾಧನೆ ಮಾಡುವ ಸಮಯ ಅವನನ್ನು ಪ್ರತ್ಯಕ್ಷವಾಗಿ ಭಾವಿಸಿ ಆರಾಧಿಸುತ್ತಾನೆ. ಈಗ ಮನುಷ್ಯನು ಆರಾಧಿಸುತ್ತಿರಲಿ, ನಮಾಝ್ ನಿರ್ವಹಿಸುತ್ತಿರಲಿ, ಅಲ್ಲಾಹನು ತನ್ನ ಮುಂದೆ ಹಾಜರಿದ್ದಾನೆ ಎಂದು ಭಾವಿಸುತ್ತಾನೆ. ಈ ಆರಾಧನೆಯ ಹೆಸರು ಪವಿತ್ರ ಖುರ್‌ಆನ್‌ನಲ್ಲಿ "ಇಹ್‌ಸಾನ್" ಎಂದಾಗಿದೆ. ಸಾಷ್ಟಾಂಗ ಎರಗುವುದೆಂದರೆ ಅಲ್ಲಾಹನನ್ನು ಪ್ರತ್ಯಕ್ಷ ಕಾಣುವಂತಾಗುತ್ತದೆ. ಈ ವರ್ತನೆಯನ್ನು ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಇಹ್‌ಸಾನ್ ಎಂದು ಕರೆಯುತ್ತಾನೆ ಸಹೀ ಬುಖಾರಿ ಮತ್ತು ಮುಸ್ಲಿಂ ಹದೀಸಿನಲ್ಲಿ ಸ್ವಯಂ ಹಝ್ರತ್ ಪೈಗಂಬರ್(ಸ) "ಇಹಸಾನ್" ಎಂಬ ಪದಕ್ಕೆ ಇದೇ ಅರ್ಥವನ್ನು ನೀಡಿದ್ದಾರೆ.

ಮುಂದೆವರೆಯುತ್ತಾ ಹೇಳುತ್ತಾರೆ. ಈ ಪದವಿಯ ನಂತರ ಇನ್ನೊಂದು ಪದವಿ ಇದೆ. ಅದರ ಹೆಸರು ಈತಾಯಿದಿಲ್‌ಖುರ್‌ಬಾ ಎಂದಾಗಿದೆ. ಅದರ ವ್ಯಾಖ್ಯಾನ ಹೀಗಿದೆ. ಮನುಷ್ಯನು ಒಂದು ದೀರ್ಘ ಅವಧಿಯವರೆಗೆ ಲೌಕಿಕತೆ ಹೊರತಾಗಿ ಅಲ್ಲಾಹನ ಅನುಗ್ರಹಗಳನ್ನು ಕಾಣುವಂತಾದರೆ, ಅಲ್ಲಾಹನ ವರದಾನಗಳನ್ನು ಲೌಕಿಕತೆ ಸಾಮಗ್ರಿಗಳ ಹಂಗಿಲ್ಲದೆ ಕಾಣುವಂತಾದರೆ, ಯಾರ ಸಹಭಾಗಿತ್ವವಲ್ಲದೇ ಕಾಣುವಂತಾದರೆ, ಕೇವಲ ಮತ್ತು ಕೇವಲ ಅಲ್ಲಾಹನ ಮೇಲೆ ಭರವಸೆಯಿದ್ದರೆ, ಅವನಿಗೆ ಉಪಸ್ಥಿತ ಮತ್ತು ಪ್ರತ್ಯಕ್ಷ ಕರುಣೆಗಳು ಎಂದು ಭಾವಿಸಿ ಅವನನ್ನು ಆರಾಧಿಸಿದರೆ, ಈ ಭಾವನೆ ಮತ್ತು ಈ ಧ್ಯಾನದ ಅಂತಿಮ ಪರಿಣಾಮವೇನಾಗುವುದೆಂದರೆ ಮೊಹಬ್ಬತೇ ಝಾತಿ (ಆತ್ಮೀಯ ಪ್ರೇಮ) ಉಂಟಾಗುವುದು. ಅಲ್ಲಾಹನೊಂದಿಗೆ ಒಂದು ಆತ್ಮೀಯ ಪ್ರೇಮ ಉಂಟಾಗುವುದು ಯಾವ ಸ್ವಾರ್ಥವು ಇರುವುದಿಲ್ಲ ಯಾರೊಂದಿಗೂ ಬೇಡುವ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ದೇವನೊಂದಿಗೆ ಒಂದು ಆತ್ಮೀಯ ಪ್ರೇಮ ಸಂಬಂದ ಉಂಟಾಗುತ್ತದೆ. ಸತತವಾಗಿ ಅವನ ದಯೇ ಅನುಭವಿಸಿದ ಕಾರಣ ಅವನಿಗೆ ಸಮರ್ಪಿತವಾಗಿರುತ್ತದೆ. ನಿಧಾನವಾಗಿ ಅವನ ಹೃದಯ ಆತ್ಮೀಯ ಪ್ರೇಮದಿಂದ ತುಂಬಿ ಹೋಗುತ್ತದೆ. ಸತತವಾಗಿ ಅವನ ಅನುಗ್ರಹ ಅನುಭವಿಸಿದ ವ್ಯಕ್ತಿಯೊಬ್ಬನಿಗೆ ದೇವನ ಜ್ಞಾನ ಲಭಿಸುತ್ತದೆ. ಅದರಿಂದ ಅಲ್ಲಾಹನೊಂದಿಗೆ ವೈಯಕ್ತಿಕ ಪ್ರೇಮ ಉಂಟಾಗುತ್ತದೆ. ಏಕೆಂದರೆ ಸತತವಾಗಿ ಸಂಬಂಧ ಹೊಂದಿದ ಪರಿಣಾಮವಾಗಿ ಹೃದಯ ಪ್ರೇಮದಿಂದ ತುಂಬಿರುವುದು ತತ್ವಧಾರಿತ ಮಾತೇ ಆಗಿದೆ. ಅವನ ಅಗಣಿತ ಉಪಕಾರಗಳು ಅವನ ಉಪಕಾರಗಳ ನಿಮಿತ್ತ ಆರಾಧನೆ ಮಾಡುವುದಿಲ್ಲ. ಬದಲು ಅವನ ವೈಯಕ್ತಿಕ ಪ್ರೇಮ ಅವನ ಹೃದಯದಲ್ಲಿ ಸ್ಥಾಪಿತವಾಗುತ್ತದೆ. ಮೊದ ಮೊದಲು ಬೇಡುವ ಉದ್ದೇಶದಿಂದ ಆರಾಧನೆ, ಮತ್ತು ದೇವನನ್ನು ಸರ್ವಸ್ವ ಎಂದು ಮನವರಿಕೆ ಹೊಂದಿ ಆರಾಧನೆ, ಇಹ್‌ಸಾನ್‌ನ ರೂಪಧಾರಣೆಯಾಯಿತು ಈಗ ಏನಾದರೂ ಬೇಡಲು ಆರಾಧನೆ ಮಾಡುತ್ತಿಲ್ಲ. ಬದಲು ದೇವನೊಂದಿಗೆ ವೈಯಕ್ತಿಕ ಪ್ರೇಮ ಉಂಟಾದ ಕಾರಣ ಅಲ್ಲಾಹನ ಸ್ಮರಣೆ ಮಾಡುತ್ತಾನೆ. ಈ ಕಾರಣದಿಂದ ಅವನು ಅಲ್ಲಾಹನ ಆರಾಧನೆ ಮಾಡುತ್ತಾನೆ. ಒಂದು ಮಗು ತನ್ನ ತಾಯಿಯ ಜೊತೆ ವೈಯಕ್ತಿಕ ಪ್ರೇಮ ಹೊಂದಿದಂತೆ. ಈ ಹಂತದಲ್ಲಿ ಅವನು ಆರಾಧನೆಯ ಸಮಯ ಕೇವಲ ದೇವನನ್ನು ನೋಡುವುದಷ್ಟೇ ಅಲ್ಲ. ಬದಲು ನೋಡಿ ಸತ್ಯಪ್ರೇಮಿಯ ರೀತಿ ಸಂತೋಷ ಅನುಭವಿಸುತ್ತಾನೆ. ಎಲ್ಲ ಐಹಿಕ ಇಚ್ಛೆಗಳನ್ನು ತ್ಯಜಿಸಿ ಅವನೊಳಗೆ ವೈಯಕ್ತಿಕ ಪ್ರೇಮ ಹುಟ್ಟುತ್ತದೆ. ಈ ಹಂತವನ್ನು ಅಲ್ಲಾಹನು ಇತಾಯಿದಲ್ ಖುರಬ ಎಂಬುದಾಗಿ ಕರೆದಿರುತ್ತಾನೆ. ಈ ಪೈಕಿಯೇ ಈ ವಚನದಲ್ಲಿ ಸಂಕೇತಿಸಿರುವನು. **ಫಝ್‌ಕುರುಲ್ಲಾಹ ಕಝಿಕ್ರಿಕುಮ್ ಆಬಾಅಕುಮ್ ಔ ಅಶದ್ದ ಝಿಕ್ರನ್** (ಅಲ್‌ಬುಕರ: 201) ಆದ್ದರಿಂದ ನೀವು ಅಲ್ಲಾಹನನ್ನು ನಿಮ್ಮ ಹೆತ್ತವರನ್ನು ಸ್ಮರಿಸಿದಂತೆ ಸ್ಮರಿಸಿರಿ. ಬದಲು ಅದಕ್ಕಿಂತ ಮಿಗಿಲಾಗಿ ಸ್ಮರಿಸಿರಿ. ಅಂದಹಾಗೆ ಇದು ಅಲ್ಲಾಹನಿಗೋಸ್ಕರ ಆತ್ಮೀಯ ಪ್ರೇಮದ ಸ್ಥಾನವಾಗಿದೆ.

ಹಝ್ರತ್ ಮಸೀಹ್ ಮೌಊದ್ (ಅ) ಹೇಳುತ್ತಾರೆ. ಒಟ್ಟಿನಲ್ಲಿ ಈ ವಚನ **'ಇನ್ನಲ್ಲಾಹ ಯಾಅ್‌ಮುರು ಬಿಲ್ ಅದ್ಲಿ ವಲ್ ಇಹ್ಸಾನಿ ವ ಈತಾಯಿಝಿಲ್‌ಖುರ್‌ಬಾ'** (ಅನ್ನಹಲ್–91) ಒಟ್ಟಿನಲ್ಲಿ ತಫ್ಸೀರ್ (ವ್ಯಾಖ್ಯಾನ) ವಾಗಿದೆ. ಇದರಲ್ಲಿ ಅಲ್ಲಾಹನು ಮೂರು ಹಂತಗಳ ಮನುಷ್ಯನ ದೇವಜ್ಞಾನದ ಪ್ರತಿ ವಿವರಿಸಿರುತ್ತಾನೆ. ಮೂರನೇ ಪದವಿಯನ್ನು ಮೊಹಬ್ಬತೆ ಝಾತಿ (ಆತ್ಮೀಯ ಪ್ರೇಮ) ಪದವಿಯಂದು ಹೇಳಿರುವನು ಇದು ಎಲ್ಲ ಸ್ವಾರ್ಥ ಉದ್ದೇಶಗಳು ಸುಟ್ಟು ಹೋಗುವಂತಹ ಪದವಿಯಾಗಿದೆ. ಈ ಸ್ಥಿತಿಯಲ್ಲಿ ಒಂದು ಬಾಟಲಿ ಸುಗಂಧದಿಂದ ತುಂಬಿರುವ ರೀತಿಯಲ್ಲಿ ಹೃದಯವು ಅಲ್ಲಹನ ಪ್ರೇಮದಿಂದ ತುಮುಬುತ್ತದೆ. ಇದೇ ಪದವಿಯ ಕಡೆಗೆ ಈ ವಚನ ಸೂಚನೆ ನೀಡುತ್ತದೆ. **ವಮಿನನ್ನಾಸಿ ಮೈಂಯಶ್ರಿ ನಫ್ಸಹುಬ್‌ತಿಗ್ಹಾಅ ಮರ್‌ಝಾತಿಲ್ಲಾಹಿ ವಲ್ಲಾಹು ರೂಫುನ್ ಬಿಲ್ ಇಬಾದ್** (ಅಲ್ ಬಖರ–208) ಎಂದರೆ ಸತ್ಯವಿಶ್ವಾಸಿಗಳಲಿ ಕೆಲವರು ತಮ್ಮ ಜೀವಗಳನ್ನು ದೇವನ ಸಂಪ್ರೀತಿಗೊಳಿಸಲು ಮಾರಾಟ ಮಾಡುತ್ತಾರೆ. ಅಲ್ಲಾಹನು ಅಂತಹವರ ಮೇಲೆ ಕೃಪೆ ಹೇಳುತ್ತಾನೆ. ಮತ್ತು ಹೇಳಿದನು. **ಬಲಾ ಮನ್ ಅಸ್ಲಮ ವಜ್‌ಹಹೂ ಲಿಲ್ಲಾಹಿ ವ ಹುವ ಮುಹ್ಸಿನುನ್ ಫಲಹೂ ಅಜ್‌ರುಹೂ ಇಂದ ರಬ್ಬಿಹೀ ವಲಾ ಖೌಫುನ್ ಅಲೈಹಿಮ್ ವಲಾಹುಮ್ ಯಹ್‌ಝನೂನ್** (ಅಲ್ ಬಖರ: 13) ಎಂದರೆ ಅಲ್ಲಾಹನಿಗೋಸ್ಕರ ತಮ್ಮ ಅಸ್ತಿತ್ವವನ್ನೇ ಸಮರ್ಪಿಸಿದವರು ಮೋಕ್ಷ ಪಡೆದವರಾಗಿದ್ದಾರೆ. ಅವರು ಅವನ ಅನುಗ್ರಹಗಳನ್ನು ಅನುಭವಿಸುತ್ತಾ ಅವನನ್ನು ಸಾಕ್ಷಾತ್ ನೋಡುವ ರೀತಿಯಲ್ಲಿ ಆರಾಧನೆ ಮಾಡುತ್ತಾರೆ. ಹಾಗೆ ಇಂತಹ ಜನರು ಅಲ್ಲಾಹನಿಂದ ಪ್ರತಿಫಲ ಪಡೆಯುತ್ತಾರೆ. ಭಯದಿಂದಲೂ ಅಲ್ಲ. ಏನೂ ಪಡೆಯದಿದ್ದರೂ ದು:ಖಿಸುವುದಿಲ್ಲ. ಎಂದರೆ ಅವರ ಏಕಮಾತ್ರ ಉದ್ದೇಶ ಅಲ್ಲಾಹನು ಮತ್ತು ಅಲ್ಲಾಹನ ಪ್ರೇಮ ಆಗಿರುತ್ತದೆ. ಅಲ್ಲಹನ ಕಡೆಯಿಂದ ಅವನ ಅನುಗ್ರಹಗಳೇ ಅವರ ಪ್ರತಿಫಲ ಆಗಿರುತ್ತದೆ. ಮತ್ತೊಂದು ಸ್ಥಳದಲ್ಲಿ ಹೇಳಿದನು. **ಯುತ್‌ಈಮೂನತ್ತಆಮ ಅಲಾ ಹುಬ್ಬಿಹೀ ಮಿಸ್ಕೀನವ್ವ ಯನೀಮವ್ವ ಅಸೀರ– ಇನ್ನಮಾ ನುತ್‌ಇಮುಕುಮ್ ಲಿವಜ್ಹಿಲ್ಲಾಹಿ ಲಾ ನುರೀದು ಮಿನ್‌ಕುಮ್ ಜಝಾ ಅವ್ವ ಲಾ ಶುಕೂರ** (ಅದ್ದಹರ್–9,10) ಎಂದರೆ ಅವನ ಸಂಪ್ರೀತಿಗೋಸ್ಕರ ಅವರು ಬಡವರಿಗೂ ಅನಾಥರಿಗೂ ಕೈದಿಗಳಿಗೂ ಅನ್ನಧಾನ ಮಾಡುತ್ತಾರೆ. ಅವರು ಹೀಗೆ ಹೇಳುತ್ತಾರೆ. ಅಲ್ಲಾಹನ ಸಂತೃಪ್ತಿಗೋಸ್ಕರ ಮಾತ್ರ ನಾವು ನಿಮಗೆ ಆಹಾರ ನೀಡುತ್ತೇವೆ. ನಿಮ್ಮಿಂದ ಪ್ರತಿಫಲವನ್ನಾಗಲಿ ಕೃತಜ್ಞತೆಯನ್ನಾಗಲೀ ನಾವು ಬಯಸುವುದಿಲ್ಲ. ನಮ್ಮ ಏಕಮಾತ್ರ ಉದ್ದೇಶ ಅಲ್ಲಾಹನ ಸಂಪ್ರೀತಿ ಗಳಿಸುವುದಾಗಿದೆ. ಅಲ್ಲಾಹನು ನಮ್ಮ ಮೇಲೆ ಇನ್ನಷ್ಟು ಸ್ಪಷ್ಟಗೊಳ್ಳಲಿ. ಈ ಯೋಚಿಸಬೇಕಾಗಿದೆ. ಇವೆಲ್ಲಾ ವಚನಗಳಿಂದ ಎಷ್ಟೊಂದು ಸ್ಪಷ್ಟವಾಗುತ್ತದೆ ಮತ್ತು ತಿಳಿದುಬರುತ್ತದೆ. ಪವಿತ್ರ ಖುರ್‌ಆನ್ ಅಲ್ಲಾಹನ ಆರಾಧನೆ ಮತ್ತು ಸತ್ಕರ್ಮಗಳಂತಹ ಉನ್ನತ ದರ್ಜೆಯ ಉದ್ದೇಶ ದೇವಪ್ರೇಮ ಮತ್ತು ಅವನ ಸಂಪ್ರೀತಿಯೇ ಆಗಿರುತ್ತದೆ. (ನೂರುಲ್ ಖುರ್‌ಆನ್–2, ರೂಹಾನಿ ಖಝಾಈನ್, ಸಂಪುಟ–9, ಪುಟ 437–441)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಲ್ಲಾಹನು ನಿಮ್ಮಿಂದ ಏನನ್ನು ಬಯಸುತ್ತಾನೆ? ಕಿಶ್ತನೂಹ್‌ನಲ್ಲಿ ಉಪದೇಶ ನೀಡುತ್ತಾ ವರು (ಅ) ಹೇಳಿದರು. ಅದೇನೆಂದರೆ ನೀವು ಮಾನವರೊಂದಿಗೆ ನ್ಯಾಯದಿಂದ ವರ್ತಿಸಿರಿ. ಅದಕ್ಕಿಂತ ಮುಂದಿನ ಪದವಿಯೇನೆಂದರೆ, ನಿಮ್ಮೊಂದಿಗೆ ಯಾವುದೆ ಒಳಿತುಗಳನ್ನು ಮಾಡದವರೊಂದಿಗೂ ಒಳಿತು ಮಾಡಿರಿ. ಅದಕ್ಕೂ ಮೇಲಿನ ಪದವಿಯೇನೆಂದರೆ, ನಿಮ್ಮ ರಕ್ತಸಂಬಂಧಿಗಳೊಂದಿಗೆ ವರ್ತಿಸುವ ರೀತಿಯಲ್ಲಿ ಅಲ್ಲಾಹನ ಎಲ್ಲ ಸೃಷ್ಟಿಗಳೊಂದಿಗೂ ಸಹಾನುಭೂತಿಯಿಂದ ವರ್ತಿಸಿರಿ. ತಾಯಂದಿರು ಮಕ್ಕಳೊಂದಿಗೆ ವರ್ತಿಸುವ ರೀತಿಯಲ್ಲಿ. ಏಕೆಂದರೆ, ಔದಾರ್ಯ ಮಾಡುವವನು ಕೆಲವೊಮ್ಮೆ ತಾನು ಮಾಡಿದ ಔದಾರ್ಯವನ್ನು ಬಣ್ಣಿಸುತ್ತಾನೆ. ಆದರೆ ತಾಯಿಯು ಹಾಗೆ ಸ್ವಾಭಾವಿಕ ಆವೇಶದಿಂದ ಒಳಿತುಗಲನ್ನು ಮಾಡುವವನು ಎಂದಿಗೂ ತೋರಿಕೆಗಾಗಿ ಮಾಡುವುದಿಲ್ಲ. ಒಟ್ಟಿನಲ್ಲಿ, ತಾಯಿಯ ಹಾಗೆ ಸ್ವಾಭಾವಿಕ ಆವೇಶದಿಂದ ಮಾಡುವ ರೀತಿಯೇ ಕೊನೆಯ ಪದವಿ ಆಗಿದೆ. ಈ ವಚನದಲ್ಲಿ ಸೃಷ್ಟಿಗಳಿಗೆ ಸಂಬಂಧಿಸಿ ಅಲ್ಲದೇ ಅಲ್ಲಾಹನಿಗೆ ಸಂಬಂಧಿಸಿಯೂ ಪ್ರಸ್ತಾಪಿಸಲಾಗಿದೆ. ಅದಲ್ ಅಥವಾ ನ್ಯಾಯಪಾಲನೆ ಮಾಡುವುದೇನೆಂದರೆ, ಅವನ ಅನುಗ್ರಹಗಳನ್ನು ಅವನ ಅನುಗ್ರಹಗಳನ್ನು ನೆನಪಿಸಿಕೊಂಡು ಅವನನ್ನು ಅನುಸರಿಸುವುದಾಗಿದೆ. ಅಲ್ಲಾಹನೊಂದಿಗೆ ಇಹ್‌ಸಾನ್ ಅಥವಾ ಔದಾರ್ಯ ಮಾಡುವುದೇನೆಂದರೆ, ಅವನನ್ನು

ನೋಡುತ್ತಿದ್ದೀರಿ ಎಂಬ ರೀತಿಯಲ್ಲಿ ಅವನಲ್ಲಿ ಸದೃಢವಾದ ವಿಶ್ವಾಸವನ್ನು ಇರಿಸುವುದಾಗಿದೆ. ಅಲ್ಲಾಹನೊಂದಿಗೆ ಈತಾಯಿದ್ದುಲ್ ಖುರ್‌ಬ ಅಥವಾ ನಿಕಟ ಸಂಬಂಧಿಗಳೊಂದಿಗೆ ವರ್ತಿಸುವ ರೀತಿಯಲ್ಲಿ ವರ್ತಿಸಬೇಕು ಎಂಬುದರ ಅರ್ಥವೇನೆಂದರೆ, ಸ್ವರ್ಗವನ್ನು ಆಸೆ ಪಡದೆಯೂ ನರಕದ ಭಯದಿಂದ ಅಲ್ಲದೆಯೂ ಅವನನ್ನು ಆರಾಧಿಸುವುದಾಗಿದೆ. ಸ್ವರ್ಗ ಮತ್ತು ನರಕ ಇಲ್ಲವೆಂದಾದರೂ ದೇಶದ ಪ್ರೇಮ ಮತ್ತು ಅನುಸರಣೆಯ ಆವೇಶದಲ್ಲಿ ಯಾವುದೇ ವ್ಯತ್ಯಾಸ ಉಂಟಾಗದೇ ಇರುವುದಾಗಿದೆ. (ಕಿಶ್ತಿ ಎ ನೂಹ್, ರೂಹಾನಿ ಖಿಝಾಇನ್, ಸಂಪುಟ–19, ಪುಟ–30–31)

ಇದು ಅಲ್ಲಾಹನೊಂದಿಗೆ ಆತ್ಮೀಯ ಪ್ರೇಮವಾಗಿದೆ. ಇದು ಈ ಹಿಂದೆಯೇ ನೀಡಿದ ವಿವರಗಳು ಇದು ಕಿಶ್ತಯೇ ನೂಹ್ ನಲ್ಲಿ ನೀಡಿದ ಸಾರಾಂಶವೇ ಆಗಿದೆ.

ಸೃಷ್ಟಿಗಳ ಹಕ್ಕುಗಳ ಕುರಿತು ವ್ಯಾಖ್ಯಾನಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಲಾಹನು ನೀವು ಅದಲ್ (ನ್ಯಾಯಪಾಲನೆ) ಮಾಡಿರಿ ಎಂದು ಆದೇಶ ನೀಡಿರುವನು ಮತ್ತು ಅದಲ್‌ಗಿಂತ ಮಿಗಿಳಾಗಿ ಇಹ್‌ಸಾನ್ (ಔದಾರ್ಯ) ತೋರಿಸಿರಿ. ಇಹ್‌ಸಾನ್‌ಗಿಂತ ಮಿಗಿಲಾಗಿ ಈತಾಯಿದ್ದುಲ್ ಖುರ್‌ಬ್ ನಿಕಟ ಸಂಬಂಧಿಗಳಂತೆ ವರ್ತಿಸಿರಿ ಎಂದು ಆಜ್ಞೆ ನೀಡಿರುವನು. ಈಗ ಯೋಚಿಸಬೇಕು. ಮೂರೇ ಹಂತಗಳಿವೆ. ಮೊದಲು ಮನುಷ್ಯನು ಅದಲ್ ಮಾಡುತ್ತಾನೆ ಎಂದರೆ ಸತ್ಯತೆಯ ಎದುರಾಗಿ ಸತ್ಯವನ್ನು ಆಪೇಕ್ಷಿಸುತ್ತಾನೆ. ಮತ್ತು ಅದಕ್ಕಿಂತ ಮುಂದಿನ ಪದವಿ ಇಹ್‌ಸಾನ್ ಆಗಿದೆ. ಅದಕ್ಕಿಮತ ಮುಂದೆ ಹೋದರೆ ಇಹ್‌ಸಾನ್ ಅನ್ನು ಸಹ ಕಡೆಗಣಿಸುತ್ತಾನೆ. ಮತ್ತು ಜನರೊಡನೆ ನಿಕಟ ಸಂಬಂಧಗಳಿಗೆ ಪ್ರೀತಿಸುವಂತೆ ಪ್ರೀತಿಸುತ್ತಾನೆ. ತಾಯಿಯು ತನ್ನ ಮಗುವಿಗೆ ಪ್ರೀತಿಸಿದಂತೆ ಎಂದರೆ ಇದೊಂದು ಸ್ವಾಭಾವಿಕ ಪ್ರವೃತ್ತಿಯಾಗಿದೆ. ಇಹ್‌ಸಾನ್ ಅಲ್ಲ. (ಜಂಗೆ ಮುಖದ್ದಸ್, ರೂಹಾನಿ ಖಿಝಾಇನ್, ಸಂಪುಟ–6, ಪುಟ–127)

ಅನ್ಯಧರ್ಮಿಯರಿಗೆ ಇಸ್ಲಾಮಿನ ಅಧ್ಯಾಪನೆಯನ್ನು ತಿಳಿಸುತ್ತಾ ಈ ವಿಷಯುವನ್ನು ಕೆಲವೆಡೆ ಹಝುರತ್ ಮಸೀಹ್ ಮೌಊದ್ (ಅ) ಪ್ರಸ್ತಾಪಿಸಿರುವರು. ಅದೇ ರೀತಿಯಲ್ಲಿ ತನ್ನ ಜಮಾಅತನ್ನು ಉಪದೇಶಿಸುತ್ತಲೂ ಅದನ್ನು ವಿಶದವಾಗಿ ತಿಳಿಸಿಕೊಟ್ಟಿರುವರು. ಅಲ್ಲಾಹನ ಸೃಷ್ಟಿಯೊಡನೆ ತಮ್ಮ ನಿಕಟಸಂಬಂಧಿಗಳೊಡನೆ ವರ್ತಿಸಿದಂತೆ ವರ್ತಿಸಿರಿ. ಈ ಪದವಿ ಅತ್ಯಂತ ಶ್ರೇಷ್ಠವಾಗಿರುತ್ತದೆ. ಏಕೆಂದರೆ ಇಹ್‌ಸಾನ್‌ನಲ್ಲಿ ಒಂದು ರೀತಿಯ ಕೋರಿಕೆಯ ಭಾವ ಇರುತ್ತದೆ. ವ್ಯಕ್ತಿಯೊಬ್ಬನು ವಿಶ್ವಾಸದ್ರೋಹಿಯಾದರೆ ಅವನು ತಕ್ಷಣ ಹೇಳಿಬಿಡುತ್ತಾನೆ. ನಾನು ನಿಮ್ಮ ಮೇಲೆ ಏನೇನೆಲ್ಲ ಉಪಕಾರವನ್ನು (ಇಹ್‌ಸಾನ್) ಮಾಡಿದ್ದೇನೆ ಎಂದು. ಆದರೆ ತಾಯಿಯ ಪ್ರೇಮವು ಸ್ವಾಭಾವಿಕ ಆವೇಶದಿಂದ ಆಗಿರುತ್ತದೆ. ಅದರಲ್ಲಿ ಯಾವ ಕೋರಿಕೆಯ ಭಾವವು ಇರುವುದಿಲ್ಲ. ವ್ಯಕ್ತಿಯೊಬ್ಬನು ಒಬ್ಬನ ಮೇಲೆ ಇಹ್‌ಸಾನ್ (ಉಪಕಾರ) ಮಾಡಿದರೆ ಕೆಲವೊಮ್ಮೆ ಹಂಗಿಸಿಯೂ ಬಿಡುತ್ತಾನೆ. ಆದರೆ ತಾಯಿಯು ಮಕ್ಕಳಿಗೆ ಎಂದೂ ಹಂಗಿಸುವುದಿಲ್ಲ." ಅಷ್ಟೇ ಅಲ್ಲ. ರಾಜನೊಬ್ಬನು ತಾಯಿಯೊಬ್ಬಳಿಗೆ ಅವನ ಮಗುವನ್ನು ಕೊಲ್ಲಲು ಆದೇಶ ಮಾಡಿದರೆ, ನಾನು ಏನೂ ಕ್ರಮ ಕೈಗೊಳ್ಳುವುದಿಲ್ಲ ಎಂದು ಹೇಳಿದರೂ ಎಂದು ತಾಯಿ ಆ ಮಾತನ್ನು ಕೇಳಲು ಸಹ ಇಚ್ಛಿಸುವುದಿಲ್ಲ ಮತ್ತು ಆ ರಾಜನಿಗೆ ಬೈದುಬಿಡುವಳು. ಅವಳಿಗೆ ಅವನು ಯುವಕನಾಗುವವರೆಗೆ ನಾನು ಸತ್ತು ಹೋಗಬಹುದು ಎಂದು ತಿಳಿದಿದ್ದರು. ಅದಕ್ಕೆ ಮುಂದಾಗುವುದಿಲ್ಲ. ಮತ್ತು ತನ್ನ ಮಗುವಿನ ಪಾಲನೆ ಪೋಷಣೆ ನಿಲ್ಲಿಸುವುದಿಲ್ಲ. ಹೆಚ್ಚಿನ ಸಮಯಗಳಲ್ಲಿ ಹೆತ್ತವರಿಗೆ ವೃದ್ಧರಾದ ಸಮಯದಲ್ಲಿ ಮಕ್ಕಳಾದರೆ, ಅವರಿಗೆ ಆ ಮಕ್ಕಳಗಿಂತ ಯಾವ ಪ್ರಯೋಜನವಿರದಿದ್ದರೂ ಅವರ ಪಾಲನೆಪೋಷಣೆ ಮಾಡುತ್ತಾರೆ. ಮತ್ತು ಪ್ರೀತಿಸುತ್ತಾರೆ. ಇದೊಂದು ಸ್ವಾಭಾವಿಕ ಗುಣ ಆಗಿರುತ್ತದೆ. ಈ ಮಟ್ಟಕ್ಕೆ ತಲುಪಿದ ಪದವಿಯನ್ನು ಈತಯಿದುಲ್ ಖುರಬ ಎನ್ನಲಾಗುತ್ತದೆ. ಈ ರೀತಿಯ ಪ್ರೀತಿ ಸಂಬಂಧ ದೇವನೊಂದಿಗೆ ಇರಬೇಕಾಗಿದೆಯೇ ಹೊರತು ತನ್ನ ಸ್ಥಾನಮಾನಕ್ಕಾಗಿ ಅಲ್ಲ. (ಮಲ್ಫಾಝಾತ್, ಸಂಪುಟ–6, ಪುಟ–181, 182 ಸಂಚಿಕೆ 1984)

ಮತ್ತು ಹಝ್ರತ್ ಮಸೀಹ್ ಮೌಊದ್ (ಅ) ನುಡಿದರು. ಒಂದು ಅಲ್ಪ ಪ್ರಮಾಣದ ನ್ಯಾಯವಿರುತ್ತದೆ. ಅದೇನೆಂದರೆ, ಯಾರು ಎಷ್ಟು ಕೊಡುತ್ತಾರೆ. ನಾವು ಪ್ರತಿಯಾಗಿ ಅಷ್ಟೇ ಕೊಡುತ್ತೇವೆ ಎಂದರೆ ಇದು ನ್ಯಾಯದ ಕೀಳುಮಟ್ಟವಾಗಿದೆ. ಅದಕ್ಕಿಂತ ಉತ್ತಮ ದರ್ಜೆ ಇಹ್‌ಸಾನ್ ಆಗಿದೆ. ಇದರಲ್ಲಿ ಇಹ್‌ಸಾನ್ ಮಾಡುವವನು ತನ್ನಡೆ ದೊರೆತುದುದನ್ನು ಕೊಡುವನು ಮತ್ತು ಅದಕ್ಕಿಂತ ಹೆಚ್ಚು ಕೊಡುವುದು ಇಹ್‌ಸಾನ್ ಆಗಿದೆ. ಅದಕ್ಕಿಂತ ಶ್ರೇಷ್ಠ ಮಟ್ಟ ಈತಾಯಿದುಲ್ ಖುರ್‌ಬ ಪದವಿಯಾಗಿದೆ ಎಂದರೆ ಇತರರೊಡನೆ ತಾಯಿಯು ಹೇಗೆ ಅಪೇಕ್ಷೆಯಿಲ್ಲದೇ ಸ್ವಾಭಾವಿಕ ಆವೇಶದಿಂದ ವರ್ತಿಸುವಳು. ಅದೇ ರೀತಿಯ ವ್ಯವಹಾರ ಅವರದ್ದಾಗಿರುತ್ತದೆ. ಪವಿತ್ರ ಖುರ್‌ಆನ್‌ನಿಂದ ತಿಳಿದುಬರುತ್ತದೆ. ಸಜ್ಜನರು ಅಭಿವೃದ್ಧಿ ಪಡೆದು ಇಂತಹ ಪ್ರೇಮಭಾವವನ್ನು ಪಡೆಯುತ್ತಾರೆ. ಹೀಗೆ ಅಭಿವೃದ್ಧಿ ಪಡೆದು ಇಂತಹ ಪ್ರೇಮಕ್ಕೆ ಅರ್ಹರಾಗುತ್ತಾರೆ. ಮನುಷ್ಯನು ಸಂಕುಚಿತ ಭಾವನೆಯುಳ್ಳವನಾಗಿದ್ದಾನೆ. ಅಲ್ಲಾಹನ ಅನುಗ್ರಹದಿಂದ ಈ ಪದವಿ ದೊರೆಯುತ್ತದೆ. ಉನ್ನತವಾದ ನೈತಿಕ ಮಟ್ಟ ಇದಕ್ಕೆ ಅನಿವಾರ್ಯವಾಗಿರುತ್ತದೆ. ಹೇಳಿದರು. ಸಜ್ಜನರು ಅಭಿವೃದ್ಧಿ ಪಡೆದು ಎಷ್ಟೊಂದು ಉನ್ನತ ಪದವಿ ಪಡೆಯುತ್ತಾರೆಂದರೆ, ಅವರು ತಾಯಿ ಪ್ರೇಮಕ್ಕಿಂತ ಹೆಚ್ಚು ಇತರನ್ನು ಪ್ರೀತಿಸುತ್ತಾರೆ. (ಮಲ್ಫಝಾತ್, ಸಂಪುಟ–7, ಪುಟ–375, ಸಂಚಿಕೆ 1984)

ಸೃಷ್ಟಿಗಳ ಹಕ್ಕುಗಳನ್ನು ಪಾಲಿಸಲು ತಾಯಿಗಿಂತಲೂ ಹೆಚ್ಚು ಪ್ರೀತಿ ಮನುಷ್ಯರೊಂದಿಗೆ ಇರುತ್ತದೆ.

ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅದಲ್‌ನ ಅವಸ್ಥೆ ಏನೆಂದರೆ ಕೆಟ್ಟ ಪ್ರೇರಣೆ ನೀಡುವ ಆತ್ಮದ ಸ್ಥಿತಿಯಲ್ಲಿರುವ ಮುತ್ತಖಿಯೊಡನೆ ಸಮತೋಲನವನ್ನು ಕಾಪಾಡಲು ಆದೇಶ ನೀಡಲಾಗಿದೆ. ಈ ಆದೇಶದ ಪ್ರಕಾರ ಕೆಟ್ಟ ಪ್ರೇರಣೆ ನೀಡುವ ಆತ್ಮದ ವಿರುದ್ಧವಾಗಿ ನಡೆಯಬೇಕಾಗುವುದು. ಉದಾಹರಣೆಗೆ ಯಾವಾನಿಗಾದರೂ ಸಾಲವನ್ನು ಮರುಪಾವತಿ ಮಾಡದಿದ್ದರೆ, ಅದನ್ನು ಹೇಗಾದರೂ ಮಾಡಿ ಕೊಡದೇ ಇರಲು ಆತ್ಮ ಬಯಸುತ್ತದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಕೆಲವು ಜನರು ಈ ವಿಷಯಗಳ ಪರಿವೆ ಮಾಡುವುದಿಲ್ಲ. ತಮ್ಮ ಸಾಲವನ್ನು ತೀರಿಸುವುದರ ಬಹಳ ಕಡಿಮೆ ಗಮನಹರಿಸುವ ಕೆಲವರು ನಮ್ಮ ಜಮಾಅತಿನಲ್ಲೂ ಇರುವರು ಎಂಬುವುದನ್ನು ನನಗೆ ಬಹಳ ದುಃಖದಿಂದ ಹೇಳಬೇಕಾಗುತ್ತದೆ. ಇದು ಅದಲಿಗೆ ವಿರುದ್ಧವಾದ ಸಂಗತಿಯಾಗಿದೆ. ಅದಲ್‌ನ ಅಪೇಕ್ಷೆವೇನೆಂದರೆ ಸಾಲವನ್ನು ತೀರಿಸುವುದು ಕಡ್ಡಾಯವಾಗಿದೆ. ಏನು ಸಾಲ ಕೊಡಬೇಕಾಗಿದೆ. ಅದನ್ನು ಕೊಡತಕ್ಕದದು. ಯಾವುದೇ ನೆಪ ಒಡ್ಡಬಾರದು. ಕೆಲವರು ಸಾಲ ತೀರಿಸುವುದನ್ನೂ ಸಾರಾಸಗಟಾಗಿ ನಿರಾಕರಿಬಿಡುತ್ತಾರೆ. ಅವರಿಗೆ ತಿಳಿಯಬೇಕಾಗಿದೆ. ಅಲ್ಲಾಹನು ನಮ್ಮ ಪ್ರತಿಯೊಂದು ಕ್ರಿಯೆಯು ನೋಡುತ್ತಿದ್ದಾನೆ.

ಇನ್ನೊಂದು ಮಾತು ನಿಮಗೆ ಹೇಳಬಯಸುತ್ತೇನೆ. ಅದೇನೆಂದರೆ, ಈ ಕೊಡಕೊಳ್ಳುವ ಜಗಳಗಳು ಬೆಳೆಯಲು ಕಾರಣವೇನೆಂದರೆ ಜನರು ಅನಗತ್ಯವಾಗಿ ಇತರರ ಮೇಲೆ ಭರವಸೆ ಹೊಂದುತ್ತಾರೆ. ಅದಾಗ್ಯೂ ಅಲ್ಲಾಹನ ನಿರ್ದೇಶನವಿದೆ. ಕೊಡಕೊಳ್ಳುವ ವಿಷಯದಲ್ಲಿ ಬರೆಯಿಸಿಕೊಳ್ಳಬೇಕಾಗಿದೆ. ವ್ಯವಹಾರದಲ್ಲಿ ಅದನ್ನು ಜಾರಿ ಮಾಡಬೇಕಾಗಿದೆ. ಅದನ್ನು ಬಿಟ್ಟು, ಅವನು ನಮ್ಮ ಖಾಸಾ ಸಂಬಂಧಿಯಾಗಿದ್ದಾನೆ. ನನ್ನ ಆಪ್ತಮಿತ್ರನಾಗಿದ್ದಾನೆ. ಅದಕ್ಕೆ ನಾನು ಬರೆದಿಟ್ಟುಕೊಳ್ಳಲಿಲ್ಲ. ಇದರಿಂದ ಜಗಳಗಳು ಹುಟ್ಟಿಕೊಳ್ಳುವುವು. ಇದರಿಂದಲೇ ಕೆಟ್ಟ ಪ್ರೇರಣೆ ನೀಡು ಆಥ್ಮ ಮನುಷ್ಯನಿಗೆ ತಪ್ಪು ಮಾರ್ಗಗಳಲ್ಲಿ ಎಳೆಯುವುವು. ಒಟ್ಟಿನಲ್ಲಿ ಸತ್ಯವಿಶ್ವಾಸಿಯೊಬ್ಬನಿಗೆ ಇದರಿಂದ ದೂರವಿರಬೇಕಾಗಿದೆ ಮತ್ತು ಅದಲಿನಿಂದ ಕಾರ್ಯ ಮಾಡಬೇಕಾಗಿದೆ. ಹೇಳಿದರು. ನಿಮ್ಮಲ್ಲಿ ಪ್ರತಿಯೊಬ್ಬರು ನೆನಪಿಡಿರಿ. ಸಾಲಗಳನ್ನು ತೀರಿಸುವುದರಲ್ಲಿ ಅಸಡ್ಡೆ ತೋರಿಸಬೇಡಿರಿ. ನಮ್ಮ ಜಮಾಅತಿನಲ್ಲೂ ಇಂತಹ ಜನರಿದ್ದಾರೆ. ಅವರು ಸಾಲ ತೀರಿಸುವ ವಿಷಯದಲ್ಲಿ ಬಹಳ ಕಡಿಮೆ ಗಮನವಹಿಸಿರುತ್ತಾರೆ. ಇದು ಅದಲ್‌ಗೆ (ನ್ಯಾಯಕ್ಕೆ) ದೂರವಾದ ಮಾತಾಗಿದೆ. ಹಝ್ರತ್ ಪೈಗಂಬರ್ (ಸ) ಅಂತಹ ಜನರ ಜನಾಝಾ ನಮಾಝ್ ನಿರ್ವಹಿಸುತ್ತಿರಲಿಲ್ಲ. ಒಟ್ಟಿನಲ್ಲಿ ನಿಮ್ಮಲ್ಲಿ ಪ್ರತಿಯೊಬ್ಬರು ನೆನಪಿಡಿರಿ. ಸಾಲಗಳನ್ನು ತೀರಿಸುವುದರಲ್ಲಿ ಅಸಡ್ಡೆ ತೋರಿಸಬೇಡಿರಿ. ಎಲ್ಲ ರೀತಿಯ ಮೋಸಗಾರಿಕೆ ಮತ್ತು ಅವಿಶ್ವಾಸದ ಕೃತ್ಯಗಳಿಂದ ದೂರವಿರಬೇಕು. ಏಕೆಂದರೆ ಅದು ಅಲ್ಲಾಹನ ಆದೇಶಕ್ಕೆ ವಿರುದ್ಧವಾಗಿದೆ.

ಹಝ್ರತ್ ಮಸೀಹ್ ಮೌಊದ್ (ಅ) ಹೇಳುತ್ತಾರೆ. ಅದರ ನಂತರ ಇಹ್‌ಸಾನ್ ಪದವಿಯಾಗಿದೆ. ಯಾವ ವ್ಯಕ್ತಿ ಅದಲ್ ಬಯಸುವನು ಅವನು ಹದ್ದು ಮೀರುವುದಿಲ್ಲ. ಆಗ ಅಲ್ಲಾಹನು ಅವನಿಗೆ ಇನ್ನಷ್ಟು ಸೌಭಾಗ್ಯ ಹಾಗೂ ಶಕ್ತಿಯನ್ನು ದಯಪಾಲಿಸುವನು. ಹೀಗೆ ಅವನು ಸತ್ಕರ್ಮಗಳಲ್ಲಿ ಇನ್ನಷ್ಟು ಪ್ರಗತಿ ಪಡೆಯುವನು. ಪರಿಣಾಮವಾಗಿ ಅವನು ಅದಲ್ ಅಷ್ಟೇ ನೆಚ್ಚಿಕೊಂಡಿರುವುದಿಲ್ಲ. ಬದಲು ಇಹ್‌ಸಾನ್ ಮಟ್ಟಕ್ಕೆ ಅಭಿವೃದ್ಧಿ ಪಡೆಯುತ್ತಾನೆ. ಆದರೆ ಇಹ್‌ಸಾನ್‌ನಲ್ಲಿ ಒಂದು ದುರ್ಬಲತೆ ಇನ್ನು ಸಹ ಬಾಕಿ ಉಳಿದಿರುತ್ತದೆ. ಅದೇನೆಂದರೆ ಯಾವುದೇ ಸಂದರ್ಭದಲ್ಲಿ ತನ್ನ ಸತ್ಕರ್ಮಗಳ ಹಂಗನ್ನು ತೋರಿಸಿಬಿಡುತ್ತಾನೆ. ಉದಾಹರಣೆಗೆ ವ್ಯಕ್ತಿಯೊಬ್ಬನು ಹತ್ತು ವರ್ಷಗಳವೆಗೆ ಒಬ್ಬನಿಗೆ ರೊಟ್ಟಿ ನೀಡುತ್ತಿದ್ದರೆ, ಒಂದು ಸಂದರ್ಭದಲ್ಲಿ ಅವನು ಒಂದು ಮಾತನ್ನು ಪಾಲಿಸದಿದ್ದರೆ, ಅವನು ಹಂಗಿಸಿಬಿಡುತ್ತಾನೆ. ನೀನು ಹತ್ತು ವರ್ಷದವರೆಗೆ ನನ್ನ ರೊಟ್ಟಿಗಳ ಗುಲಾಮನಾಗಿದ್ದೆ. ಹೀಗೆ ಹಂಗಿಸಿ ಮಾಡಿದ ಸತ್ಕರ್ಮಗಳನ್ನು ವ್ಯರ್ಥಗೊಳಿಸಿಕೊಳ್ಳುತ್ತಾನೆ ಎಂದರೆ ಇಹ್‌ಸೌನ್ ಮಾಡುವವರ ಒಳಗೂ ಸಹ ಒಂದು ರೀತಿಯ ಗೌಪ್ಯವಾದ ತೋರಿಕೆ ಭಾವನೆ ಅಡಗಿರುತ್ತದೆ. ಆದರೆ ಮೂರನೆಯ ಪದವಿ ಎಲ್ಲ ರೀತಿಯ ಕಲ್ಮಶಗಳಿಂದ ಮತ್ತು ಕುಂದುಕೊರತೆಗಳಿಂದ ಮುಕ್ತವಾಗಿರುತ್ತದೆ. ಅದುಈತಾಯಿದುಲ್ ಖುರಬ್ ಪದವಿ ಆಗಿದೆ.

ಹೇಳಿದರು. ಈತಾಯಿದುಲ್‌ಖುರ್‌ಬ ಪದವಿಯು ಸ್ವಾಭಾವಿಕ ರೀತಿಯ ಪದವಿಯಾಗಿದೆ ಎಂದರೆ ಈ ಪದವಿಯಲ್ಲಿ ಮನುಷ್ಯನು ಸ್ವಾಭಾವಿಕ ಆವೇಶಗಳಿಗೆ ಒಳಗಾಗಿ ಒಳಿತುಗಳನ್ನು ಮಾಡುತ್ತಾನೆ. ಅದರ ಉದಾಹರಣೆ, ತಾಯಿಯು ಮಗುವಿಗೆ ಹಾಲುಣಿಸುವ ಮತ್ತು ಪೋಷಿಸುವ ರೀತಿಯದ್ದಾಗಿದೆ. ಅವಳು ಎಂದೂ ಯೋಚಿಸಿಯೂ ಇರುವುದಿಲ್ಲ . ಅವನು ದೊಡ್ಡವನಾಗಿ ಸಂಪಾದನೆ

ಮಾಡುವನು. ತನ್ನ ಸೇವೆಯನ್ನು ಮಾಡುವನು. ಅಷ್ಟೇ ಅಲ್ಲ ರಾಜನೊಬ್ಬನು ನೀನು ಮಗನಿಗೆ ಹಾಲುಣಿಸಬೇಡ ಎಂಬ ಆದೇಶ ನೀಡಿದರೆ,, ಮಗು ಸತ್ತರೂ ನಿನ್ನ ಮೇಲೆ ಯಾವ ಕ್ರಮ ಕೈಗೊಳ್ಳುವುದಿಲ್ಲ. ಈ ಆದೇಶದ ಮೇಲೂ ಅವಳು ಮಗನಿಗೆ ಹಾಲುಣಿಸುವುದನ್ನು ಬಿಡಲಾರಳು. ಬದಲು ಇಂತಹ ಬಾದಶಾಹನೊಬ್ಬನಿಗೆ ನಾಲ್ಕು ಬೈಯ್ಯುಗಳೇ ಹಾಕುವಳು. ಅದಕ್ಕೆ ಕಾರಣ ಅವನ ಈ ಪಾಲನೆ ಪೊಷಣೆ ಸ್ವಾಭಾವಿಕ ಕ್ರಿಯೆಯಾಗಿರುತ್ತದೆ. ಅದು ಯಾವುದೇ ಆಮಿಷ ಅಥವಾ ಭಯ ಒಳಗೊಂಡಿರುವುದಿಲ್ಲ. ಇದೇ ರೀತಿ ಮನುಷ್ಯನು ಸತ್ಕರ್ಮಗಳಲ್ಲಿ ಅಭಿವೃದ್ಧಿಗೈಯುತ್ತ ಈ ಪದವಿಗೆ ತಲುಪಿದರೆ ಅದು ನಫ್ಸ್ ಮುತ್ಮಯಿನ್ನ" ಕ್ಕೆ ಅರ್ಹನಾಗುತ್ತಾನೆ." (ಮಲಫೂರ್ಝಾತ್, ಸಂಪುಟ–8, ಪುಟ–312–314, 1984)

ಮತ್ತು ಹೇಳಿದರು. ತಾಯಿಯು ಸ್ವಯಂ ಎಲ್ಲ ದುಃಖಗಳನ್ನು ಸಹಿಸಿಕೊಲ್ಲುತ್ತಾಳೆ. ಆದರೆ ಮಗುವಿಗೆ ಆರಾಮವಾಗಿರಲು ಪ್ರಯತ್ನಿಸುತ್ತಾಳೆ. ಸ್ವಯಂ ಒದ್ದೆಯಾದ ನೆಲದಲ್ಲಿ ಮಲಗಿದರೂ, ಮಗುವನ್ನು ಉತ್ತಮ ಜಾಗದಲ್ಲಿ ಮಲಗಿಸುತ್ತಾಳೆ. ಮಗು ಅಸ್ವಸ್ಥನಾದರೆ ರಾತ್ರಿಗಳೆಲ್ಲ ನಿದ್ರೆ ಮಾಡದೆ ಎಲ್ಲ ರೀತಿಯ ಕಷ್ಟಗಳನ್ನು ಸಹಿಸಿಕೊಳ್ಳುತ್ತಾಳೆ. ಈಗ ಹೇಳಿ ತಾಯಿಯು ಮಗುವಿಗಾಗಿ ಮಾಡುವ ಇವೆಲ್ಲ ಕಾರ್ಯಗಳಲ್ಲಿ ಯಾವ ಸ್ವಾರ್ಥವಿದೆ? ಇದು ಸ್ವಾಭಾವಿಕ ಪ್ರೇಮವಾಗಿದೆ. ಇದೇ ಪ್ರೇಮ ಅಲ್ಲಾಹನ ಹಕ್ಕುಗಳನ್ನು ಪಾಲಿಸುವುದರಲ್ಲಿ ಮತ್ತು ಅವನ ಸೃಷ್ಟಿಗಳ ಹಕ್ಕುಗಳನ್ನು ಪಾಲಿಸುವುದರಲ್ಲಿ ಒಬ್ಬ ಸತ್ಯವಿಶ್ವಾಸಿಯಾಗಿ ಇರಬೇಕಾಗಿದೆ.

ಹೇಳಿದರು. ಒಟ್ಟಿನಲ್ಲಿ ಅಲ್ಲಾಹನು ಹೇಳಿದನು. ನೀವು ಇಹ್‌ಸಾನ್ ಪದವಿಗಿಂತ ಮುಂದಿನ ಪದವಿಯತ್ತ ಧಾವಿಸಿರಿ. ಈತಾಯಿಝುಲ್ ಖುರ್‌ಬ ವರೆಗೆ ತಲುಪಿರಿ. ಸೃಷ್ಟಿಗಳೊಡನೆ ಯಾವುದೆ ಫಲಾಪೇಕ್ಷೆವಿಲ್ಲದೆ ಸ್ವಾಭಾವಿಕ ಆವೇಶಗಳೊಂದಿಗೆ ಸೇವೆ ಸಲ್ಲಿಸಿರಿ.

ಸೃಷ್ಟಿಗಳ ಸೇವೆಯಲ್ಲಿ ಯಾವ ತೋರಿಕೆಯ ಭಾವವು ಇರಕೂಡದು. ಇನ್ನೊಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ (ಅ) ಹೇಳುತ್ತಾರೆ. ಅಲ್ಲಾಹನು ಹೇಳಿದನು. **ಲಾ ನುರೀದು ಮಿನ್‌ಕುಮ್ ಜಝಾಅವ್ವಲಾ ಶುಕೂರ** (ಅದ್ದಹರ್. 10) ಎಂದರೆ ಸಜ್ಜನರು ಸತ್ಕರ್ಮಗಳಲ್ಲಿ ಪಾಲಿಸುತ್ತಾರೆ. ಅವರ ಮನಸ್ಸಿನಲ್ಲಿ ಅದಕ್ಕಾಗಿ ದುಆ ಮಾಡಬೇಕು ಅಥವಾ ಅವರಿಗೆ ಕೃತಜ್ಞತೆ ಸಲ್ಲಿಸಬೇಕು ಎಂಬುದರ ಕಲ್ಪನೆ ಸಹ ಮಾಡಿರುವುದಿಲ್ಲ. ಅವರ ಸತ್ಕರ್ಮಗಳೆಲ್ಲ ಮಾನವ ಕುಲಕ್ಕಾಗಿ ಸ್ವಾಭಾವಿಕ ಆವೇಶಗಳನ್ನು ಹೊಂದಿರುತ್ತದೆ.

ಇಂತಹ ಪವಿತ್ರವಾದ ಶಿಕ್ಷಣ ನಾವು ತೌರಾತಿನಲ್ಲಾಗಲೀ, ಇಂಜೀಲ್‌ನಲ್ಲಾಗಲಿ ಕಾಣಲು ಸಿಗಲಿಲ್ಲ. ಪುಟ ಪುಟವನ್ನು ಸಹ ನಾವು ಓದಿದ್ದೇವೆ. ಆದರೆ ಇಂತಹ ಪವಿತ್ರ ಮತ್ತು ಪರಿಪೂರ್ಣ ಶಿಕ್ಷಣದ ಲವಲೇಶ ಮಾತ್ರವು ಅದರಲ್ಲಿಲ್ಲ. (ಮಲ್ಫುಝಾತ್, ಸಂಪುಟ–10, ಪುಟ–416–417, 1984)

ಅವರು (ಅ) ಹೇಳುತ್ತಾರೆ. ಸತ್ಕರ್ಮಗಳ ಪ್ರತಿಯಾಗಿ ಸತ್ಕರ್ಮಗಳನ್ನು ಮಾಡಿರಿ ಎಂಬುದು ಅಲ್ಲಾಹನ ಆದೇಶವಾಗಿದೆ. ಈ ಎಲ್ಲ ಒಳಿತುಗಳ ಗಳಿಕೆಯ ವಿಧಗಳನ್ನು ಸರಿಯಾದ ಸಂದರ್ಭದಲ್ಲಿ ಮತ್ತು ಸಮಂಜಸವಾದ ಸಮಯದಲ್ಲಿ ಮಾಡುವುದರೊಂದಿಗೆ ಜೋಡಿಸಿ ಹೇಳಿರುವನು. (ಎಂದರೆ ಎಲ್ಲ ಒಳಿತುಗಳನ್ನು ಸಂದರ್ಭೋಚಿತವಗಿ ಮಾಡಬೇಕೆಂದು ಹೇಳಲಾಗಿದೆ) ಒಟ್ಟಿನಲಿಲ ಯಾವ ಸ್ಥಿತಿಯಲ್ಲೂ ಸಮಂಜಸತೆ ಬಿಡಬಾರದು, ಸಮತೋಲನ ಕಾಪಾಡಿಕೊಳ್ಳಬೇಕಾಗಿದೆ. ಸಂದರ್ಭರಹಿತವಾದ ಇಹ್‌ಸಾನ್ (ಔದಾರ್ಯ) ವನ್ನು ಬುದ್ಧಿವಂತಿಕೆಗಳ ನ್ಯಾಯವಾಗಲಿ ಒಪ್ಪತಕ್ಕದ್ದಲ್ಲ. ಎಲ್ಲಿ ಎಷ್ಟು ಅಗತ್ಯವಿದೆ ಅಷ್ಟರಮಟ್ಟಿಗೆ ಇಹ್‌ಸಾನ್ ನಿರಾಕಸಲೂ ಬಾರದು. ಒಟ್ಟಿನಲ್ಲಿ ಸಂದರ್ಭಕ್ಕನುಗುಣವಾಗಿ ಕಾರ್ಯ ಮಾಡಬೇಕಾಗಿದೆ. ಈ ವಚನದಲ್ಲಿ ಸತ್ಕರ್ಮಗಳ ಮೂರು ಪದವಿಗಳ ಕುರಿತು ವಿವರಿಸಲಾಗಿದೆ. ಆದ್ದರಿಂದ ಎಲ್ಲ ಸತ್ಕರ್ಮಗಳನ್ನು ಮಾಡಲು ಆದೇಶಗಳನ್ನು ನೀಡಲಾಗಿದೆ. ಅಲ್ಲಿ ಬುದ್ದಿ, ಸಮಂಜಸತೆ ಮತ್ತು ಸದುದ್ದೇಶಗಳನ್ನು ಹೊಂದಲು ಉಪದೇಶಿಸಲಾಗಿದೆ. ಆದೇಶಿಸಲಾಗಿದೆ. ನಿಮ್ಮ ಈ ಎಲ್ಲ ಸತ್ಕಾರ್ಯಗಳು ಪ್ರಯೋಜನಕಾರಿಯಾಗಬೇಕಾಗಿದೆ. ಮತ್ತು ಸಮಾಜದಲ್ಲಿ ವಿಭಜನಕಾರಿ ರೀತಿಯಲ್ಲಾಗಬಾರದು.

ತಾಯಿಯು ತನ್ನ ಮಗುವಿನೊಂದಿಗೆ ಎಷ್ಟೊಂದು ಪ್ರೀತಿ ಹೊಂದಿದರೂ ತನ್ನ ಮಗುವಿನ ಕೈಯಲ್ಲಿ ಬೆಂಕಿಯ ತುಂಡನ್ನಿರಿಸಲು ಇಚ್ಛಿಸುವುದಿಲ್ಲ. ಒಟ್ಟಿನಲ್ಲಿ ನಿಜವಾದ ಉದ್ದೇಶ ಈ ಮೂರು ವಿಧಗಳ ಸತ್ಕರ್ಮಗಳನ್ನು ಪಾಲಿಸುವುದರಲ್ಲಿದೆ. ಸತ್ಕರ್ಮಗಳ ಬದಲಿಗೆ ಸತ್ಕರ್ಮ ಮಾಡುವುದು ಮೊದಲನೆಯ ಹಂತವಾಗಿದೆ. ಇದನ್ನು ಸಾಧಾರ ಮನುಷ್ಯರು ಸಹ ಮಾಡಬಲ್ಲರು. ಯಾವ ಸಜ್ಜನ ಪುರುಷನು ಈ ಸತ್ಕರ್ಮ ಮಾಡಬಲ್ಲನು. ಇದೂ ಮೂಲ ಮಾತಾಗಿದೆ. ಇದು ಸತ್ಕರ್ಮದ ಉನ್ನತ ಪದವಿ ಅಲ್ಲ ಇದು ಒಬ್ಬ ಸಾಧಾರಣ ಮನುಷ್ಯನಲ್ಲಿಯೂ ಇರಬಹುದಾಗಿದೆ. ಎರಡನೇ ಪದವಿ ಇದಕ್ಕಿಂತ ಸ್ವಲ್ಪ ಕಠಿಣವಾಗಿದೆ. ಅದೇನೆಂದರೆ ಮೊದಲ ನೀವು ಸತ್ಕರ್ಮ ಕೈಗೊಳ್ಳಬೇಕು. ಮತ್ತು ಯಾವ ಪ್ರತಿಫಲ ಬಯಸದೇ ಇಹ್‌ಸಾನ್ ರೂಪದಲ್ಲಿ ಅವರಿಗೆ ಉಪಕಾರಿಯಾಗಬೇಕು. ಈ ಸತ್ಕರ್ಮ ಮಧ್ಯಮ ವರ್ಗದವರದ್ದಾಗಿದೆ. ಹೆಚ್ಚಿನವರು ಬಡವರ ಮೇಲೆ ಇಹ್‌ಸಾನ್ (ಉಪಕಾರ) ಮಾಡುತ್ತಾರೆ. ಇಹ್‌ಸಾನ್‌ನಲ್ಲಿ ಒಂದು ಗೌಪ್ಯ ರೀತಿಯ ಕೆಟ್ಟತನವಾಗಿದೆ. ಅದೇನೆಂದರೆ ಅವನು ನಾನು ಇನ್ನೊಬ್ಬನ ಮೇಲೆ ಇಹ್‌ಸಾನ್ (ಉಪಕಾರ) ಮಾಡಿದ್ದೇನೆ ಎಂದು ಭಾವಿಸುತ್ತಾನೆ. ಕನಿಷ್ಠವಾಗಿ ಅವನು ಇತರರಿಂದ ಕೃತಜ್ಞತೆ ಅಥವಾ ದುಆ ಬಯಸುತ್ತಾನೆ. ಯಾರಾದರೂ ಅವನಿಗೆ ಕೃತಜ್ಞತೆ ಸಲ್ಲಿಸದಿದ್ದರೆ ಅವನ ಹೆಸರು ವಿಶ್ವಾಸದ್ರೋಹಿ ಎನ್ನುತ್ತಾನೆ. ಕೆಲವೊಮ್ಮೆ ಈ ಇಹ್‌ಸಾನ್ ಕಾರ್ಯದಿಂದಾಗಿ ಪ್ರತಿಯಾಗಿ ಅವನ ಮೇಲೆ ಹೆಚ್ಚು ಜವಾಬ್ದಾರಿ ಹೇರುತ್ತಾನೆ. ಹೆಚ್ಚವರಿ ಭಾರ ಅವನ ಮೇಲೆ ಹಾಕುತ್ತಾನೆ ಮತ್ತು ತಾನು ಮಾಡಿದ ಉಪಕಾರವನ್ನು ಹಂಗಿಸುತ್ತಾನೆ. ಇಂತಹವರಿಗೆ ಎಚ್ಚರಿಕೆ ನೀಡುತ್ತಾ ಅಲ್ಲಾಹನು ಹೇಳಿದನು. **ಲಾ ತುಬ್‌ತಿಲೂ ಸದಖಾತಿಕುಮ್ ಬಿಲ್ ಮನ್ನಿ ವಲ್‌ಅಝಾ** (ಅಲ್ ಬಖರ: 265) ಎಂದರೆ ದಾನ ನೀಡುವವರೇ, ಆ ವಿಷಯದಲ್ಲಿ ನೀವು ನಿರಾಪೇಕ್ಷಿಪಿತರಾಗಿಬರೇಕು. ಅದನ್ನು ಉಪಕಾರ ಹಂಗಿಸಿ ಅಥವಾ ಅವರಿಗೆ ದು:ಖ ನೀಡಿ ವಿನಾಶ ಪಡೆಯದಿರಿ. ಅಲ್ಲಾಹನು ಇಂತಹ ಜನರಿಗೆ Warning (ಮುನ್ನೆಚ್ಚರಿಕೆ) ನೀಡಿರುವನು. ಈ ರೀತಿಯ ವ್ಯವಹಾರ ನಿಮಗೆ ಯಾವ ಪ್ರಯೋಜನವು ಇರದಿದ್ದರೆ, ಅದು ತೋರಿಕೆ ಅಥವಾ ಆಡಂಬರರಾಗಿರುತ್ತದೆ. ಒಟ್ಟಿನಲ್ಲಿ ಇಹ್‌ಸಾನ್ ಮಾಡುವವರಲ್ಲಿ ಒಂದು ಇರಬಹುದಾದ ಕೆಟ್ಟತನವೇನೆಂದರೆ, ಸಉಟ್ಟಾದಾಗ ತಾನು ಮಾಡಿದ ಉಪಕಾರ ಹಂಗಿಸುತ್ತಾನೆ. ಅದೇ ಕಾರಣದಿಂದ ಅಲ್ಲಾಹನು ಇಹ್‌ಸಾನ್ ಮಾಡುವವರಿಗೆ ಮುನ್ನೆಚ್ಚರಿಕೆ ನೀಡಿರುತ್ತಾನೆ.

ಮೂರನೆಯ ಪದವಿ ಸತ್ಕರ್ಮಗಳದ್ದು, ಏನೆಂದರೆ ಅಲ್ಲಾಹನು ಹೇಳಿದನು. ಇಹ್‌ಸಾನ್ ಮಾಡಿದ್ದೇನೆ ಎಂಬ ಭಾವನೆ ಇರಬಾರದು, ಕೃತಜ್ಞತೆಯು ಬಯಸಬಾರದು, ಬದಲು ಯಾವ ರೀತಿ ಪ್ರೀತಿ ಹೊಂದಬೇಕೆಂದರೆ ಉದಾಹರಣೆಗೆ ತಾಯಿಯೊಬ್ಬಳು ತನ್ನ ಮಗುವಿನೊಂದಿಗೆ ಸ್ವಾಭಾಔಇಕ ಆವೇಶಧಿಂದ ಮಾಡುವ ಪ್ರೀತಿಯಿಂದಿರಬೇಕು. ಇದು ಸತ್ಕರ್ಮದ ಶ್ರೇಷ್ಠ ಪದವಿಯಾಗಿದೆ. ಅದಕ್ಕಿಂತ ಮೇಲಾಗಿ ಅಭಿವೃದ್ಧಿ ಸಾಧ್ಯವಿಲ್ಲ. ಆದರೆ ಅಲ್ಲಾಹನು ಈ ಎಲ್ಲ ಒಳಿತುಗಳ ಗಳಿಕೆ ವಿಧಗಳನ್ನು ಸರಿಯಾದ ಸಂದರ್ಭದಲ್ಲಿ ಮತ್ತು ಸಮಂಜಸವಾದ ಸಮಯದಲ್ಲಿ ಮಾಡುವುದರೊಂದಿಗೆ ಜೋಡಿಸಿ ಹೇಳೀರುವನು. ಈ ಒಳೀತು ಗಳರ್ಣಣೂಶ್ರೃಈಐದ ಸಂದರ್ಭದಲಿಲ ಮಾಡದಿದ್ದರೆ ಅವುಗಳು ಕೆಡುಕುಗಳಾಗುವುವು. ಅದಾಲ್ ಎಂಬುದು ಫಹ್‌ಶಾ ಆಗುವುದು. ಎಂದರೆ ಅಶುದ್ಧಿಯ ಸ್ಥಿತಿ ಉಂಟಾಗುವಷ್ಟು ಮಿತಿಯನ್ನುಮೀರುವುದು. ಅದೇ ರೀತಿಯಲ್ಲಿ ಇಹ್‌ಸಾನ್ ಎಂಬುದು ಮುನ್‌ಕಿಡ್ ಆಗುವುದು ಎಂದರೆ ಔದಾರ್ಯ ಎಂಬುದು ಬುದ್ಧಿ ಮತ್ತು ವಿವೇಕ ನಿರಾಕರಿಸುವ ಸ್ಥಿತಿಗೆ ತಲುಪುವುದು ಈತಾಯಿದುಲ್ ಖುರುಬ್ ಎಂಬುದು ಬಗ್ಲೀ ಆಗುವುದು ಎಂದರೆ ತಪ್ಪಾದ ಸಂದರ್ಭದಲಿಲ ತೋರಿಸುವ ಸಹಾಯಭೂತಿಯ ಆವೇಶ ಒಂದು ಕೆಟ್ಟ ಸ್ಥಿತಿಯನ್ನು ಉಂಟುಮಾಡುವುದು. ಸತ್ಯದಲ್ಲಿ ಮಿತಿಮೀರಿ ವರ್ಧಿಸಿ ಕೃಷಿಭೂಮಿಯನ್ನು ನಾಶ ಮಾಡುವ ಮಳೆಯನ್ನು ಬಗ್ಹೀ ಎಂದು ಹೇಳಳಾಗುತ್ತದೆ. ಕಡ್ಡಾಯ ಹಕ್ಕಗುಳ ಈಡೇರಿರುವಿಕೆಯಲ್ಲಿ ಕೊರತೆಯನ್ನು ಮ,ಆಡುವುದನ್ನು ಮತ್ತು ಕಡಡಾಯ ಈಡೇರುವಿಕೆಯಲ್ಲಿ ಮಿತಿಯನ್ನು ಮೀರುವುದು ಕೂಡ ಬಗ್ಹೀ ಎಂದು ಹೇಳಲಾಗುತ್ತದೆ. ಒಟ್ಟಿನಲ್ಲಿ ಈ ಮೂರಲ್ಲಿ ಒಂದನ್ನು ಕೂಡ ಸರಿಯಾದ ಸಂದರ್ಭದಲ್ಲಿ ಉಪಯೋಗಿಸದಿದ್ದರೆ ಅದು ಕೆಟ್ಟ ಅವಸ್ಥೆಯನ್ನು ಪಡೆಯುವುದು. ಆದ್ದರಿಂದ ಈ ಮೂರನ್ನು ಸರಿಯಾದ ಸಂದರ್ಭದಲ್ಲಿ ಮಾಡಬೇಕೆಂಬ ನಿಬಂಧನೆಯನ್ನು ಇರಿಸಲಾಗಿದೆ. ಇಲ್ಲಿ ನೆನಪಿಡಬೇಕಾದ ಮಾತೇನೆಂದರೆ ಬರೀ ಅದಲ್ ಅಥವಾ ಇಹ್‌ಸಾನ್ ಅಥವಾ ಈತಾಯಿದುಲ್ ಖುರಬ ಗಳನ್ನು ಒಂದು ಉತ್ತಮ ಗುಣಗಳೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಇವು ಮನುಷ್ಯನಲ್ಲಿ ಸ್ವಾಭಾವಿಕ ರೀತಿಯಲ್ಲಿ ಇರುತ್ತವೆ. ಅವು ಮಕ್ಕಳಲ್ಲೂ ಬುದ್ಧಿಮಟ್ಟಕ್ಕೆ ಬರುವುದಕ್ಕಿಂತ ಮುಂಚೆಯೇ ಇರುತ್ತವೆ. ಆದರೆ ಉತ್ತಮ ಗುಣಗಳಿಗೆ ಇರುವ ಶರತ್ತೇನೆಂದರೆ ಅವು ಸಂದರ್ಭೋಚಿತವಾಗಿರಬೇಕು. ಸಂದರ್ಭೋಚಿತವಾಗಿ ಬಳಕೆಗೆ ಬರಬೇಕು.

ಇಹ್‌ಸಾನ್ ಕುರಿತು ಇನ್ನಷ್ಟು ಮಾರ್ಗದರ್ಶನ ಪವಿತ್ರ ಖುರ್‌ಆನ್‌ನಲ್ಲಿದೆ. ಅವೆಲ್ಲ ಅಲಿಫ್ ಲಾಮ್ ಜೊತೆ ವಿಶಿಷ್ಠ ಸಂದರ್ಭಗಳಲ್ಲಿ ಬರುತ್ತವೆ. ಅದನ್ನು ಸಂದರ್ಭೋಚಿತವಾಗಿ ಉಪಯೋಗಿಸಲು ಹೇಳಲಾಗಿದೆ. (ಇಸ್ಲಾಮಿ ಉಸೂಲ್ ಕೀ ಫಿಲಾಸಫಿ, ರೂಹಾನಿ ಖಝಾಈನ್, ಸಂಪುಟ–10, ಪುಟ–353–355) ಎಂದರೆ ಇವೆಲ್ಲ ಗುಣಗಳು ಸರಿಯಾದ ಸಂದರ್ಭದಲ್ಲಿ ಮಾಡುವಂತೆ ನಿರ್ಬಂಧಿತಲಾಗಿದೆ.

ಒಟ್ಟಿನಲ್ಲಿ ವಿವಿಧ ರೀತಿಯಲ್ಲಿ ವಿವಿಧ ಉದಾಹರಣೆಗಳೊಂದಿಗೆ ಈ ಸತ್ಕರ್ಮಗಳನ್ನು ಪಾಲಿಸಲು ನಮಗೆ ಉಪದೇಶ ನೀಡಲಾಗಿದೆ. ಈ ಪೈಕಿ ಸತ್ಕರ್ಮ ಮಾಡುವ ನೆಲೆಯಲ್ಲಿ, ಇಹ್‌ಸಾನ್ ಮಾಡುವ ನೆಲೆಯಲ್ಲಿ ತನ್ನ ಒಂದು ಘಟನೆಯನ್ನು ಪ್ರಸ್ತಾಪಿಸಿದ್ದಾರೆ. ಹೇಳುತ್ತಾರೆ. ಇಹ್‌ಸಾನ್ ಎಂಬುದು ಒಂದು ಉತ್ತಮ ಗುಣವಾಗಿದೆ. ಇದರಿಂದ ಮನುಷ್ಯನು ಕಡು ಶತ್ರುಗಳನ್ನು ಸಹ ತೋರಿಸುವಂತಾಗುತ್ತದೆ. ಅಂದಹಾಗೆ ಸಿಯೊಲ್ಕೋಟಿನಲ್ಲಿ ಒಬ್ಬ ವ್ಯಕ್ತಿಯಿದ್ದನು. ಅವನು ಎಲ್ಲರೊಂದಿಗೂ ಜಗಳವಾಡುತ್ತಿದ್ದನು. ಮೈತ್ರಿ ಸಾಧಿಸಿದಂತೆ ಒಬ್ಬ ವ್ಯಕ್ತಿಯೂ ಇರಲಿಲ್ಲ ಅವನ ಸಹೋದರರು, ಇಕಟ ಸಂಬಂದಿಗಳು ಸಹ ಅವನಿಂದ ಬೇಸರಪಟ್ಟಿದ್ದರು. ಅವನೊಡನೆ ಕೆಲ

ಸಂದರ್ಭಗಳಲ್ಲಿ ನಾನು ಸಾಧಾರಣ ರೀತಿಯಲ್ಲಿ ವ್ಯವಹರಿಸಿದೆ. ಅವನು ಅದರ ಪ್ರತಿಯಾಗಿ ಎಂದೂ ಕೆಟ್ಟದಾಗಿ ವರ್ತಿಸಲಿಲ್ಲ. ಬದಲು ಭೇಟಿಯಾದಾಗಲೆಲ್ಲ ತುಂಬಾ ಆದರದಿಂದ ಮಾತನಾಡುತ್ತಿದ್ದ. ಅದೇ ರೀತಿಯಲ್ಲಿ ಒಬ್ಬ ಅರಬನು ನಮ್ಮಲ್ಲಿಗೆ ಬಂದನು. ಅವನು ವಹಾಬಿಯ ಕಡು ವಿರೋಧಿಯಾಗಿದ್ದನು. ಅವನ ಮುಂದೆ ವಹಾಬಿಯರ ಕುರಿತು ಹೆಸರೆತ್ತಿದರೂ ಬೈಗಳಿಗೆ ಇಳಿಯುತ್ತಿದ್ದ. ಅವನು ಇಲ್ಲಿ ಬಂದು ಸಹ ಕಠಿಣ ರೀತಿ ಬೈಯ್ಯುಗಳನ್ನು ಬೈಯ್ಯಲಿಕ್ಕೆ ಪ್ರಾರಂಭಿಸಿದ. ವಹಾಬಿಯರಿಗೂ ಏನೇನೆಲ್ಲ ಕೆಟ್ಟ ಮಾತುಗಳನ್ನು ಆಡಿದ. ನಾವು ಅದನ್ನು ಲೆಕ್ಕಿಸದೆ ಅವನಿಗೆ ತುಂಬಾ ಸೇವೆಯನ್ನು ಮಾಡಿದೆವು. ಒಳ್ಳೆಯ ರೀತಿಯಲ್ಲಿ ಅವನಿಗೆ ಆಹ್ವಾನಿಸಿದೆವು. ಒಂದು ದಿನ ಅವನು ತುಂಬಾ ಕೆಂಪದಲ್ಲಿದ್ದು ವಹಾಬಿಯರಿಗೆ ಬಯ್ಯತೊಡಗಿದ್ದ. ಅದರಲ್ಲೊಬ್ಬರು ಅವನಿಗೆ ಹೇಳಿದರು. ಯಾರ ಮನೆಯಲ್ಲಿ ನೀವು ಅತಿಥಿಯಾಗಿ ನಿಂತಿದ್ದೀರಿ. ಅವರು ಕೂಡ ವಹಾಬಿಯಾಗಿದ್ದಾರೆ ಎಂದರೆ ಅವರ ತಾತ್ಪರ್ಯ ಹಝ್ರತ್ ಮಸೀಹ್ ಮೌಊದ್ (ಅ) ರಾಗಿದ್ದರು. ಆಗ ಅವನು ಮೌನವಾಗಿ ಬಿಟ್ಟ. ಮಸೀಹ್ ಮೌಊದ್ (ಅ) ರವರಿಗೆ ವಹಾಬಿ ಎಂದ ಹೇಳಿದ ವ್ಯಕ್ತಿಗೆ ಹುಝೂರ್ ಹೇಳಿದರು. ಆ ವ್ಯಕ್ತಿಯು ನನಗೆ ವಹಾಬಿ ಎಂದು ಹೇಳಿರುವುದು ತಪ್ಪೇನಲ್ಲ. ಏಕೆಂದರೆ ಪವಿತ್ರ ಖುರ್‌ಆನ್ ನಂತರ ಸಹೀ ಹದೀಸುಗಳ ಮೇಲೆ ನಡೆದುಕೊಳ್ಳುವುದು ಕಡ್ಡಾಯವೆಂದು ನಾನು ಭಾವಿಸುತ್ತೇನೆ. ಅಂತೂ ಆ ವ್ಯಕ್ತಿ ಕೆಲವು ದಿನಗಳ ನಂತರ ಹೊರಟುಹೋದರು ಅದಾದ ನಂತರ ಅವನು ಒಂದು ಸಂದರ್ಭದಲ್ಲಿ ಲಾಹೋರಿನಲ್ಲಿ ಮತ್ತೆ ಭೇಟಿಯಾದನು. ಅವನು ವಹಾಬಿಯರ ಮುಖವನ್ನೂ ಸಹ ನೋಡಬಯಸುತ್ತಿರಲಿಲ್ಲ. ಆದರೆ ಅವನಿಗೆ ಇಲ್ಲಿ ಚೆನ್ನಾಗಿ ಆತಿಥ್ಯ ಮಾಡಿಕೊಡಲಾಗಿತ್ತು. ಅದರಿಂದ ಅವನ ಎಲ್ಲ ಕೋಪತಾಪ ನಿವಾರಣೆಯಾಗಿತ್ತು. ಈಗ ಅವನು ತುಂಬಾ ಆದರದಿಂದ ಪ್ರೀತಿಯಿಂದ ನನ್ನೊಡನೆ ಭೇಟಿಯಾದನು. ಆದ್ದರಿಂದ ಅವನು ಒತ್ತಾಯ ಮಾಡಿ ನನಗೆ ಒಂದು ಸಣ್ಣದಾದ ಮಸೀದಿಯಲ್ಲಿ, ಅದರಲ್ಲಿ ಅವನು ಇಮಾಮನಾಗಿದ್ದ, ನನಗೆ ಕುಳಿತುಕೊಳ್ಳಲು ಹೇಳಿದನು. ಸ್ವಯಂ ಸೇವಕನ ರೀತಿಯಲ್ಲಿ ನನಗೆ ಗಾಳಿ ಹಾಕುತ್ತಿದ್ದನು ಮತ್ತು ಚಹ ಇತ್ಯಾದಿ ಸೇವಿಸಲು ಮನವಿ ಮಾಡುತ್ತಿದ್ದನು. ಎಂದರೆ ನೋಡಿ ಇಹ್‌ಸಾನ್ ಎಂಬುದು ಎಷ್ಟರಮಟ್ಟಿಗೆ ಹೃದಯವನ್ನು ಗೆಲ್ಲುವ ಗುಣ ಹೊಂದಿರುತ್ತದೆ. (ಮಲ್ಫುಝಾತ್, ಸಂಪುಟ–9, ಪುಟ–302, ಸಂಚಿಕೆ 1984)

ಹಝ್ರತ್ ಮಸೀಹ್ ಮೌಊದ್ (ಅ) ಹೇಳುತ್ತಾರೆ. ಸಂಸ್ಕಾರದಲ್ಲಿ ಎರಡು ವಿಧಗಳಿವೆ. ಒಂದು ಇಂದಿನ ಹೊಸ ವಿದ್ಯಾವಂತರು ಪ್ರಸ್ತುತಪಡಿಸುವ, ಸಭೆಗಳಲ್ಲಿ ಹೊಗಳಿಕೆ ಮತ್ತು ಸಮಯಸಾಧಕತೆಯನ್ನು ತೋರ್ಪಡಿಸುತ್ತಾರೆ. ಸಭೆಯಲ್ಲಂತೂ ಹೊಗಳಿಕೆಯಿಂದ ವರ್ತಿಸುತ್ತಾರೆ. ಆದರೆ ಹೃದಯಗಳಲ್ಲಿ ಕಪಟವನ್ನು ದ್ವೇಷವನ್ನು ಹೊಂದಿರುತ್ತಾರೆ. ಈ ಸಂಸ್ಕಾರವು ಪವಿತ್ರ ಖುರ್‌ಆನ್‌ಗೆ ವಿರುದ್ಧವಾಗಿದೆ. ಇನ್ನೊಂದು ರೀತಿಯ ನೈತಿಕತೆ ಎಂದರೆ ಅದು ನಿಜವಾದ ಅನುಕಂಪ ಹೊಂದಿರಬೇಕು. ಹೃದಯದಲ್ಲಿ ಕಪಟ ಮತ್ತು ಹೊಗಳಿಕೆ, ತೆಗಳಿಕೆ ಇರರದು. ಅಲ್ಲಾಹನು ಹೇಳಿದನು. **ಇನ್ನಲ್ಲಾಹ ಯಅ್‌ಮುರು ಬಿಲ್ ಅದ್ಲಿ ವಲ್ ಇಹ್ಸಾನಿ ವ ಈತಾಇಝಿಲ್ ಖುರ್ಬಾ** (ಅನ್ನಹಲ್–91) ಇದು ಪರಿಪೂರ್ಣ ನೀತಿಯಾಗಿದೆ. ಪ್ರತಿಯೊಂದು ಪರಿಪೂರ್ಣ ನೀತಿ ನಿದರ್ಶನ ಅಲ್ಲಾಹನ ಗ್ರಂಥದಲ್ಲಿ ಪ್ರಸ್ತುತವಿದೆ. ಯಾರು ಇದನ್ನು ನಿರಾಕರಿಸುವರು ಅವರು ಬೇರೆ ಕಡೆಯಿಂದ ಮಾರ್ಗದರ್ಶನ ಪಡೆಯುವುದು ಸಾಧ್ಯವಿಲ್ಲ. ಒಳ್ಳೆಯ ಶಿಕ್ಷಣವು ಹೃದಯಶುದ್ಧಿಯನ್ನು ಬಯಸುತ್ತದೆ. ಯಾರು ಇದರಿಂದ ದೂರನಿದ್ದಾರೆಮ ದೂರದೃಷ್ಟಿಯಿಂದ ನೋಡುವವರಾದರೆ ಅವರಲ್ಲಿ ಕಪಟ ಕಾಣಬಹುದಾಗಿದೆ. ಜೀವನ ಶಾಶ್ವತವಲ್ಲ, ನಮಾಝ್, ಸತ್ಯನಿಷ್ಠೆಯಲ್ಲಿ ಪ್ರಗತಿ ಸಾಧಿಸಿರಿ. (ಮಲ್ಫೂಝಾತ್, ಸಂಪುಟ–6, ಪುಟ–200)

ಹಝ್ರತ್ ಮಸೀಹ್ ಮೌಊದ್(ಅ) ಉಪದೇಶ ಮಾಡಿದರು. ನಮಾಝ್ ಸತ್ಯ ನಿಷ್ಠೆಯಲ್ಲಿ ಪ್ರಗತಿ ಹೊಂದಿರಿ. ಆರಾಧನೆಗಳಲ್ಲಿ ಸತ್ಯದಲ್ಲಿ ಮತ್ತು ಪರಿಶುದ್ಧತೆಯಲ್ಲಿ ಅಭಿವೃದ್ಧಿ ಹೊಂದಿರಿ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾವು ನಿಮಗೆ ಪದೇ ಪದೇ ಉಪದೇಶ ಮಾಡುವೆವು. ನೀವು ಎಂದಿಗೂ ನಿಮ್ಮ ಕರುಣೆಯ ವೃತ್ತವನ್ನು ಸಂಕುಚಿತಗೊಳಿಸದಿರಿ. ಕರುಣೆದೋರಲಿ. ಅಲ್ಲಾಹನು ನೀಡಿದ ಈ ಶಿಕ್ಷಣವನ್ನು ಅನುಸರಿಸಿರಿ." ಎಂದರೆ **ಇನ್ನಲ್ಲಾಹ ಯಅ್‌ಮುರು ಬಿಲ್ ಅದ್ಲಿ ವಲ್ ಇಹ್ಸಾನಿ ವ ಈತಾಇಝಿಲ್ ಖುರ್ಬಾ** (ಅನ್ನಹಲ್–91) ಎಂದರೆ ಸತ್ಕರ್ಮ ಮಾಡುವುದರಲ್ಲಿ ನೀವು ಅದಲ್ (ನ್ಯಾಯಪಾಲಿಸಿ) ಬಿಡದಿರಿ. ಯಾರು ನಿಮ್ಮ ಪೈಕಿ ಸತ್ಕರ್ಮದಿಂದ ವರ್ತಿಸುವರು ಅವರೊಡನೆ ನೀವು ಸಹ ಸತ್ಕರ್ಮದಿಮದ ವರ್ತಿಸಿರಿ, ಎರಡನೆಯ ಪದವಿ ಏನೆಂದರೆ ನೀವು ಅವರಿಗಿಂತ ಹೆಚ್ಚಾಗಿ ಉತ್ತಮ ವ್ಯವಹಾರ ಮಾಡಿರಿ. ಇದು ಇಹ್‌ಸಾನ್ ಎಂದಾಗಿದೆ. ಇಹ್‌ಸಾನ್ ಪದವಿ ಅದ್‌ಲ್‌ಗಿಂತ ಹೆಚ್ಚಾಗಿದೆ. ಮತ್ತು ಇದು ಒಂದು ಉತ್ತಮ ದರ್ಜೆಯ ಸತ್ಕರ್ಮವಾಗಿದೆ. ಆದರೆ ಒಂದಲ್ಲ ಒಂದು ಸಮಯ ಇಹ್‌ಸಾ ಮಾಡುವವನು. ಇಹ್‌ಸನ್ ಹಂಗಿಸುವ ಸಾಧ್ಯತೆ ಇಲ್ಲದಿಲ್ಲ. ಆದರೆ ಇದಕ್ಕಿಂತ ಮಿಗಿಲಾದ ಸತ್ಕರ್ಮ ಮನುಷ್ಯನು ಸ್ವಾಭಾವಿಕ ರೀತಿಯಲ್ಲಿ ಮಾಡುವ ಸತ್ಕರ್ಮವಾಗಿದೆ. ಅದರಲ್ಲಿ ಇಹ್‌ಸಾನ್ ಹಂಗಿಸುವ ಗುಣ ಇರುವುದಿಲ್ಲ. ಓರ್ವ ತಾಯಿಯು ತನ್ನ ಮಗುವಿನ ಪಾಲನೆ ಪೋಷಣೆ ಮಾಡುವ ರೀತಿಯಲ್ಲಿ ಅವಳು ಯಾವ ಪುಣ್ಯ ಅಥವಾ ಪ್ರತಿಫಲ ಬಯಸುವುದಿಲ್ಲ. ಬದಲಗಿ ಒಂದು ಸ್ವಾಭಾವಿಕ ಗುಣವಿರುತ್ತದೆ, ಅದು ತನ್ನ ಮಗುವಿನ ಆರಾಮಗೋಸ್ಕರ ಎಲ್ಲ ತನ್ನ ಸುಖ, ಆರಾಮಗಳನ್ನು ತ್ಯಾಗ ಮಾಡುತ್ತಾಳೆ. ಒಬ್ಬ ಬಾದಶಾಹನು ಸಹ ಅವಳಿಗೆ ಹಾಲುಣಿಸದಿರಲು ಹೇಳಿದರೆ, ಅವಳು ಬಾದಶಾಹನಿಗೂ ಕಟುವಾದ ನುಡಿಗಳು ಹೇಳುವಳು. ಆದ್ದರಿಂದ ನೀವು ಮಾಡಬೇಕಾದ ಸತ್ಕರ್ಮಗಳು ಸ್ವಾಭಾವಿಕವಾಗಿರಬೇಕು. ಏಕೆಂದರೆ ಯಾವುದೇ ಒಂದು ವಸ್ತು ನಿಧಾನವಾಗಿ ಪ್ರಗತಿ ಹೊಂದುತ್ತಾ ಹೋದರೆ ಅದು ಒಂದು ದಿನ ಪರಿಪೂರ್ಣ ಅವಸ್ಥೆಗೆ ತಲುಪುತ್ತದೆ. (ಮಲ್‌ಫೂಝಾತ್, ಸಂಪುಟ–7, ಪುಟ–382 383)

ಹಝ್ರತ್ ಮಸೀಹ್ ಮೌಊದ್ (ಅ) ಹೇಳುತ್ತಾರೆ. ಅಲ್ಲಾಹನು ಆದೇಶ ನೀಡುವನು. ಇಡೀ ಜಗತ್ತಿನವರೊಂದಿಗೆ ನೀವು ನ್ಯಾಯಪಾಲನೆ (ಅದಲ್) ಯಿಂದ ವರ್ತಿಸಿರಿ. ಎಂದರೆ ಎಷ್ಟು ಹಕ್ಕಿದೆ ಅಷ್ಟನ್ನು ಪಾಲಿಸಿರಿ. ಎಲ್ಲಿ ಮಾನವಕುಲದೊಂದಿಗೆ ನ್ಯಾಯದಿಂದ ವರ್ತಿಸಿರಿ. ಅದಕ್ಕಿಂತ ಮಿಗಿಲದ ಆದೇಶ ನೀಡಿರುವನು. ಏ–ನೀವು ಮನುಕುಲದೊಂದಿಗೆ ಇಹ್‌ಸಾನ್‌ಯಿಂದ ವರ್ತಿಸಿರಿ ಎಂದರೆ ನಮ್ಮ ಕಡ್ಡಾಯ ಕರ್ತವ್ಯದಲ್ಲಿರದಿದ್ದರೂ ಮಾನವೀಯತೆಯ ನೆಲೆಯಲ್ಲಿ ವರ್ತಿಸಿರಿ. ಆದರೆ ಇಹ್‌ಸಾನ್‌ನಲ್ಲಿಯೂ ಒಂದು ಕೊರತೆ ಇದೆ. ಅದೇನೆಂದರೆ ಇಹ್‌ಸಾನ್‌ನಲ್ಲಿ ಒಮ್ಮೊಮ್ಮೆ ಕ್ರೋಧಿತ ಅವಸ್ಥೆಯಲ್ಲಿ ತಮ್ಮ ಉಪಕಾರವನ್ನು ಹಂಗಿಸುತ್ತಾರೆ. ಆದ್ದರಿಂದ ವಚನದ ಕೊನೆಯಲ್ಲಿ ಹೇಳಲಾಯಿತು. ಪರಿಪೂರ್ಣ ಸತ್ಕರ್ಮವೆಂದರೆ ನೀವು ಮನುಕುಲದೊಂದಿಗೆ, ತಾಯಿಯು ತನ್ನ ಮಗುವಿನೊಂದಿಗೆ ಮಾಡುವಂತಹ ಸತ್ಕರ್ಮ ಮಾಡಿರಿ. ಏಕೆಂದರೆ ಆ ಸತ್ಕರ್ಮ ಸ್ವಾಭಾವಿಕವಾಗಿರುತ್ತದೆ. ಫಲಾಪೇಕಿತವಾಗಿರುವುದಿಲ್ಲ. ಮನಸ್ಸಿನಲ್ಲಿ ಈ ಮಗು ತಾನು ಮಾಡಿದ ಸತ್ಕರ್ಮ ಬದಲಾಗಿ ಫಲ ನೀಡುವನು ಎಂಬ ಕಲ್ಪನೆಯು ಇರುವುದಿಲ್ಲ. ಆದ್ದರಿಂದ ಮನುಕುಲದೊಂದಿಗೆ ಈ ಸತ್ಕರ್ಮ ಶ್ರೇಷ್ಠ ಪದವಿಯದ್ದಾಗಿದೆ. ಅದನ್ನು ಈತಾಯಿದ್ದುಲ್‌ಖುರ್‌ಬ ಪದದಿಂದ ವಿವರಿಸಲಾಗಿದೆ. (ಚಷ್ಮ ಮಅ್‌ರಿಫತ್, ರೂಹಾನಿ ಖಝಾಈನ್, ಸಂಪುಟ–23, ಪುಟ–368)

ಆದ್ದರಿಂದ ಸತ್ಕರ್ಮ ಕೇವಲ ನಿಕಟ ಸಂಬಂಧಿಕರೊಂದಿಗೆ ಮಾತ್ರವಲ್ಲ, ಬದಲು ಫಲಾಪೇಕ್ಷಿತವಲ್ಲದೆ ಮಾಡಲು ಆದೇಶಿಸಲಾಗಿದೆ. ಇದೇ ಆ ಪದವಿಯಾಗಿದೆ ಆದ್ದರಿಂದ ಅಲ್ಲಾಹನನ್ನು ನಾವು ಪಡೆಯಬಹುದಾಗಿದೆ.

ಹಝ್ರತ್ ಮಸೀಹ್ ಮೌಊದ್ (ಅ) ತನ್ನ ಗ್ರಂಥಗಳಲ್ಲಿ ಮತ್ತು ಸಭೆಗಳಲ್ಲಿ ಈ ಸಂಬಂಧವಗಿ ಅನೇಕ ತಾಕೀತುಗಳನ್ನು ಮಾಡಿರುವರು. ಇಸ್ಲಾಮಿನ ಭವ್ಯ ಗುಣಗಳಲ್ಲಿ ಇದೊಂದು ಮಹತ್ತರ ಗುಣವಾಗಿದೆ. ಅದು ಯಾವ ಧರ್ಮದ ಶಿಕ್ಷಣದಲ್ಲಿಯೂ ಇಲ್ಲ. ಆದ್ದರಿಂದ ಅಲ್ಲಾಹನೊಂದಿಗೆ ಸಂಬಂಧಿಸಿದ ಮಟ್ಟವನ್ನು ಗಳಿಸಲಿಕ್ಕಾಗಿ ಮತ್ತು ಅವನ ದಾಸರ ಹಕ್ಕುಗಳನ್ನು ಈಡೇರಿಸಲಿಕ್ಕಾಗಿ ಅವುಗಳ ಪ್ರಕಾರ ತಡೆಯಲು ಪ್ರಯತ್ನಿಸುವುದು ನಮ್ಮ ಕಡ್ಡಾಯ ಕರ್ತವ್ಯವಾಗಿದೆ. ಅವುಗಳ ಪ್ರಕಾರ ನಮಗೆ ಜೀವನವನ್ನು ನಡೆಸಲು ಅಲ್ಲಾಹನು ಸೌಭಾಗ್ಯ ದಯಪಾಲಿಸಲಿ. ಆರಾಧನೆಯ ಮಟ್ಟವನ್ನು ಗಳಿಸುವಂತಾಗಲಿ, ಅವನ ದಾಸರ ಹಕ್ಕುಗಳನ್ನು ಪಾಲಿಸುವಂತಾಗಲಿ, ವಿಶೇಷವಾಗಿ ಲೋಕಕ್ಕೆ ಮಾದರಿಯಾಗುವ ರೀತಿಯಲ್ಲಿ ಪ್ರೀತಿ ಮತ್ತು ಸ್ನೇಹದ ಸಂಬಂಧವನ್ನು ಸ್ಥಾಪಿಸಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. ಈ ಸಂಗತಿಗಳನ್ನು ಪಾಲಿಸುತ್ತಾ ನಾವು ಬೈಅತ್ತಿನ ಹಕ್ಕುಗಳನ್ನು ಈಡೇರಿಸುವವರಾಗಲಿ. ಅವರ (ಅ) ಬೈಅತ್ತಿನ ಹಕ್ಕುಗಳಲ್ಲಿ "ಮನುಕುಲದೊಂದಿಗೆ ಅನುಕಂಪ ತೋರುವುದು ಸಹ ಒಂದು ಶರತ್ತಾಗಿದೆ. ಪ್ರತಿ ಜುಮಾದಲ್ಲಿ ಈ ಸಂಗತಿಗಳನ್ನು ಆಲಿಸಿ ಅವುಗಳ ಪ್ರಕಾರ ನಡೆಯುವವರಾಗಲಿ, ಇಲ್ಲದಿದ್ದರೆ ನಮ್ಮಲ್ಲಿ ಮತ್ತು ಇತರರಲ್ಲಿ ಯಾವುದೇ ಅಂತರ ಇರದು. ಅಲ್ಲಾಹನು ನಮ್ಮಲ್ಲಿ ಮತ್ತು ಇತರರಲ್ಲಿ ಸ್ಪಷ್ಟವಾದ ವ್ಯತ್ಯಾಸವನ್ನು ತೋರಿಸಲಿ. ಅದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ (ಅ) ಬಹಳ ನೋವಿನೊಂದಿಗೆ ಹೇಳಿರುವರು.
(ಮಲ್ಫೂಝಾತ್, ಸಂಪುಟ–9, ಪುಟ–252, ಸಂಚಿಕೆ 1984)

ಪಾಕಿಸ್ತಾನದ ಅವಸ್ಥೆಗಾಗಿಯೂ ದುಆ ಮಾಡಿರಿ, ನಾವಂತೂ ಒಳಿತುಗಳನ್ನು ಹರಡಲು ನಮ್ಮ ಕೆಲಸಗಳನ್ನು ಮಾಡುತ್ತಾ ಹೋಗಬೇಕಾಗಿದೆ. ಶೈತಾನಿನ ಸ್ವಭಾವವುಳ್ಳ ಜನರು ನಮ್ಮ ಕೆಲಸವಾದ ದೌರ್ಜನ್ಯವನ್ನು ತೋರಿಸುತ್ತಾ ಇರುವರು. ಈ ಶೈತಾನರನ್ನು ನಾವು ಶೈತಾನರ ಹಾಗೆ ವಿರೋಧಿಸುವುದಿಲ್ಲ. ನಾವಂತೂ ಅಲ್ಲಾಹನ ಆದೇಶಗಳ ಪ್ರಕಾರ ನಡೆಯಬೇಕಾಗಿದೆ. ಅಲ್ಲಾಹನು ನಮ್ಮ ವಿಶ್ವಾಸವನ್ನು ಸಂರಕ್ಷಿಸಲಿ ಮತ್ತು ನಮ್ಮ ವಿಶ್ವಾಸ ಚಂಚಲಗೊಳ್ಳದಿರಲಿ ಎಂದು ದುಆ ಮಾಡಿರಿ. ಅಲ್ಲಾಹನೊಂದಿಗೆ ನಮ್ಮ ಸಂಬಂಧವು ಈತಾಯಿದ್ದುಲ್ ಖುರ್‌ಬ್‌ದಂತೆ ಆಗುವುದಾದರೆ ನಾವು ಅಲ್ಲಾಹನ ಅನುಗ್ರಹಳ ದೃಶ್ಯಗಳನ್ನು ಮೊದಲಿಗಿಂತ ಹೆಚ್ಚಾಗಿ ನೋಡುವೆವು. ಇನ್‌ಶಾ ಅಲ್ಲಾಹ್.

ಅಲ್ಲಾಹನ ದೃಷ್ಟಿಯಲ್ಲೂ ಶತ್ರುಗಳಾಗಿರುವವರು ಮತ್ತು ಯಾರ ಸುಧಾಣೆ ಸಾಧ್ಯವಿಲ್ಲವೋ ಅಲ್ಲಾಹನು ಅವರನ್ನು ಸ್ವತಃ ನಾಶಮಾಡಲಿ. ಅಂತಹ ಸ್ಥಿತಿಯಲ್ಲಿ ನಮ್ಮ ಸಂಬಂಧ ಅಲ್ಲಾಹನೊಂದಿಗೆ ಆಗಿರುವುದಾದರೆ ಶತ್ರುಗಳ ನಾಶದ ದೃಶ್ಯಗಳನ್ನು ಕುಡ ನಾವು ನೋಡುವೆವು ಇನ್‌ಶಾ ಅಲ್ಲಾಹ್.

# ಖುತ್‌ಬ ಜುಮುಅ

ಜಗತ್ತಿನಲ್ಲಿ, ಎಲ್ಲಾ ದೇಶಗಳಲ್ಲಿ, ನಮ್ಮ ಪ್ರಾಯೋಗಿಕ ಪರಿಸ್ಥಿತಿಗಳನ್ನು ಸರಿಪಡಿಸಲು ನಾವು ಯೋಜಿಸಿರುವಲ್ಲೆಲ್ಲಾ ಏಕ ದೇವರ ಸಂದೇಶವನ್ನು ತಿಳಿಸಲು ಮಜ್‌ಲಿಸ್ ಶೂರಾವನ್ನು ನಡೆಸಲಾಗುತ್ತದೆ.

ಮತ್ತು ಜಗತ್ತನ್ನು ಪ್ರವಾದಿ ಮುಹ್ಮದ್(ಸ) ಅವರ ಧ್ವಜದ ಅಡಿಯಲ್ಲಿ ತರಲು, ಜಗತ್ತನ್ನು ಉಮ್ಮತೆ ವಾಹಿದವನ್ನಾಗಿ ಮಾಡಲು, ಕ್ರಾಂತಿಯನ್ನು ಸೃಷ್ಟಿಸುವ ಯೋಜನೆಯನ್ನು ಯೋಜಿಸಿ.

ಸದಸ್ಯರ ಕೆಲವು ಜವಾಬ್ದಾರಿಗಳು ಮಜ್ಲಿಸ್-ಎ-ಶೂರಾದ ಶಿಫಾರಸುಗಳು ಮತ್ತು ಖಲೀಫಾ-ಎ-ವಕ್ತ್ ಅವರ ನಿರ್ಧಾರದ ನಂತರವೇ ಪ್ರಾರಂಭವಾಗುತ್ತವೆ ಮತ್ತು ಅವುಗಳನ್ನು ನಿರ್ವಹಿಸುವುದು ಮತ್ತು ಅವರ ಪಾತ್ರವನ್ನು ನಿರ್ವಹಿಸುವುದು ಶೂರಾದ ಪ್ರತಿಯೊಬ್ಬ ಸದಸ್ಯರ ಕರ್ತವ್ಯವಾಗಿದೆ.

ಹಝ್ರತ್ ಅಬೂಹುರೈರ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಹೆಚ್ಚಾಗಿ ತನ್ನ ಸಹಾಬಿಯರಿಂದ ಸಲಹೆ ಪಡೆಯುವವರನ್ನಾಗಿ ನಾನು ಯಾರನ್ನೂ ಕಂಡಿಲ್ಲ.

ಮಜ್ಲಿಸ್ ಶುರಾ ಒಂದು ಸಲಹಾ ಮಂಡಳಿಯೇ ಹೊರತು ನಿರ್ಧಾರ ಕೈಗೊಳ್ಳುವ ಮಂಡಳಿಯಲ್ಲ

ಸರ್ವಶಕ್ತನಾದ ಅಲ್ಲಾಹ ಆದೇಶ ಮತ್ತು ಹಝ್ರತ್ ಪೈಗಂಬರ್(ಸ) ಅವರ ಸುನ್ನತ್ ಪ್ರಕಾರ, ಸಮಯದ ಖಲೀಫರು ಅಲ್ಲಿನ ಪರಿಸ್ಥಿತಿಗಳಿಗೆ ಅನುಗುಣವಾಗಿ ಪ್ರಪಂಚದಾದ್ಯಂತ ಹರಡಿರುವ ಜಮಾಅತ್‌ಗಳಿಂದ ಸಲಹೆಯನ್ನು ಪಡೆಯುತ್ತಾರೆ.

ಏಕೆಂದರೆ ಸಲಹೆಯು ಕೇವಲ ಸಲಹೆಯನ್ನು ನೀಡುವುದಲ್ಲ, ಆದರೆ ಸಲಹೆಯನ್ನು ನೀಡುವವರ ಕ್ರಿಯೆ ಮತ್ತು ವರ್ತನೆ ಮತ್ತು ಆ ಸಲಹೆಯ ಮೇರೆಗೆ ಸ್ವತಃ ಕಾರ್ಯನಿರ್ವಹಿಸುವ ವಾಗ್ದಾನವಾಗಿದೆ.

ನೀವು ಖಿಲಾಫತ್ ಮತ್ತು ಜಮಾಅತಿನ ವ್ಯವಸ್ಥೆಯ ಸಹಾಯಕ ವಿಭಾಗವಾದ ಮಜ್ಲಿಸ್ ಶೂರಾದ ಸದಸ್ಯರಾಗಿರುವಿರಿ. ಸಲಹೆ ನೀಡುವವರ ಸಲಹೆಗಳು ಸದುದ್ದೇಶ ಮತ್ತು ದೇವಭಕ್ತಿಯ ಉನ್ನತ ಮಟ್ಟಗಳ ಅನುಸಾರವಾಗಿ ಇರಬೇಕು. ಈ ರೀತಿಯಲ್ಲಿ ಸಲಹೆಗಾರರದ್ದು ಬಹಳ ದೊಡ್ಡ ಹೊಣೆಗಾರಿಕೆಯಾಗಿದೆ.

ಮಜ್ಲಿಸ್ ಶುರಾವು ಖಿಲಾಫತ್‌ನ ಪೋಷಕ ಸಂಸ್ಥೆಯಾಗಿದೆ ಮತ್ತು ಈ ಅರ್ಥದಲ್ಲಿ ಖಿಲಾಫತ್ ನಂತರ ಜಮಾಅತ್‌ನಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿದೆ ಮತ್ತು ಶೂರಾಗೆ ಚುನಾಯಿತರಾದ ಪ್ರತಿಯೊಬ್ಬ ಸದಸ್ಯರು ಒಂದು ವರ್ಷದ ಸದಸ್ಯರಾಗಿದ್ದಾರೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು.

ಶೂರಾದ ಪ್ರತಿನಿಧಿಗಳು ಪ್ರಾತಿನಿಧ್ಯ ಮತ್ತು ಅಮಾನತ್‌ನ ಹಕ್ಕನ್ನು ಪೂರೈಸಲು ಜನರಿಂದ ಚುನಾಯಿತರಾಗಿದ್ದಾರೆ ಎಂಬುದನ್ನು ಯಾವಾಗಲೂ ನೆನಪಿಡಿ

ಶೂರಾದ ಪ್ರಾತಿನಿಧ್ಯ ಒಂದು ವರ್ಷಕ್ಕೆ ಆಗಿರುತ್ತದೆ. ವ್ಯವಸ್ಥೆಯೊಂದಿಗೆ ಸಹಕಾರ ಮಾಡುವುದು, ತೀರ್ಪುಗಳನ್ನು ಸ್ವತಃ ಪಾಲಿಸುವುದು ಮತ್ತು ಪಾಲಿಸುವಂತೆ ಮಾಡುವುದು ಪ್ರತಿನಿಧಿಗಳ ಕರ್ತವ್ಯವಾಗಿದೆ. ನಿಮ್ಮ ಜಮಾಅತಿನಲ್ಲಿ ಎಷ್ಟರ ಮಟ್ಟಿಗೆ ಖಲೀಫತುಲ್ ಮಸೀಹ್‌ರ ತೀರ್ಪುಗಳ ಪಾಲನೆ ನಡೆಯುತ್ತಿದೆ ಎಂಬುವುದನ್ನು ವೀಕ್ಷಿಸುತ್ತಿರಬೇಕು

ಜಮಾಅತುಗಳ ಕಡೆಯಿಂದ ಕೆಲವು ಸಲಹೆಗಳು ಪುನಃ ಬರುವುದರ ಅರ್ಥವೇನೆಂದರೆ, ಅವುಗಳ ಪ್ರಕಾರ ಕೆಲಸ ನಡೆಯುತ್ತಿಲ್ಲವೆಂದಾಗಿದೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **12-05-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

فَبِمَا رَحْمَةٍ مِّنَ اللّٰهِ لِنْتَ لَهُمْ ۚ وَلَوْ كُنْتَ فَظًّا غَلِيْظَ الْقَلْبِ لَانْفَضُّوْا مِنْ حَوْلِكَ ۖ فَاعْفُ عَنْهُمْ وَاسْتَغْفِرْ لَهُمْ وَشَاوِرْهُمْ فِي الْأَمْرِ ۚ فَإِذَا عَزَمْتَ فَتَوَكَّلْ عَلَى اللّٰهِ ۚ إِنَّ اللّٰهَ يُحِبُّ الْمُتَوَكِّلِيْنَ

ಈ ಅಯತ್‌ನ ಅನುವಾದ ಹೀಗಿದೆ: ಅಲ್ಲಾಹನ ಮಹತ್ತಾದ ಕಾರುಣ್ಯದಿಂದಲೇ ನೀನು ಅವರೊಂದಿಗೆ ಸೌಮ್ಯವಾಗಿ ವರ್ತಿಸುತ್ತಿರುವೆ. ನೀನು ಕ್ರೂರ ಸ್ವಭಾವಿಯೂ ಕಠಿಣ ಹೃದಯಿಯೂ ಆಗಿರುತ್ತಿದ್ದರೆ ಅವರು ನಿನ್ನ ಸುತ್ತಮುತ್ತಲಿನಿಂದ ಅಗಲಿ ಹೋಗುತ್ತಿದ್ದರು. ಆದ್ದರಿಂದ ನೀನು ಅವರಿಗೆ ಕ್ಷಮೆ ನೀಡು; ಅವರ ಪಾಪ ವಿಮುಕ್ತಿಗಾಗಿ ನೀನು ಪ್ರಾರ್ಥಿಸು ಹಾಗೂ ಪ್ರಧಾನ ಕಾರ್ಯಗಳಲ್ಲಿ ನೀನು ಅವರೊಡನೆ ಸಮಾಲೋಚನೆ ನಡೆಸು. ಹಾಗೆ ಯಾವುದೇ ಕಾರ್ಯ ತೀರ್ಮಾನಿಸಲ್ಪಟ್ಟರೆ ನೀನು ಅಲ್ಲಾಹನ ಮೇಲೆ ಭರವಸೆಯನ್ನಿಡು. ಖಂಡಿತವಾಗಿಯೂ ಅಲ್ಲಾಹನು ತನ್ನ ಮೇಲೆ ಭರವಸೆಯನ್ನಿಡುವವರನ್ನು ಪ್ರೀತಿಸುತ್ತಾನೆ.

ಈ ದಿನಗಳಲ್ಲಿ ಅನೇಕ ದೇಶಗಳಲ್ಲಿ ಜಮಾಅತಿನ ಮಜ್‌ಲಿಸ್ ಶೂರಾದ ಸಭೆಗಳು ನಡೆಯುತ್ತಿವೆ. ಕೆಲವು ದೇಶಗಳಲ್ಲಿ ನಡೆದಿದೆ ಮತ್ತು ಕೆಲವು ದೇಶಗಳಲ್ಲಿ ನಡೆಯಲಿವೆ. ಜರ್ಮನಿಯ ಶೂರವು ಇಂದಿನಿಂದ ಪ್ರಾರಂಭವಾಗುತ್ತಿದೆ ಮತ್ತು ಅದರೊಂದಿಗೆ ಅನೇಕ ರಾಷ್ಟ್ರಗಳಿವೆ? ಅದೇ ರೀತಿ ಯು?ಕೆ ಯ ಮಜ್‌ಲಿಸ್ ಶೂರವೂ ಸಹ ಮುಂದಿನ ವಾರ ಆಗಲಿದೆ ಅದರೊಂದಿ ಇನ್ನೂ ಅನೇಕ ರಾಷ್ಟ್ರಗಳ ಶೂರಗಳು ಸಹ ನಡೆಯಲಿದೆ?

ಶೂರಾದ ಮಹತ್ವ ಮತ್ತು ಪ್ರತಿನಿಧಿಗಳ ಹೊಣೆಗಾರಿಕೆಗಳ ಬಗ್ಗೆ ಮುಂಚೆಯೂ ನಾನು ಗಮನ ಸೆಳೆದಿದ್ದೇನೆ. ಅನೇಕ ವರ್ಷಗಳು ಕಳೆದ ನಂತರ ಇಂದು ಈ ಕುರಿತು ಪುನಃ ಅಲ್ಲಾಹನ ಆದೇಶ, ಹಝ್ರತ್ ಪೈಗಂಬರ್(ಸ)ರ ಮಾದರಿ ಮತ್ತು ಜಮಾಅತಿನ ಸಂಪ್ರದಾಯಗಳು ಮತ್ತು ರೀತಿಗಳ ಅನುಸಾರ ಕೆಲವು ಸಂಗತಿಗಳನ್ನು ಹೇಳುವುದು ಅನುಯೋಜ್ಯವೆಂದು

ನನಗೆ ಅನಿಸಿತು. ಶೂರಾದ ಪ್ರತಿನಿಧಿಗಳ ಹೊಣೆಗಾರಿಕೆಗಳಿಗೆ ಸಂಬಂಧಿಸಿ ನೆನಪಿಡಬೇಕಾದ ಈ ಸಂಗತಿಗಳಿಂದ ಈಗಾಗಲೇ ಮಜ್ಲಿಸ್ ಶೂರಾಗಳು ನಡೆದಿರುವ ದೇಶಗಳ ಪ್ರತಿನಿಧಿಗಳು ಕೂಡ ಪ್ರಯೋಜನ ಪಡೆಯಬಹುದಾಗಿದೆ. ಏಕೆಂದರೆ ಮಜ್ಲಿಸ್ ಶೂರಾದ ಶಿಫಾರಸ್ಸುಗಳ ಬಗ್ಗೆ ಖಲೀಫತುಲ್ ಮಸೀಹ್‌ರ ತೀರ್ಮಾನದ ನಂತರವೇ ಪ್ರತಿನಿಧಿಗಳ ಕೆಲವು ಹೊಣೆಗಾರಿಕೆಗಳು ಶುರುವಾಗುತ್ತವೆ. ಅದನ್ನು ಈಡೇರಿಸುವುದು ಮತ್ತು ತಮ್ಮ ಪಾತ್ರವನ್ನು ವಹಿಸಿಕೊಳ್ಳುವುದು ಮಜ್ಲಿಸ್ ಶೂರಾದ ಪ್ರತಿಯೊಬ್ಬ ಸದಸ್ಯನ ಕಡ್ಡಾಯ ಕರ್ತವ್ಯವಾಗಿದೆ.

ಹಝ್ರತ್ ಪೈಗಂಬರ್(ಸ) ಅಲ್ಲಾಹನ ವಿಶಿಷ್ಟ ಕೃಪೆಯಿಂದ ತನ್ನ ಉಮ್ಮತಿನ ಮೇಲೆ ಅತ್ಯಂತ ಸೌಮ್ಯತೆ ತೋರಿಸುವವರಾಗಿದ್ದರು ಎಂದು ನಾನು ಪಠಿಸಿದ ವಚನದಲ್ಲಿ ರುಜುವಾತು ಮಾಡಲಾಗಿದೆ. ಅದರ ಜೊತೆಗೆ ಹಝ್ರತ್ ಪೈಗಂಬರ್(ಸ)ರ ಕೆಲಸವನ್ನು ಮುಂದುವರೆಸುವ ಹೊಣೆಗಾರಿಕೆ ಮತ್ತು ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಗಳ ಪ್ರಕಾರ ಅವರ ದಾಸ್ಯದಲ್ಲಿ ಬಂದ ಹಝ್ರತ್ ಮಸೀಹ್ ಮೌಊದ್(ಅ)ರ ಕೆಲಸವನ್ನು ಈಡೇರಿಸುವ ಹೊಣೆಗಾರಿಕೆ ಯಾರಿಗೆ ಒಪ್ಪಿಸಲಾಗಿದೆಯೋ ಅವರು ಪ್ರೀತಿ ಮತ್ತು ಸ್ನೇಹಭಾವದಿಂದ ಕೆಲಸ ಮಾಡಬೇಕು ಎಂಬುವುದರ ಬಗ್ಗೆಯೂ ಈ ವಚನದಲ್ಲಿ ಗಮನ ಸೆಳೆಯಲಾಗಿದೆ.

ಸೌಮ್ಯತೆ ತೋರಿಸದಿದ್ದರೆ, ಕಠೋರ ಹೃದಯಿಗಳಾದರೆ, ಕೋಪಗೊಳ್ಳುತ್ತಿದ್ದರೆ ಈ ಜನರು ದೂರ ಹೋಗುವರು ಎಂದು ಅಲ್ಲಾಹನು ಹೇಳುತ್ತಾನೆ. ಆದ್ದರಿಂದ ತಪ್ಪುಗಳನ್ನು ಕಡೆಗಣಿಸಲು, ಅವರಿಗಾಗಿ ಕ್ಷಮೆಯಾಚನೆಯ ಪ್ರಾರ್ಥನೆ ಮಾಡಲು ಮತ್ತು ಸಮಾಲೋಚನೆ ನಡೆಸಲು ಅಲ್ಲಾಹನು ಆಜ್ಞಾಪಿಸುತ್ತಾನೆ.

ಒಟ್ಟಿನಲ್ಲಿ ಈ ತತ್ವ ಮತ್ತು ಪಾಠದ ಅನುಸಾರವಾಗಿ ಶೂರಾದ ಸಭೆಗಳನ್ನು ನಡೆಸಲಾಗುತ್ತವೆ. ಹೆಸರಿನಿಂದ ಸ್ಪಷ್ಟವಾಗುವ ಹಾಗೆ ಇದು ತೀರ್ಪು ನೀಡುವ ಸಭೆಯಲ್ಲ. ಬದಲಾಗಿ ಸಲಹೆ ನೀಡುವ ಸಭೆಯಾಗಿದೆ. ಆದ್ದರಿಂದಲೇ ಸಮಾಲೋಚನೆ ನಡೆಸಿದ ನಂತರ ನೀನು ಮಾಡುವ ತೀರ್ಪಿನ ಪ್ರಕಾರ ಅಲ್ಲಾಹನ ಮೇಲೆ ಭರವಸೆ ಇರಿಸುತ್ತಾ ಕೆಲಸ ಮಾಡಬೇಕು ಎಂದು ಹೇಳಲಾಗಿದೆ. ಅದರ ನಂತರ ಅದರ ಫಲಿತಾಂಶಗಳನ್ನು ಅಲ್ಲಾಹನು ಅತ್ಯಂತ ಅನುಗ್ರಹೀತಗೊಳಿಸುವನು ಎಂದು ತಿಳಿಸಲಾಗಿದೆ.

ತವಕ್ಕುಲಿನ ಉನ್ನತ ಮಾದರಿ ಹಝ್ರತ್ ಪೈಗಂಬರ್(ಸ)ರಲ್ಲಿ ಕಾಣಬಹುದಾಗಿದೆ. ಹಝ್ರತ್ ಪೈಗಂಬರ್(ಸ)ರಿಗೆ ಅನೇಕ ವಿಷಯಗಳಲ್ಲಿ ಅಲ್ಲಾಹನ ಕಡೆಯಿಂದ ನೇರವಾಗಿ ಮಾರ್ಗದರ್ಶನ ಲಭಿಸುತ್ತಿತ್ತು. ಆದರೆ ಅಲ್ಲಾಹನ ಸ್ಪಷ್ಟವಾದ ಆದೇಶ ಇಲ್ಲದ ವಿಷಯಗಳಲ್ಲಿ ಹಝ್ರತ್ ಪೈಗಂಬರ್(ಸ) ಖಂಡಿತವಾಗಿಯೂ ಸಮಾಲೋಚನೆ ನಡೆಸುತ್ತಿದ್ದರು. ಜಮಾಅತಿನ ಹುದ್ದೇದಾರರು ಜಮಾಅತಿನ ಜನರೊಂದಿಗೆ ಹೇಗೆ ವರ್ತಿಸಬೇಕು ಮತ್ತು ನಾವು ಕೂಡ ಪರಸ್ಪರ ಸಮಾಲೋಚನೆ ನಡೆಸಬೇಕು ಎಂಬುದನ್ನು ಹಝ್ರತ್ ಪೈಗಂಬರ್(ಸ)ರ ಕೃತ್ಯ ಮತ್ತು ಅಲ್ಲಾಹನ ಆದೇಶ ನಮಗೆ ತಿಳಿಸಿ ಕೊಡುತ್ತದೆ.

ಅಹ್ಮದಿಯಾ ಜಮಾಅತಿಗೆ ಅಲ್ಲಾಹನು ಖಿಲಾಫತ್ ಎಂಬ ಅನುಗ್ರಹವನ್ನು ನೀಡಿರುವನು ಎಂಬುವುದು ಅಲ್ಲಾಹನ ಔದಾರ್ಯವಾಗಿದೆ. ಆದ್ದರಿಂದ ಖಲೀಫತುಲ್ ಮಸೀಹ್‌ರು ಕೂಡ ಅಲ್ಲಾಹನ ಆದೇಶ ಮತ್ತು ಹಝ್ರತ್ ಪೈಗಂಬರ್(ಸ)ರ ನಡವಳಿಕೆ ಕ್ರಮದ ಪ್ರಕಾರ ಲೋಕದ ಜಮಾಅತುಗಳಿಂದ ಅವರ ಸ್ಥಿತಿಗಳ ಅನುಸಾರವಾಗಿ ಸಲಹೆಗಳನ್ನು ಪಡೆಯುತ್ತಾರೆ.

ಅಲ್ಲಾಹನು ಬಯಸಿದ್ದರೆ ಪ್ರತಿಯೊಂದು ವಿಷಯದಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಅವನು ಮಾರ್ಗದರ್ಶನ ಮಾಡಬಹುದಾಗಿತ್ತು. ಆದರೆ ಕೆಲವು ವಿಷಯಗಳಲ್ಲಿ ಸಮಾಲೋಚನೆ ನಡೆಸಲು ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲಾಹನು ಆದೇಶ ನೀಡಿದನು. ಕೆಲವು ವಿಷಯಗಳಲ್ಲಿ ಹಝ್ರತ್ ಪೈಗಂಬರ್(ಸ) ಸಮಾಲೋಚನೆ ನಡೆಸಿರುವುದು ಸತ್ಯದಲ್ಲಿ ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸಲು, ಪರಸ್ಪರ ಸಮಾಲೋಚನೆ ಮತ್ತು ಸಹಕಾರದಿಂದ ಕೆಲಸ ಮಾಡಿಸಲು ಮತ್ತು ಉಮ್ಮತ್ತಿನಲ್ಲಿ ಒಗ್ಗಟ್ಟು ಉಂಟುಮಾಡಲಿಕ್ಕೆ ಆಗಿತ್ತು.

ಇದು ಒಂದು ಹದೀಸಿನಿಂದ ಸ್ಪಷ್ಟವಾಗುತ್ತದೆ. ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ: **ಶಾವಿರ್‌ಹುಂ ಫಿಲ್ ಅಮ್ರಿ** ಎಂಬ ವಚನ ಅವತೀರ್ಣಗೊಂಡಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ಮತ್ತು ಅವನ ಪ್ರವಾದಿಗೆ ಸಮಾಲೋಚನೆಯ ಆವಶ್ಯಕತೆಯಿಲ್ಲವಾದರೂ ಅಲ್ಲಾಹನು ಅದನ್ನು ನನ್ನ ಸಮುದಾಯಕ್ಕೆ ಕರುಣೆಯನ್ನಾಗಿ ಮಾಡಿರುವನು. ಆದ್ದರಿಂದ ಅವರಲ್ಲಿ ಯಾರು ಸಮಾಲೋಚನೆ ನಡೆಸುವರೋ ಅವರು ಸನ್ಮಾರ್ಗದಿಂದ ವಂಚಿತರಾಗಲಾರರು ಮತ್ತು ಯಾರು ಸಮಾಲೋಚನೆ ನಡೆಸುವುದಿಲ್ಲವೋ ಅವರು ಅವಮಾನದಿಂದ ರಕ್ಷಣೆ ಪಡೆಯಲಾರರು. (ಅಲ್‌ಜಾಮಿ ಲಿಶ್‌ಬಲ್ ಈಮಾನ್, ಸಂಪುಟ-10, ಪುಟ-41, ಹದೀಸ್-7136, ಮಕ್ತಬ ಅರ್ರಷದ್ 2003)

ಒಟ್ಟಿನಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಈ ಸಮಾಲೋಚನೆಯ ಆವಶ್ಯಕತೆ ಇದ್ದಿರಲಿಲ್ಲ. ಆದಾಗ್ಯೂ ಉಮ್ಮತಿನ ಮುಂದೆ ಒಂದು ಮಾದರಿಯನ್ನು ತೋರಿಸಲು, ಅದರಿಂದ ಉಮ್ಮತ್ ಸದಾ ಅಲ್ಲಾಹನ ಕೃಪೆಯಿಂದ ಪಾಲು ಪಡೆಯುವಂತಾಗಲು, ಯಾವಾಗಲೂ ಸನ್ಮಾರ್ಗದ ಮಾರ್ಗಗಳಲ್ಲಿ ನಡೆಯುವಂತಾಗಲು ಮತ್ತು ಅವಮಾನದಿಂದ ಸುರಕ್ಷಿತರಾಗಿರಲಿಕ್ಕಾಗಿ ಅವರು ಸಮಾಲೋಚನೆ ನಡೆಸುತ್ತಿದ್ದರು.

ಒಟ್ಟಿನಲ್ಲಿ, ನಮ್ಮಲ್ಲಿ ಶೂರಾದ ವ್ಯವಸ್ಥೆ ರೂಢಿಯಲ್ಲಿದೆ ಎಂಬುದು ನಮ್ಮ ಮೇಲೆ ಅಲ್ಲಾಹನ ವಿಶಿಷ್ಟ ಔದಾರ್ಯವಾಗಿದೆ. ಆದ್ದರಿಂದ ಅಲ್ಲಾಹನು ನಮಗಾಗಿ ಸನ್ಮಾರ್ಗದ ಏರ್ಪಾಡು ಮಾಡಿರುವನು ಎಂಬುವುದಕ್ಕೆ ಪ್ರತಿಯೊಬ್ಬ ಅಹ್ಮದೀ ಸಾಮಾನ್ಯವಾಗಿ ಮತ್ತು ಶೂರಾದ ಪ್ರತಿಯೊಬ್ಬ ಸದಸ್ಯ ವಿಶೇಷವಾಗಿ ಅದಕ್ಕೆ ಬೆಲೆಕೊಡುತ್ತಾ ಅಲ್ಲಾಹನಿಗೆ ಕೃತಜ್ಞತೆ ತೋರಿಸಬೇಕಾಗಿದೆ.

ಹಝ್ರತ್ ಪೈಗಂಬರ್(ಸ) ಅವರು ಯಾವ ಸಂದರ್ಭಗಳಲ್ಲಿ ಸಲಹೆಗಳನ್ನು ಪಡೆದರು ಮತ್ತು ಅವರ ಸಲಹೆಯ ವಿಧಾನದ ಬಗ್ಗೆ ನಾವು ಇತಿಹಾಸದಿಂದ ತಿಳಿದಿರುವದನ್ನು ನಾನು ವಿವರಿಸುತ್ತಿದ್ದೇನೆ. ಈ ವಿಧಾನವನ್ನು ರಸೂಲುಲ್ಲಾಹ್(ಸ) ಅವರ ಖಲೀಫರು ಸಹ ಮುಂದುವರಿಸಿದರು ಮತ್ತು ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸಹ ಅದೇ ವಿಧಾನವನ್ನು ಅನುಸರಿಸಿದರು.

ಹಝ್ರತ್ ಪೈಗಂಬರ್(ಸ) ಸಾಮಾನ್ಯವಾಗಿ ಮೂರು ರೀತಿಗಳಲ್ಲಿ ಸಮಾಲೋಚನೆ ನಡೆಸುತ್ತಿದ್ದರು. ಆ ವಿಧಗಳನ್ನೇ ಖಲೀಫರು ಜಾರಿಯಲ್ಲಿರಿಸಿದ್ದರು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಸಹ ಅವುಗಳನ್ನೇ ಪಾಲಿಸುತ್ತಿದ್ದರು. ಒಂದನೆಯದಾಗಿ, ಸಮಾಲೋಚನೆ ನಡೆಸಬೇಕಾದ ಯಾವುದಾದರೂ ವಿಷಯವಿದ್ದರೆ, ಒಬ್ಬ ವ್ಯಕ್ತಿಯ ಮೂಲಕ ಘೋಷಿಸಿದ ನಂತರ ಜನರು ಒಟ್ಟು ಸೇರುತ್ತಿದ್ದರು. ಸಲಹೆ ಅಥವಾ ಸಮಾಲೋಚನೆ ನಡೆಸಲಾದ ನಂತರ ಹಝ್ರತ್ ಪೈಗಂಬರ್(ಸ) ತೀರ್ಮಾನ ಮಾಡುತ್ತಿದ್ದರು. ಆ ಕಾಲದಲ್ಲಿ ಪ್ರಭುತ್ವ ವ್ಯವಸ್ಥೆ (ಸರ್ದಾರಿ ನಿಝಾಮ್) ಇದ್ದ ಕಾರಣ ಸಾಮಾನ್ಯವಾಗಿ ಗೋತ್ರದ ಅನೇಕ ಜನರು ಸೇರುತ್ತಿದ್ದರು ಆದರೆ ಸರದಾರರು ಅಥವಾ ಅಮೀರ್‌ಗಳು ಮಾತ್ರ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಿದ್ದರು. ಅವರಿಗೆ ಒಬ್ಬ ಪ್ರತಿನಿಧಿ ಇರುತ್ತಿದ್ದರು. ಮತ್ತು ನಮ್ಮ ಪರವಾಗಿ ನಮ್ಮ ಸರ್ದಾರ ಅಥವಾ ಅಮೀರ್ ಅಭಿಪ್ರಾಯವನ್ನು ನೀಡಬೇಕು ಎಂದು ಜನರು ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದರು. ಅದಕ್ಕಿಂತ ಹೆಚ್ಚಾಗಿ, ಆ ಕಾಲದ ಪದ್ಧತಿಗೆ ವಿರುದ್ಧವಾಗಿ, ಯಾರಾದರೂ ಉತ್ಸಾಹದಿಂದ ತಮ್ಮ ಅಭಿಪ್ರಾಯವನ್ನು ನೀಡಲು ಪ್ರಯತ್ನಿಸಿದರೆ, ಹಝ್ರತ್ ಪೈಗಂಬರ್(ಸ) ಅವರು ತಮ್ಮ ಮುಖ್ಯಸ್ಥ ಅಥವಾ ಅಮೀರ್‌ಗೆ ಮುಂದೆ ಬಂದು ತಮ್ಮ ಅಭಿಪ್ರಾಯವನ್ನು ತಿಳಿಸಲು ಹೇಳುತ್ತಿದ್ದರು. ನಿಮ್ಮ ಮಾತಿಗೆ ಹೀಗೆ ಯಾವುದೇ ಮಹತ್ವವಿಲ್ಲ. ಆದ್ದರಿಂದ ಇದು ಒಂದು ವಿಧಾನವಾಗಿತ್ತು.

ಎರಡನೆಯ ರೀತಿ, ಸಮಾಲೋಚನೆ ನಡೆಸಲು ಯೋಗ್ಯರಾದ ಕೆಲವರನ್ನು ಮಾತ್ರ ಹಝ್ರತ್ ಪೈಗಂಬರ್(ಸ) ಕರೆಯುತ್ತಿದ್ದರು ಮತ್ತು ಆ ಜನರ ಸಭೆಯಿಂದ ಸಲಹೆ ಪಡೆಯುತ್ತಿದ್ದರು.

ಮೂರನೇ ರೀತಿ, ಎರಡು ಮಂದಿ ಕೂಡ ಒಟ್ಟು ಸೇರಬಾರದು ಎಂದು ಹಝ್ರತ್ ಪೈಗಂಬರ್(ಸ) ಭಾವಿಸುತ್ತಿದ್ದ ಸಂದರ್ಭದಲ್ಲಿ ಒಬ್ಬೊಬ್ಬರನ್ನು ಕರೆದು ಸಲಹೆ ಪಡೆಯುತ್ತಿದ್ದರು. ಮೊದಲು ಒಬ್ಬರನ್ನು ಸಲಹೆಗೆ ಕರೆದು, ನಂತರ ಇನ್ನೊಬ್ಬರನ್ನು ಸಲಹೆಗೆ ಕರೆದು ಸಲಹೆ ಪಡೆಯುತ್ತಿದ್ದರು. (ಖುತ್ಬಾತೆ ಶೂರ, ಸಂಪುಟ-1, ಪುಟ-6-7, ಮಜ್‌ಲಿಸ್ ಮುಶಾವಿರತ್ 1922) ಹೀಗೆ ಹಝ್ರತ್ ಪೈಗಂಬರ್(ಸ) ಅವರ ಸಲಹೆಗಳನ್ನು ಪಡೆಯುವ ಈ ಮೂರು ವಿಧಾನಗಳಿದ್ದವು. ಮತ್ತು ರಸೂಲುಲ್ಲಾಹ್(ಸ) ಅವರ ಖಲೀಫರು ಸಹ ಈ ವಿಧಾನಗಳನ್ನೇ ಅನುಸರಿಸುತ್ತಿದ್ದರು. ಮುಂಚೆಯೇ ಹೇಳಲಾಗಿದೆ ಹಝ್ರತ್ ಪೈಗಂಬರ್(ಸ) ಅವರಿಗೆ ಈ ಸಮಾಲೋಚನೆಗಳ ಅವಶ್ಯಕತೆಯೇ ಇರಲಿಲ್ಲ ಆದರೆ ಇದರ ಹೊರತಾಗಿಯೂ, ಅವರು(ಸ) ವಿವಿಧ ಸಂದರ್ಭಗಳಲ್ಲಿ ಅವರು ಬಹಳಷ್ಟು ಸಲಹೆಗಳನ್ನು ಪಡೆದರು ಎಂದು ನಮಗೆ ಇತಿಹಾಸದಿಂದ ತಿಳಿಯುತ್ತದೆ. ಹಝ್ರತ್ ಅಬೂಹುರೈರ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಹೆಚ್ಚಾಗಿ ತನ್ನ ಸಹಾಬಿಯರಿಂದ ಸಲಹೆ ಪಡೆಯುವವರನ್ನಾಗಿ ನಾನು ಯಾರನ್ನೂ ಕಂಡಿಲ್ಲ. (ಸುನನ್ ಅತ್ತಿರ್ಮಿಧಿ, ಅಬ್ವಾಬುಲ್ ಜಿಹಾದ್, ಹದೀಸ್-1714)

ಇವೆಲ್ಲವೂ ಏಕೆಂದರೆ, ಅಲ್ಲಾಹನಿಂದ ನೇರವಾಗಿ ಮಾರ್ಗದರ್ಶನ ಗಳಿಸುತ್ತಿದ್ದ ಹಝ್ರತ್ ಪೈಗಂಬರ್(ಸ) ಸಮಾಲೋಚನೆ ನಡೆಸುತ್ತಿರುವಾಗ, ಸಮಾಲೋಚನೆಯ ಪ್ರಾಮುಖ್ಯವನ್ನು ಮನವರಿಕೆ ಮಾಡಲು ನೀವೆಷ್ಟು ಪ್ರಯತ್ನಿಸಬೇಕು ಎಂಬುದನ್ನು ತಿಳಿಸಿಕೊಡಲಿಕ್ಕಾಗಿದೆ. ಹಝ್ರತ್ ಪೈಗಂಬರ್(ಸ) ಅವರ ಸಲಹೆಯ ಒಂದು ಘಟನೆಯನ್ನು ವಿವರಿಸುತ್ತಿದ್ದೇನೆ. ಇದು ಹದೀಸ್‌ನಲ್ಲಿ ಉಲ್ಲೇಖವಾಗಿದೆ: ಹಝ್ರತ್ ಮುಆದ್ ಬಿನ್ ಜಬಲ್(ರ) ಹೇಳುತ್ತಾರೆ, ರಸೂಲುಲ್ಲಾಹ್(ಸ) ಅವರು ನನ್ನನ್ನು ಯೆಮೆನ್‌ಗೆ ಕಳುಹಿಸಲು ನಿರ್ಧರಿಸಿದಾಗ, ರಸೂಲುಲ್ಲಾಹ್(ಸ) ಅವರು ಅನೇಕ ಸಹಾಬಗಳಿಂದ ಸಲಹೆಯನ್ನು ಕೇಳಿದರು. ಈ ಸಹಾಬರಲ್ಲಿ ಅಬೂಬಕರ್(ರ), ಉಮರ್(ರ), ಉಸ್ಮಾನ್(ರ), ತಲ್ಹಾ(ರ),

ಜುಬೈರ್(ರ) ಮತ್ತು ಇತರ ಅನೇಕ ಸಹಾಬರವರು ಇದ್ದರು. ಹಝ್ರತ್ ಅಬೂಬಕರ್(ರ.ಅ) ಹೇಳಿದರು, ರಸೂಲುಲ್ಲಾಹ್(ಸ) ಅವರು ನಮ್ಮಿಂದ ಸಲಹೆ ಕೇಳದಿದ್ದರೆ, ನಾವು ಮಾತನಾಡುತ್ತಿರಲಿಲ್ಲ. ರಸೂಲುಲ್ಲಾಹ್(ಸಲ್ಲಲ್ಲಾಹು ಅಲೈಹಿವಸಲ್ಲಮರು) ಅವರಿಗೆ ಹೇಳಿದರು, ಯಾವ ವಿಷಯದ ಕುರಿತು ಸರ್ವಶಕ್ತನಾದ ಅಲ್ಲಹನ ದೈವವಾಣಿಯಾಗುವುದಿಲ್ಲವೊ ಆ ವಿಷಯಗಳ ಬಗ್ಗೆ ನಾನು ನಿಮ್ಮಂತೆಯೇ ಇದ್ದೇನೆ.

ನನಗೆ ದೈವವಾಣಿಯಾಗದ ವಿಷಯಗಳ ಬಗ್ಗೆ ನಾನು ನಿಮ್ಮಂತೆಯೇ ಇದ್ದೇನೆ. ಮುಆದ್(ರ) ಹೇಳುತ್ತಾರೆ, ಹಝ್ರತ್ ಪೈಗಂಬರ್(ಸ) ಅವರ ಮಾತಿನ ಪ್ರಕಾರ ಹಝ್ರತ್ ಪೈಗಂಬರ್(ಸ) ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುವಾಗ, ಪ್ರತಿಯೊಬ್ಬ ವ್ಯಕ್ತಿಯು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದನು ಮತ್ತು ಅದರ ನಂತರ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು: ಮುಆದ್! ನೀವು ಹೇಳಿ. ನಿಮ್ಮ ಅಭಿಪ್ರಾಯುವೇನು? ಹಝ್ರತ್ ಅಬೂಬಕರ್(ರ) ಅವರ ಅಭಿಪ್ರಾಯವನ್ನೇ ನಾನು ಹೊಂದಿದ್ದೇನೆ ಎಂದು ಹೇಳಿದೆ.(ಅಲ್–ಮುಅ್‌ಜಮ್ ಅಲ್ ಕಬೀರ್ ಲಿತ್ತಬರಾನಿ, ಸಂಪುಟ–20, ಪುಟ–67, ಹದೀಸ್–124, ದಾರ್ ಅಹ್ಯಾಉತ್ತುರಾಸುಲ್ ಅರಬಿ)

ಹೀಗೆ ಹಝ್ರತ್ ಪೈಗಂಬರ್(ಸ) ಅವರು ನಿಮ್ಮನ್ನೂ ಕೇಳಿದರು. ಇದರಿಂದ, ಹಝ್ರತ್ ಪೈಗಂಬರ್(ಸ) ಅವರ ಈ ಅಭಿವ್ಯಕ್ತಿಯು ಅವರ ಸರಳತೆ ಮತ್ತು ನಮ್ರತೆ ಮತ್ತು ಸಲಹೆಯ ಮಹತ್ವವನ್ನು ತೋರಿಸುತ್ತದೆ. ನಾವು ಎಷ್ಟು ಸಲಹೆಯನ್ನು ನೀಡಬೇಕು ಮತ್ತು ಸಹಾಬಿಗಳ ಮಾದರಿಯನ್ನು ನೀಡಬೇಕು ಎಂಬುದು ನಮಗೆ ಉತ್ತಮ ಉದಾಹರಣೆಯಾಗಿದೆ. ಹಝ್ರತ್ ಪೈಗಂಬರ್(ಸ) ಅವರು ಅಲ್ಲಾಹನ ಆಜ್ಞೆಯ ಪ್ರಕಾರ ಸಲಹೆ ನೀಡುತ್ತಿದ್ದರು, ಮತ್ತು ಹಝ್ರತ್ ಪೈಗಂಬರ್(ಸ) ಅವರು ಸೂಚಿಸಿದರೆ ಸಹಾಬರವರು ತಮ್ಮ ತಮ್ಮ ಸಾಮರ್ಥ್ಯ ಹಾಗೂ ಅನಿಭವಗಳ ಪ್ರಕಾರ ಧರ್ಮನಿಷ್ಠೆಯ ಆಧಾರದ ಮೇಲೆ ಸಲಹೆಗಳನ್ನು ನೀಡುತ್ತಿದ್ದರು.

ನಂತರ ಮದೀನಾಕ್ಕೆ ವಲಸೆ ಬಂದ ನಂತರವೂ ಮಕ್ಕಾದ ಕಾಫಿರ್ಗಳು ಮುಸ್ಲಿಮರ ಶಾಂತಿ ಮತ್ತು ನೆಮ್ಮದಿಯನ್ನು ಹಾಳು ಮಾಡಲು ಪ್ರಯತ್ನಿಸಿದಾಗ ಹಝ್ರತ್ ಪೈಗಂಬರ್(ಸ) ಅವರು ಸಹಾಬಿಗಳೊಂದಿಗೆ ಸಮಾಲೋಚಿಸಿ ಅನ್ಸಾರ ನಾಯಕರನ್ನು ಸೇರಿಸಿಕೊಂಡರು. ವಲಸಿಗರ ಮತ್ತು ನಂತರ ಮುಹಾಜಿರೀನ್ ಮತ್ತು ಅನ್ಸಾರ್‌ರ ಮುಖ್ಯಸ್ಥರ ಸಲಹೆ ಮತ್ತು ಒಪ್ಪಿಗೆಯೊಂದಿಗೆ ಅವರು ಬದ್ರ್‌ಗೆ ತೆರಳಿದರು. ಮತ್ತು ಅನ್ಸಾರ್‌ಗಳ ನಾಯಕರು ಈ ಸಮಾಲೋಚನೆಯ ಸಮಯದಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಠೆಯ ಉದಾಹರಣೆಯನ್ನು ತೋರಿಸಿದರು ಮತ್ತು ಪ್ರತಿಜ್ಞೆಯನ್ನು ಮಾಡಿದರು ಹಝ್ರತ್ ಪೈಗಂಬರ್(ಸ) ಅವರು ಬಹಳ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.
(ಸೀರತ್ ಖಾತಮನ್ನಬೀಈನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–354–355)

ಏಕೆಂದರೆ ಸಲಹೆಯು ಕೇವಲ ಸಲಹೆಯನ್ನು ನೀಡುವುದಲ್ಲ, ಆದರೆ ಸಲಹೆಯನ್ನು ನೀಡುವವರ ಕ್ರಿಯೆ ಮತ್ತು ವರ್ತನೆ ಮತ್ತು ಆ ಸಲಹೆಯ ಮೇರೆಗೆ ಸ್ವತಃ ಕಾರ್ಯನಿರ್ವಹಿಸುವ ವಾಗ್ದಾನವಾಗಿದೆ.

ಕಾರ್ಯನಿರ್ವಹಿಸಲು ಬದ್ಧತೆ ಇಲ್ಲದಿದ್ದರೆ ಮತ್ತು ನಂತರ ವಾಸ್ತವದಲ್ಲಿ ಅದನ್ನು ಅನುಸರಿಸದಿದ್ದರೆ, ಸಲಹೆ ನಿಷ್ಪ್ರಯೋಜಕವಾಗಿದೆ. ಮತ್ತು ಬದ್ರ್ ಮೈದಾನದಲ್ಲಿಯೂ ಹಝ್ರತ್ ಪೈಗಂಬರ್(ಸ)ರಿಗೆ ಸಲಹೆ ನೀಡಿದ ನಂತರ ಅದರ ಪ್ರಕಾರ ಸಹಾಬಿಯರು ನಡೆದುಕೊಂಡರು ಮತ್ತು ಜೀವತ್ಯಾಗ ಮಾಡಲು ಕೂಡ ತಯಾರಾದರು. ಆದ್ದರಿಂದ ಶೂರಾದ ನಮ್ಮ ಸದಸ್ಯರು ಕೂಡ ನೆನಪಿಡಬೇಕಾದ ಸಂಗತಿ ಏನೆಂದರೆ, ಮೊತ್ತಮೊದಲಾಗಿ ಸಲಹೆಗಳ ಮತ್ತು ತೀರ್ಮಾನಗಳ ಮಂಜೂರಾತಿಯ ನಂತರ ಅದನ್ನು ಕಾರ್ಯಗತಗೊಳಿಸಲು ಎಲ್ಲ ವಿಧದ ತ್ಯಾಗಗಳನ್ನು ಮಾಡಲು ತಮ್ಮನ್ನು ಸ್ವತಃ ತಯಾರು ಮಾಡಬೇಕು.

ನೀವು ಖಿಲಾಫತ್ ಮತ್ತು ಜಮಾಅತಿನ ವ್ಯವಸ್ಥೆಯ ಸಹಾಯಕ ವಿಭಾಗವಾದ ಮಜ್ಲಿಸ್ ಶೂರಾದ ಸದಸ್ಯರಾಗಿರುವಿರಿ. ಸಲಹೆ ನೀಡುವವರ ಸಲಹೆಗಳು ಸದುದ್ದೇಶ ಮತ್ತು ದೇವಭಕ್ತಿಯ ಉನ್ನತ ಮಟ್ಟಗಳ ಅನುಸಾರವಾಗಿ ಇರಬೇಕು. ಈ ರೀತಿಯುಲ್ಲಿ ಸಲಹೆಗಾರರದ್ದು ಬಹಳ ದೊಡ್ಡ ಹೊಣೆಗಾರಿಕೆಯಾಗಿದೆ. ಅವರ ದೇವಭಕ್ತಿಯ ಮಟ್ಟ ಹೇಗಿದೆ ಎಂದು ಅವರು ಸ್ವತಃ ನೋಡಬೇಕು. ಹಝ್ರತ್ ಅಲಿ(ರ)ರ ಒಂದು ವರದಿ ಇದನ್ನು ಬಹಳ ಸ್ಪಷ್ಟವಾಗಿ ತಿಳಿಸುತ್ತಿದೆ. **ಶಾವಿರುಲ್ ಫುಖಹಾಅ ವಲ್ ಆಬಿದೀನ್** ಎಂದರೆ ವಿವೇಕವಂತರೂ ಆರಾಧಕರೂ ಆಗಿರುವವರೊಡನೆ ಸಮಾಲೋಚನೆ ನಡೆಸಿರಿ. ಪ್ರತಿಯೊಬ್ಬರಿಂದಲ್ಲ. ಪ್ರತಿನಿಧಿಗಳ ಮಟ್ಟ ಇದಾಗಿರಬೇಕು.

ಪ್ರತಿನಿಧಿಗಳನ್ನು ಆಯ್ಕೆ ಮಾಡುವವರಿಗೂ ಇದರಲ್ಲಿ ಉಪದೇಶವಿದೆ. ಸಲಹೆ ನೀಡಬಲ್ಲವರೂ ಧಾರ್ಮಿಕ ಅರಿವಿನಲ್ಲಿ ಉತ್ತಮರೂ ಆರಾಧನೆಯ ಮಟ್ಟದಲ್ಲಿ ಉತ್ತಮರೂ ಆಗಿರುವವರನ್ನು ತಮ್ಮವರಿಂದ ಆಯ್ಕೆ ಮಾಡಬೇಕು.

ಈ ಮಾನದಂಡವನ್ನು ಗಮನದಲ್ಲಿಟ್ಟುಕೊಂಡು ಪ್ರತಿನಿಧಿಗಳನ್ನು ಆಯ್ಕೆ ಮಾಡಿದಲ್ಲೆಲ್ಲಾ, ಪ್ರತಿನಿಧಿಗಳ ಅಭಿಪ್ರಾಯದಲ್ಲಿ ಗಮನಾರ್ಹ ವ್ಯತ್ಯಾಸವನ್ನು ನಾನು ನೋಡಿದ್ದೇನೆ. ಮತ್ತು ಜಮಾಅತ್‌ನ ಸದಸ್ಯರು ಯಾರನ್ನಾದರೂ ಉತ್ತಮ ನಂಬಿಕೆಯಿಂದ ಶೂರಾದ ಪ್ರತಿನಿಧಿಯಾಗಿ ಆಯ್ಕೆ ಮಾಡಿದ್ದರೆ, ಅವರು ಈ ಸದ್ಭಾವನೆಯನ್ನು ಪೂರೈಸಬೇಕು ಎಂಬುದು ಈ ಪ್ರತಿನಿಧಿಗಳ ಜವಾಬ್ದಾರಿಯಾಗಿದೆ. ಒಂದು ದಿನ ಅಥವಾ ಕೆಲವೇ ವಾರಗಳಲ್ಲಿ, ಯಾರೂ ಜ್ಞಾನದ ಉನ್ನತ ಗುಣಮಟ್ಟ ಮತ್ತು ಧರ್ಮದ ಆಳವನ್ನು ತಿಳಿದುಕೊಳ್ಳಲು ಅಥವಾ ಸಾಧಿಸಲು ಸಾಧ್ಯವಿಲ್ಲ, ಆದರೆ ಪ್ರತಿಯೊಬ್ಬರೂ ಧಾರ್ಮಿಕತೆಯ ಆಧಾರದ ಮೇಲೆ ಮತ್ತು ಎಲ್ಲಾ ರೀತಿಯ ಆಸಕ್ತಿಗಳ ಆಧಾರದ ಮೇಲೆ ತಮ್ಮ ಅಭಿಪ್ರಾಯವನ್ನು ನೀಡಬಹುದು. ಅದೇ ರೀತಿಯಲ್ಲಿ, ಸರ್ವಶಕ್ತನಾದ ಅಲ್ಲಾಹನ ಆಸ್ತಾನದಲ್ಲಿ ಬಾಗುವಾಗ, ಅಲ್ಲಾಹನಿಂದ ಸಹಾಯವನ್ನು ಯಾಚಿಸುವಾಗ, ದುಆನೊಂದಿಗೆ ಮಜ್‌ಲಿಸ್ ಶೂರಾ ನಡೆಯುವ ಸ್ಥಳಗಳ ಪ್ರತಿನಿಧಿಗಳು ತಮ್ಮ ಅಭಿಪ್ರಾಯವನ್ನು ನೀಡಬೇಕು. ಯಾವುದೇ ಭಾಷಣಕಾರರ ಭಾಷಣದಿಂದ ಪ್ರಭಾವಿತರಾಗುವುದಲ್ಲ. ಮತ್ತು ಯಾವುದೇ ಸಂಬಂಧ ಅಥವಾ ಸ್ನೇಹವನ್ನು ಮನಸ್ಸಿನಲ್ಲಿಟ್ಟುಕೊಂಡು, ಇತರರ ಅಭಿಪ್ರಾಯದೊಂದಿಗೆ ಒಬ್ಬನು ತನ್ನ ಅಭಿಪ್ರಾಯವನ್ನು ಸಂಯೋಜಿಸುವುದಲ್ಲ ಮತ್ತು ಯಾವುದೇ ಭಯ ಅಥವಾ ಪರಿಗಣನೆಯಿಂದ ಒಬ್ಬನು ತನ್ನ ಅಭಿಪ್ರಾಯವನ್ನು ಬದಲಾಯಿಸಬಾರದು, ಬದಲಿಗೆ ಧರ್ಮನಿಷ್ಠೆಯನ್ನು ಮುಂದಿಟ್ಟು, ಜಮಾಅತ್‌ನ ಹಿತಾಸಕ್ತಿಯನ್ನು ಎಲ್ಲಕ್ಕಿಂತ ಮೊದಲು ಇರಿಸಿ ಅಭಿಪ್ರಾಯವನ್ನು ನೀಡಿದಾಗ ಮತ್ರ ಓರ್ವ ಸದಸ್ಯನು ಪ್ರತಿನಿಧಿಯ ಹಕ್ಕನ್ನು ಈಡೇರಿಸುವವನಾಗುತ್ತಾನೆ.

ಸರ್ವಶಕ್ತನಾದ ಅಲ್ಲಾಹನು ನಮ್ಮ ಹೃದಯದ ಸ್ಥಿತಿಯನ್ನು ತಿಳಿದಿದ್ದಾನೆ ಮತ್ತು ನಮ್ಮ ಪ್ರತಿಯೊಂದು ಕ್ರಿಯೆಯನ್ನು ನೋಡುತ್ತಿದ್ದಾನೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು. ನಾನು ಅಲ್ಲಾಹನ ಸಂತೃಪ್ತಿಯನ್ನು ಮುಂದಿಟ್ಟುಕೊಂಡು ಕಾರ್ಯನಿರ್ವಹಿಸದಿದ್ದರೆ ಸರ್ವಶಕ್ತನಾದ ಅಲ್ಲಾಹನ ಅಸಮಾಧಾನವನ್ನು ತೆಗೆದುಕೊಳ್ಳುವವನಾಗಬಾರದು. ಅದೇ ರೀತಿಯಲ್ಲಿ, ಶೂರಾ ನಡೆದ ಸ್ಥಳಗಳಲ್ಲಿ, ಶೂರಾದ ಸದಸ್ಯರು ಈಗ ತಮ್ಮ ಹಕ್ಕನ್ನು ಈಡೇರಿಸಬೇಕು, ಅವರು ತಮ್ಮ ಪ್ರಾಯೋಗಿಕ ಮಾದರಿಗಳನ್ನು ಯಾವಾಗಲೂ ತಮ್ಮ ಆಧ್ಯಾತ್ಮಿಕ ಮತ್ತು ಪ್ರಾಯೋಗಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮತ್ತು ತೆಗೆದುಕೊಂಡ ನಿರ್ಧಾರಗಳನ್ನು ಅನುಸರಿಸಲು ಪ್ರತಿಜ್ಞೆ ಮಾಡಬೇಕು. ಮತ್ತು ಯಾವ ನಿರ್ಧರಿಸಲ್ಪಟ್ಟ ನಿರ್ಧಾರಳು ಅಥವಾ ನಿರ್ಧರಿಸಬೇಕಾದ ನಿರ್ಧಾರಗಳನ್ನು ಧರ್ಮನಿಷ್ಠೆಯಿಂದ ಅನುಸರಿಸಲು ಪ್ರಯತ್ನಿಸಬೇಕು.

ನಾವು ಈ ಸ್ಥಿತಿಯನ್ನು ರಚಿಸಿದಾಗ, ನಾವು ಸರ್ವಶಕ್ತನಾದ ಅಲ್ಲಾಹನ ಕರುಣೆಯನ್ನು ಗ್ರಹಿಸಿಕೊಳ್ಳುತ್ತೇವೆ ಮತ್ತು ನಮ್ಮ ನಿರ್ಧಾರಗಳು ಅನುಗ್ರಹಿಸಲ್ಪಡುತ್ತವೆ, ಇಲ್ಲದಿದ್ದರೆ ನಮ್ಮ ಸಭೆ ಮತ್ತು ನಮ್ಮ ಅಭಿಪ್ರಾಯಕ್ಕಾಗಿ ಬಲವಾದ ಭಾಷಣಗಳನ್ನು ಮಾಡುವುದು ಧರ್ಮನಿಷ್ಠೆ ಕಾಣೆಯಾದ ಲೌಕಿಕ ಸಭೆಗಳಂತೆಯೇ ಇರುತ್ತದೆ. ಮತ್ತು ಕೆಲವೊಮ್ಮೆ ನಿರ್ಧಾರಗಳು ಹೇಗಾಗುತ್ತವೆ ಅಂದರೆ ನೈತಿಕತೆಯನ್ನು ಉಲ್ಲಂಘಿಸುತ್ತಿರುತ್ತದೆ ಮತ್ತು ಸರ್ವಶಕ್ತನಾದ ಅಲ್ಲಾಹನ ಆಜ್ಞೆಗಳಿಗೆ ವಿರುದ್ಧವಾಗಿರುತ್ತದೆ. ತಮ್ಮ ಪಕ್ಷದ ಉದ್ದೇಶಗಳನ್ನು ಮುಂದಿಡಲಾಗುತ್ತದೆ. ಕೆಲವೊಮ್ಮೆ ಇಂತಹ ತಪ್ಪು ನಿರ್ಧಾರಗಳ ಪರಿಣಾಮಗಳು ಬೇಗನೆ ಹೊರಬರುತ್ತವೆ, ಅದು ಶಾಂತಿ ಮತ್ತು ನೆಮ್ಮದಿಯನ್ನು ಹಾಳುಮಾಡುತ್ತದೆ ಮತ್ತು ಕೆಲವೊಮ್ಮೆ ಪರಿಣಾಮಗಳು ತಡವಾಗಿ ಹೊರಬರುತ್ತವೆ ಆದರೆ ಅವುಗಳಲ್ಲಿ ಯಾವುದೇ ಅನುಗ್ರಹಗಳು ಇರುವುದಿಲ್ಲ, ಏನೇ ಇರಲಿ ಸರ್ವಶಕ್ತನಾದ ಅಲ್ಲಾಹನ ಕಾನೂನು ಮತ್ತು ಆಜ್ಞೆಗಳಿಗೆ ಅನುಗುಣವಾಗಿ ರಚಿಸಿರುವಂತಹ ನಿರ್ಧಾರಗಳು ಅದು ಪರಸ್ಪರ ವಿರುದ್ಧವಾಗಿದ್ದರೆ, ಅಂತಿಮವಗಿ ಅದು ಖೌಮಿನ ವಿನಾಶಕ್ಕೆ ಮೂಲವಾಗುತ್ತಾರೆ.

ಆದ್ದರಿಂದ ಲೌಕಿಕ ಜನರ ಸ್ಥಿತಿಗತಿಗಳನ್ನು ನೋಡಿದ ನಂತರವೂ ನಾವು ನಮ್ಮ ಸ್ಥಿತಿಯನ್ನು ಸುಧಾರಿಸುವತ್ತ ಗಮನಹರಿಸಬೇಕು.

ನಾನು ಹೇಳಿದಂತೆ, ಶೂರಾ ಸದಸ್ಯರ ಸಲಹೆಗಳನ್ನು ಕಾಲಘಟ್ಟದ ಖಲೀಫರಿಗೆ ಪ್ರಸ್ತುತಪಡಿಸಲಾಗುತ್ತದೆ ಮತ್ತು ಈ ಶೂರಾವನ್ನು ಕಾಲಘಟ್ಟದ ಖಲೀಫರ ಕೋರಿಕೆಯ ಮೇರೆಗೆ ಮಾತ್ರ ಕರೆಯಲಾಗುತ್ತದೆ. ಆದ್ದರಿಂದ ಮಜ್ಲಿಸ್ ಶುರಾವು ಖಿಲಾಫತ್‌ನ ಪೋಷಕ ಸಂಸ್ಥೆಯಾಗಿದೆ ಮತ್ತು ಈ ಅರ್ಥದಲ್ಲಿ ಖಿಲಾಫತ್ ನಂತರ ಜಮಾಅತ್‌ನಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿದೆ ಮತ್ತು ಶೂರಾಗೆ ಚುನಾಯಿತರಾದ ಪ್ರತಿಯೊಬ್ಬ ಸದಸ್ಯರು ಒಂದು ವರ್ಷದ ಸದಸ್ಯರಾಗಿದ್ದಾರೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು. ಈ ಪ್ರಾಮುಖ್ಯತೆಯನ್ನು ಅವನು ಯಾವಾಗಲೂ ತನ್ನ ಮುಂದೆ ಇಡಬೇಕು. ಶೂರಾ ಅವರ ಅಜೆಂಡಾ ಮತ್ತು ಸಲಹೆಯಿಂದ ಕಾಲಘಟ್ಟದ ಖಲೀಫರು ವಿವಿಧ ದೇಶಗಳಲ್ಲಿ ಇರುವ ಸಮಸ್ಯೆಗಳನ್ನು ಸಹ ಅರಿತುಕೊಳ್ಳುತ್ತಾರೆ ಮತ್ತು ನಂತರ ಬರುವ ಅಭಿಪ್ರಾಯಗಳಿಂದ, ಈ ಸಮಸ್ಯೆಗಳನ್ನು ಪರಿಹರಿಸುವ ಯೋಜನೆಯೂ ಹೊರಬರುತ್ತದೆ. ಕೆಲವೊಮ್ಮೆ ಕೆಲವು ವಿಷಯಗಳನ್ನು ಸಮಸ್ಯೆಯ ಪರಿಹಾರದ ಬಗ್ಗೆ ಸಂಪೂರ್ಣ ವಿವರವಾಗಿ ವಿವರಿಸಲಾಗುವುದಿಲ್ಲ ಅಥವಾ ಅವು ಶೂರಾ ಸದಸ್ಯರ ಮುಂದೆ ಬರುವುದಿಲ್ಲ, ಆದ್ದರಿಂದ ಖಲೀಫರು ಈ ವಿಷಯಗಳನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸುತ್ತಾರೆ ಮತ್ತು ಕೆಲವು

ಅಂಧರ್ಭಗಳಲ್ಲಿ ನಾನೂ ಸಹ ಅದೇ ವಿಧಾನವನ್ನು ಅನುಸರಿಸುತ್ತೇನೆ. ಹೀಗೆ ಶೂರಾದ ಪ್ರತಿಯೊಬ್ಬ ಸದಸ್ಯರು ಅದರ ವಿಶೇಷ ಪ್ರಾಮುಖ್ಯತೆಯನ್ನು ಅರಿತುಕೊಳ್ಳಬೇಕು ಮತ್ತು ಈ ಪ್ರಾಮುಖ್ಯತೆಯು ಮೂರು ದಿನಗಳವರೆಗೆ ಮಾತ್ರವಲ್ಲದೆ ಇಡೀ ವರ್ಷಕ್ಕೆ ಇದೆ ಎಂದು ಗಮನದಲ್ಲಿಡಬೇಕು ಮತ್ತು ಯಾವುದೇ ರಚನೆಯಾಗ ಯೋಜನೆಗಳನ್ನು ಅನುಸರಿಸುವಂತೆ ಮಾಡಲು ಮತ್ತು ಅದರ ಅನುಷ್ಠಾನಕ್ಕೆ ಆಡಳಿತಕ್ಕೆ ಸಂಪೂರ್ಣ ಬೆಂಬಲವನ್ನು ನೀಡಬೇಕು ಮತ್ತು ಅದು ಅವರ ಹೊಣೆಗಾರಿಕೆಯಾಗಿದೆ ಮತ್ತು ಹೀಗೆ ಮಾಡಿದಾಗ ಮಾತ್ರ ಜಮಾಅತ್‌ನ ಅಭಿವೃದ್ಧಿ ಯೋಜನೆಗಳು ಸರಿಯಾದ ಹಾದಿಯಲ್ಲಿ ಸಾಗುತ್ತವೆ ಮತ್ತು ಅವು ಉತ್ತಮ ರೀತಿಯಲ್ಲಿ ಅನುಷ್ಠಾನಗೊಳ್ಳಲು ಸಾಧ್ಯವಾಗುತ್ತದೆ. ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಒಪ್ಪಿಸಲಾದ ಅಭೀವೃದ್ಧಿಯ ಮತ್ತು ಮಾರ್ಗದರ್ಶನದ ಮಿಷನ್‌ನಲ್ಲಿ ನಾವು ಬೆಂಬಲಿಗರು ಮತ್ತು ಸಹಾಯಕರಾಗಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ಶೂರಾ ಸದಸ್ಯರಾಗಿರುವುದು ಅರ್ಥಹೀನವಾಗಿತ್ತದೆ.

ಪ್ರಪಂಚದ ಪ್ರತಿಯೊಂದು ದೇಶಗಳಲ್ಲಿ, ಶೂರಾವನ್ನು ಸಾಮಾನ್ಯವಾಗಿ ಅಮೀರ್ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಗುತ್ತದೆ ಮತ್ತು ಕೆಲವೊಮ್ಮೆ, ಅಭಿಪ್ರಾಯಗಳನ್ನು ನೀಡುವವರ ಉತ್ಸಾಹದಲ್ಲಿ, ಶೂರಾದ ಪಾವಿತ್ರ್ಯಕ್ಕೆ ವಿರುದ್ಧವಾದ ಪದಗಳನ್ನು ಬಳಸುತ್ತಾರೆ ಎಂದು ನಾನು ಇಲ್ಲಿ ಉಲ್ಲೇಖಿಸುತ್ತೇನೆ. ಹಾಗಾಗಿ ಸದಸ್ಯರು ತಮ್ಮ ಅಭಿಪ್ರಾಯ ತಿಳಿಸಿದಾಗಲೆಲ್ಲ ಉತ್ಸಾಹ ತೋರುವ ಬದಲು ಪ್ರಜ್ಞೆ ಇಲ್ಲದಂತೆ ಮಾತನಾಡುವ ಬದಲು ಭಾವುಕ ಮಾತುಗಳನ್ನಾಡುವ ಬದಲು ಸೂಕ್ತ ಪದಗಳಲ್ಲಿ ತಮ್ಮ ಅಭಿಪ್ರಾಯ ತಿಳಿಸಬೇಕು ಎಂಬುದು ಮೊದಲನೆಯದು.

ಕೆಲವೊಮ್ಮೆ ಅಭಿಪ್ರಾಯ ನೀಡುವವರು ಎಂತಹ ಮಾತುಗಳನ್ನು ಆಡುತ್ತಾರೆ ಎಂದರೆ ಆಮಿಲದ ಸದಸ್ಯರು ಅಥವಾ ಶೂರಾದ ಅಧ್ಯಕ್ಷತೆಯನ್ನು ವಹಿಸುವ ಅಮೀರ್ ಜಮಾಅತ್‌ಗಳ ಬಗ್ಗೆ ನೇರವಾಗಿ ಅಥವಾ ಪರೋಕ್ಷವಾಗಿ ನಮ್ಮ ವಿರುದ್ಧ ಮಾತನಾಡುತ್ತಿದ್ದಾರೆ ಎಂದು ಭಾವಿಸುತ್ತಾರೆ ಮತ್ತು ನಂತರ ಮಜ್ಲಿಸ್ ಅಧ್ಯಕ್ಷರು, ಹೇಳುತ್ತಿರುವವರಿಗೆ ಕಟುವಾದ ಪದಗಳಲ್ಲಿ ಅವರಿಗೆ ತಡೆಯುತ್ತಾರೆ. ಹೀಗಾಗಿ ಅಮೀರ್‌ಗಳು ಸಹ ಧೈರ್ಯ ತೋರಬೇಕು. ಹೇಳುತ್ತಿರುವನು ಹೇಳುತ್ತಿರುವುದು ಜಮಾಅತ್‌ನ ಹಿತಾಸಕ್ತಿಗಾಗಿ ಹಾಗೂ ನೋವಿನಿಂದ ಕೂಡಿದೆ ಎಂಬ ವಿಶ್ವಾಸ ಇಟ್ಟುಕೊಳ್ಳಬೇಕು.

ಅವರು ಕಟುವಾದ ಪದಗಳನ್ನು ಬಳಸಿದ್ದರೆ ಅಥವಾ ಶೂರಾದ ಪಾವಿತ್ರ್ಯತೆಗೆ ವಿರುದ್ಧವಾದ ಪದಗಳನ್ನು ಬಳಸಿದ್ದರೆ, ಅವರನ್ನು ಮೃದುವಾಗಿ ಖಂಡಿಸಿ. ಮಜ್ಲಿಸ್‌ನ ಅಧ್ಯಕ್ಷರು ಇದನ್ನು ವೈಯಕ್ತಿಕ ಗೌರವದ ವಿಷಯವಾಗಿ ತೆಗೆದುಕೊಂಡಿದ್ದಾರೆ ಎಂದು ಅನುಮಾನಿಸುವಂತಹ ಧೋರಣೆ ಅನುಸರಿಸಬೇಡಿ.

ಅದರಲ್ಲೂ ಬಜೆಟ್ ವಿಚಾರದಲ್ಲಿ ಚರ್ಚೆ ನಡೆದಾಗ ಹೆಚ್ಚಿನ ಭಾವನೆಗಳು ವ್ಯಕ್ತವಾಗುತ್ತವೆ ಮತ್ತು ಒಂದಷ್ಟು ಮೀಸಲಾತಿಯೂ ವ್ಯಕ್ತವಾಗುತ್ತದೆ. ಇಂತಹ ಸಂದರ್ಭಗಳಲ್ಲೂ ಸಂಬಂಧಪಟ್ಟ ಕಾರ್ಯದರ್ಶಿ, ಹಣಕಾಸು ಕಾರ್ಯದರ್ಶಿ ಹಾಗೂ ಸಭೆಯ ಅಧ್ಯಕ್ಷರು ತಾಳ್ಮೆಯಿಂದ ಆಲಿಸಿ ಅವರಿಗೆ ಉತ್ತರ ನೀಡಿ ಬಜೆಟ್ ಹೇಗೆ ಸಿದ್ಧಗೊಳಿಸಲಾಗಿದೆ, ಆದಾಯ ಹೇಗಿದೆ, ಖರ್ಚುವೆಚ್ಚಗಳು ಹೇಗಿವೆ ಎಂದು ಸಮಾಧಾನಪಡಿಸಬೇಕು. ಇದು ಹೇಗೆ ಸಮರ್ಥನೆ? ಹೇಳುವ ವ್ಯಕ್ತಿ ಜಮಾಅತ್‌ನ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತಾರೆ, ಆದ್ದರಿಂದ ದುರುದ್ದೇಶ ಇರಬಾರದು. ಅದೇ ರೀತಿ ಅಜೆಂಡಾದ ಇತರ ಪ್ರಸ್ತಾವನೆಗಳೂ ಇವೆ, ಕೆಲವೊಮ್ಮೆ ಆಡಳಿತ ಮತ್ತು ಪ್ರತಿನಿಧಿಗಳು ವಿನಾಕಾರಣ ಚರ್ಚೆಯಲ್ಲಿ ಗೊಂದಲಕ್ಕೊಳಗಾಗುತ್ತಾರೆ ಅಥವಾ ಆಡಳಿತಕ್ಕೆ ಹೆದರಿ ಅವರು ಸಂಪೂರ್ಣವಾಗಿ ಮೌನವಾಗುತ್ತಾರೆ. ಅಂತಹ ಜನರು ತಮ್ಮ ಅಮಾನತ್‌ನ ಹಕ್ಕನ್ನು ಈಡೇರಿಸುವುದಿಲ್ಲ.

ಆದ್ದರಿಂದ ಪ್ರತಿನಿಧಿಗಳು ಪ್ರಾತಿನಿಧ್ಯ ಮತ್ತು ಅಮಾನತ್‌ನ ಹಕ್ಕನ್ನು ಪೂರೈಸಲು ಜನರಿಂದ ಚುನಾಯಿತರಾಗಿದ್ದಾರೆ ಎಂಬುದನ್ನು ಯಾವಾಗಲೂ ನೆನಪಿಡಿ.

ಆದ್ದರಿಂದ, ವ್ಯಕ್ತಿತ್ವದ ಪ್ರಶ್ನೆಯೂ ಇರಬಾರದು, ಯಾವುದೇ ರೀತಿಯ ಭಯವೂ ಇರಬಾರದು ಮತ್ತು ಜನರು ನಮ್ಮನ್ನು ಅಲ್ಲಾಹನ ಆದೇಶದಂತೆ ಆರಿಸಿಕೊಂಡಿದ್ದಾರೆ ಎಂದು ಯಾವಾಗಲೂ ಅರ್ಥಮಾಡಿಕೊಳ್ಳಿ, **ತುಅದ್ದುಲ್ ಅಮಾನಾತಿ ಇಲಾ ಅಹ್‌ಲಿಹಾ** (ಅನ್ನಿಸಾಅ್:59) ಅಮಾನತ್ತುಗಳನ್ನು ಅವರು ಹಕ್ಕುದಾರರಿಗೆ ನೀಡಬೇಕು ಮತ್ತು ಖಲೀಫರು ಸಹ ಒಳ್ಳೆಯ ಉದ್ದೇಶದಿಂದ ಸರ್ವಶಕ್ತನಾದ ಅಲ್ಲಾಹನ ಈ ಆದೇಶದ ಪ್ರಕಾರ ಜನರು ತಮ್ಮ ಪ್ರತಿನಿಧಿಗಳನ್ನು ಮಾಡಿದಾಗ, ಅವರು ತಮ್ಮ ಅಮಾನತ್‌ಗಳ ಹಕ್ಕನ್ನು ಅದಕ್ಕೆ ತಕ್ಕಂತೆ ಈಡೇರಿಸುತ್ತಿದ್ದಾರೆ ಎಂದು ಯೋಚಿಸುತ್ತಾರೆ. ಮತ್ತು ಪ್ರತಿನಿಧಿಗಳು ಶೂರಾ ಮತ್ತು ನಂತರದಲ್ಲಿ ತಮ್ಮ ಹಕ್ಕನ್ನು ಪೂರೈಸದಿದ್ದರೆ, ಆ ಜನರು ಜಮಾಅತ್‌ನ ನಂಬಿಕೆಯನ್ನು ಘಾಸಿಗೊಳಿಸುತ್ತಾರೆ, ಬದಲಿಗೆ ಅವರು ತಮ್ಮ ನಂಬಿಕೆಯ ಹಕ್ಕನ್ನು ಖಲೀಫರೊಂದಿಗೆ ಪೂರೈಸದೆ ದ್ರೋಹವನ್ನೂ ಮಾಡುತ್ತಿದ್ದಾರೆ. ಆದರೆ ಇಲ್ಲಿ ಇನ್ನೊಂದು ಪ್ರಕರಣವಿರಬಹುದು. ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಕೆಲವರು ಧರ್ಮನಿಷ್ಠೆಯಿಂದ ವರ್ತಿಸದೆ ಪ್ರತಿನಿಧಿಗಳನ್ನೂ ಆಯ್ಕೆ ಮಾಡಿದ್ದಿರಬಹುದು. ಬಂಧುತ್ವ ಸಂಬಂಧಗಳು ಅಥವಾ ಸ್ನೇಹವನ್ನು ಹಾದುಹೋಗುವ ಕಾರಣದಿಂದ ಆಯ್ಕೆ ಮಾಡಿರಬಹುದು.

ಆದಾಗ್ಯೂ, ಆಯ್ಕೆ ಮಾಡಿದವರು ಈ ತಪ್ಪು ಕೆಲಸವನ್ನು ಮಾಡಿದ್ದಾರೆ ಎಂದು ಅವರ ಕಾರ್ಯಗಳಲ್ಲಿ ತಪ್ಪಿತಸ್ಥರು. ಅವರು ಸರಿಯಾಗಿ ತಮ್ಮ ಹಕ್ಕನ್ನು ಪಾವತಿಸದಿದ್ದರೆ, ಅವರು ಇಸ್ತಿಗ್‌ಫಾರ್ ಮಾಡಬೇಕು. ಬದಲಿಗೆ ನಾನು ಪ್ರತಿನಿಧಿಗಳು ಮತ್ತು ಅಧಿಕಾರಿಗಳನ್ನು ಸೇರಿಸಿಕೊಳ್ಳುತ್ತೇನೆ, ಅವರು ಚುನಾಯಿತರಾದಾಗ ಮತ್ತು ಅವರು ಹೊಂದಿರಬೇಕಾದ ಪ್ರಾಯೋಗಿಕ ಮತ್ತು ಆಧ್ಯಾತ್ಮಿಕ ಸ್ಥಿತಿಯ ಮಾನದಂಡಗಳನ್ನು ಹೊಂದಿಲ್ಲದಿದ್ದರೆ, ಅವರು ಇಸ್ತಿಗ್‌ಫಾರ್ ಮಾಡುತ್ತ, ಅವರ ಪರಿಸ್ಥಿತಿಗಳಲ್ಲಿ ಸಕಾರಾತ್ಮಕ ಬದಲಾವಣೆಯ ಪ್ರತಿಜ್ಞೆ ಮಾಡುತ್ತಾ ಮತ್ತು ತಖ್ವಾದ ಮಾರ್ಗವನ್ನು ಅನುಸರಿಸುತ್ತಾ ಕಠಿಣ ಪ್ರಯತ್ನ ಮಾಡುತ್ತಾ. ತಮ್ಮನ್ನು ತಾವು ಅಮಾನತ್‌ನ ಹಕ್ಕನ್ನು ನೀಡಲು ಪ್ರಯತ್ನಿಸಬೇಕು ಹೀಗೆ ಈ ಪ್ರಯತ್ನವನ್ನು ಮಾಡಿದಾಗ, ನೀವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಧ್ಯೇಯದಲ್ಲಿ ಸರ್ವಶಕ್ತನಾದ ಅಲ್ಲಾಹನ ಸಂತೃಪ್ತಿಯನ್ನು ಪಡೆಯುವಿರಿ. ಮತ್ತು ಅವರ ಪ್ರಾಯೋಗಿಕ ಮತ್ತು ಆಧ್ಯಾತ್ಮಿಕ ಪರಿಸ್ಥಿತಿಗಳನ್ನು ಸುಧಾರಿಸುವುದು.

ನಾನು ಹೇಳಿದಂತೆ ಶೂರಾದ ಪ್ರಾತಿನಿಧ್ಯ ಒಂದು ವರ್ಷಕ್ಕೆ ಆಗಿರುತ್ತದೆ. ವ್ಯವಸ್ಥೆಯೊಂದಿಗೆ ಸಹಕಾರ ಮಾಡುವುದು, ತೀರ್ಪುಗಳನ್ನು ಸ್ವತಃ ಪಾಲಿಸುವುದು ಮತ್ತು ಪಾಲಿಸುವಂತೆ ಮಾಡುವುದು ಪ್ರತಿನಿಧಿಗಳ ಕರ್ತವ್ಯವಾಗಿದೆ. ನಿಮ್ಮ ಜಮಾಅತಿನಲ್ಲಿ ಎಷ್ಟರ ಮಟ್ಟಿಗೆ ಖಲೀಫತುಲ್ ಮಸೀಹ್‌ರ ತೀರ್ಪುಗಳ ಪಾಲನೆ ನಡೆಯುತ್ತಿದೆ ಎಂಬುವುದನ್ನು ವೀಕ್ಷಿಸುತ್ತಿರಬೇಕು.

ಆದ್ದರಿಂದ ಈ ರೀತಿಯಾಗಿ ನೀವು ಕಾಲಘಟ್ಟದ ಖಲೀಫರ ಸಹಾಯಕರಾಗಬೇಕು. ಕೆಲವೊಮ್ಮೆ ತೀರ್ಮಾನಗಳು ಹುದ್ದೇದಾರರ ಸೋಮಾರಿತನಕ್ಕೆ ಗುರಿಯಾಗಿರುತ್ತವೆ. ಸರಿಯಾದ ರೀತಿಯಲ್ಲಿ ಅವುಗಳನ್ನು ಪಾಲಿಸಲಾಗುವುದಿಲ್ಲ. ಇಂತಹ ಅವಸ್ಥೆಯಲ್ಲಿ ಸಂಬಂಧಪಟ್ಟ ಹುದ್ದೇದಾರರಿಗೆ ಮತ್ತು ಕೇಂದ್ರಕ್ಕೆ ತಿಳಿಸಿಕೊಡಬೇಕು. ಅದೇ ರೀತಿ ಹಲವು ಹುದ್ದೆದಾರರು ಕೂಡ ಶೂರಾದ ಸದಸ್ಯರಾಗಿದ್ದಾರೆ. ತಮ್ಮ ಇಲಾಖೆಯ ಕೆಲಸಗಳನ್ನು ನೋಡುವುದಷ್ಟೇ ಅವರ ಕೆಲಸವಲ್ಲ, ಬದಲಿಗೆ ಅವರು ಶೂರಾ ಮತ್ತು ಖಲೀಫರ ನಿರ್ಧಾರದ ಸಲಹೆಗಳನ್ನು ಪಾಲಿಸದಿರುವುದು ಮತ್ತು ಅನುಷ್ಠಾನಗೊಳಿಸದಿರುವುದನ್ನು ಗಂಭೀರವಾಗಿ ಪರಿಗಣಿಸಬೇಕು. ಮತ್ತು ಸ್ವಂತ ಇಲಾಖೆಯಾಗಲಿ ಅಥವಾ ಬೇರೆಯವರಾಗಲಿ ಸಂಬಂಧಪಟ್ಟ ಅಧಿಕಾರಿ ಹಾಗೂ ಅಮೀರ್ ಇತ್ತ ಗಮನಹರಿಸಿ ಈ ಬಗ್ಗೆ ಮಜ್‌ಲಿಸ್ ಆಮಿಲಾದಲ್ಲಿಯೂ ಇರಿಸಬೇಕು ಇಲ್ಲವಾದಲ್ಲಿ ಅಂತಹ ಹುದ್ದೆದಾರರು, ಜನಪ್ರತಿನಿಧಿಗಳು ತಮ್ಮ ಅಮಾನತ್‌ಗಳ ಹಕ್ಕನ್ನು ನೀಡುತ್ತಿಲ್ಲ. ಈ ಲೋಕದಲ್ಲಿ ನೆವನಗಳನ್ನು ಹೇಳಿಕೊಂಡು ಬಚಾವಾಗಬಹುದು. ಆದರೆ ಅಲ್ಲಾಹನಿಂದ ಯಾವುದೇ ಸಂಗತಿ ಗೋಪ್ಯವಾಗಿರುವುದಿಲ್ಲ. ಅವನು ಅಮಾನತ್ತುಗಳ ಬಗ್ಗೆ ಪ್ರಶ್ನಿಸುವನು. ಹೀಗಾಗಿ ಬಹಳ ಆತಂಕದ ವಿಷಯವಾಗಿದೆ. ನಾವು ಶೂರಾದ ಪ್ರತಿನಿಧಿಗಳು ಅಥವಾ ಹುದ್ದೆದಾರರು ಎಂದು ಹೆಮ್ಮೆಪಡಬಾರದು, ಬದಲಿಗೆ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯ ಬಗ್ಗೆ ಕಾಳಜಿ ವಹಿಸಬೇಕು.

ನಾನು ಹೇಳಿದಂತೆ ಜಮಾಅತ್‌ಗಳಲ್ಲಿ ಹುದ್ದೆದಾರರ ಗಮನ ಸೆಳೆದರೂ ಶೂರಾದ ನಿರ್ಣಯಗಳು ಜಾರಿಯಾಗದಿದ್ದರೆ ಜನಪ್ರತಿನಿಧಿಗಳು ಪ್ರಯತ್ನಪಟ್ಟು ಗಮನ ಸೆಳೆದರೂ ಅನುಷ್ಠಾನಗೊಳಿಸದೇ ಇದ್ದರೆ ಕೇಂದ್ರಕ್ಕೆ ವರದಿ ಸಲ್ಲಿಸಿ. ಇದನ್ನು ಇನ್ನೂ ಕೆಲವರು ಅಭ್ಯಾಸ ಮಾಡುತ್ತಿದ್ದಾರೆ. ಕ್ರಮ ಕೈಗೊಳ್ಳುತ್ತಿಲ್ಲವೆಂದಲ್ಲ, ಹುದ್ದೆದಾರರು ಕಾರ್ಯಪ್ರವೃತ್ತರಾಗದಿದ್ದರೆ ಕೇಂದ್ರಕ್ಕೆ ವರದಿ ಸಲ್ಲಿಸುವುದು ಕೆಲವರ ಅಭ್ಯಾಸ, ಆದರೆ ವೈಯಕ್ತಿಕ ದ್ವೇಷದಿಂದ ಹುದ್ದೆದಾರರೊಂದಿಗೆ ಭಿನ್ನಾಭಿಪ್ರಾಯ ಉಂಟಾದಾಗ ಸಾಮಾನ್ಯವಾಗಿ ಮಾಡುತ್ತಾರೆ. ಈ ವಿಧಾನವು ಧರ್ಮನಿಷ್ಠೆಯ ವಿಧಾನವಲ್ಲ. ಪ್ರತಿಯೊಬ್ಬ ಪ್ರತಿನಿಧಿ ಮತ್ತು ಪ್ರತಿಯೊಬ್ಬ ಹುದ್ದೆದಾರರು ಶೂರಾದಿಂದ ಅನುಮೋದಿಸಲಾದ ಪ್ರಸ್ತಾವನೆಗಳನ್ನು ಅನುಸರಿಸಲು ಮತ್ತು ಕಾರ್ಯಗತಗೊಳಿಸಲು ಪ್ರಯತ್ನಿಸಿದರೆ, ಆ ಪ್ರಸ್ತಾಪವು ಮುಂದಿನ ವರ್ಷ ಅಥವಾ ಎರಡು ಅಥವಾ ಮೂರು ವರ್ಷಗಳ ನಂತರ ಮತ್ತೆ ಬರುವ ಪರಿಸ್ಥಿತಿ ಇರುವುದಿಲ್ಲ.

ಜಮಾಅತುಗಳ ಕಡೆಯಿಂದ ಕೆಲವು ಸಲಹೆಗಳು ಪುನಃ ಬರುವುದರ ಅರ್ಥವೇನೆಂದರೆ, ಅವುಗಳ ಪ್ರಕಾರ ಕೆಲಸ ನಡೆಯುತ್ತಿಲ್ಲವೆಂದಾಗಿದೆ.

ಆದ್ದರಿಂದ ಇದು ತಖ್ವದಲ್ಲಿ ನಡೆಯುವ, ತಮ್ಮ ಅಮಾನತ್ತುಗಳ ಹಕ್ಕುಗಳನ್ನು ಈಡೇರಿಸುವ, ಖಿಲಾಫತಿನ ಅನುಸರಣೆ ಮಾಡುವ ಮತ್ತು ತಮ್ಮ ಪ್ರತಿಜ್ಞೆಯನ್ನು ನಿಭಾಯಿಸುವ ಕೃತ್ಯವೇ ಎಂದು ಅಂತಹ ಜಮಾಅತುಗಳು ಮತ್ತು ಹುದ್ದೇದಾರರು ಯೋಚಿಸಬೇಕು. ಈ ವಿಷಯಗಳು ಕಾರ್ಯರೂಪಕ್ಕೆ ಬರುತ್ತಿಲ್ಲ ಎಂದು ಕಂಡಾಗ ಮಾತ್ರ ದೇಶದೊಳಗಿನ ಜಮಾಅತ್‌ಗಳು ಅಂತಹ ಪ್ರಸ್ತಾಪಗಳನ್ನು ತಮ್ಮ ಕೇಂದ್ರಕ್ಕೆ ಕಳುಹಿಸುತ್ತವೆ. ಅನುಷ್ಠಾನವನ್ನು ಮಾಡಲಾಗುತ್ತಿದ್ದರೆ ಮತ್ತು ಪ್ರತಿ ಹಂತದಲ್ಲೂ ಪ್ರತಿ ಜಮಾಅತ್ ಅನುಷ್ಠಾನವನ್ನು ಎಷ್ಟರ ಮಟ್ಟಿಗೆ ಮಾಡುತ್ತಿದೆ ಎಂದು ಮೇಲ್ವಿಚಾರಣೆ ಮಾಡುತ್ತಿದ್ದರೆ, ನಂತರ ಸಲಹೆಗಳು

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 15 June 2023, Issue No. 24

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ಮತ್ತೆ ಬರುವುದಿಲ್ಲ ಮತ್ತು ರಾಷ್ಟ್ರೀಯ ಕೇಂದ್ರವು ಈ ಶಿಫಾರಸುಗಳೊಂದಿಗೆ ಈ ಸಲಹೆಗಳನ್ನು ಖಲೀಫರಿಗೆ ಕಳುಹಿಸುವ ಅಗತ್ಯವಿಲ್ಲ. ಇದು ಒಂದು ವರ್ಷದ ಹಿಂದೆ ಅಥವಾ ಎರಡು ವರ್ಷಗಳ ಹಿಂದೆ ಪ್ರಸ್ತುತಪಡಿಸಿದ ಕಾರಣ, ಅದನ್ನು ಶೂರಾದಲ್ಲಿ ಪ್ರಸ್ತುತಪಡಿಸಲು ಶಿಫಾರಸು ಮಾಡುವುದಿಲ್ಲ. ಈ ಉತ್ತರವನ್ನು ಬರೆಯುವಾಗ, ಅದನ್ನು ಕಾರ್ಯಗತಗೊಳಿಸಲು ಈ ವರ್ಷ ನಮ್ಮಿಂದ ಸಾಧ್ಯವಾಗಲಿಲ್ಲ ಎಂಬ ಕಾರಣಕ್ಕೆ ಕೇಂದ್ರದ ಹುದ್ದೇದಾರರು ಸಹ ಲಜ್ಜಿತರಾಗಬೇಕು. ಆದರೆ ಈ ವರ್ಷ ನಾವು ಅದರ ಪ್ರಕಾರ ನಡೆಯುವೆವು ಎಂದು ದೃಢಸಂಕಲ್ಪ ಮಾಡಬೇಕು ಮತ್ತು ಅದನ್ನು ಕಾರ್ಯಗತಗೊಳಿಸದಿದ್ದರೆ ನಾವು ಅಪರಾಧಿಗಳು ಮತ್ತು ಅಮಾನತ್ತುಗಳ ಹಕ್ಕುಗಳನ್ನು ಈಡೇರಿಸದ ಜನರಲ್ಲಿ ಸೇರುವವರಾಗುವೆವು ಎಂದು ಅರಿಯಬೇಕು. ನಾವು ಈ ವರ್ಷ ಈ ಸಲಹೆಯನ್ನು ಮತ್ತೊಮ್ಮೆ ಮಂಡಿಸದಿರಲು ಶಿಫಾರಸ್ಸು ಮಾಡುತ್ತೇವೆ ಎಂದು ಕ್ಷಮೆ ಯಾಚನೆ ಮಾಡುತ್ತಾ ಪತ್ರ ಬರೆಯಬೇಕು. ಇದರಿಂದ ದೊಡ್ಡ ದೊಡ್ಡ ಕಾರ್ಯ ಸೂಚಿಗಳನ್ನು ಮಾಡಿಕೊಂಡು ಖ಼ಲೀಫರಿಗೆ ಸಮರ್ಪಿಸಿದ ನಂತರ ಅದರ ಪ್ರಕಾರ ನಡೆಯದಿದ್ದರೆ ನಾವು ಅಪರಾಧಿಗಳಾಗುವೆವು ಮತ್ತು ಖ಼ಲೀಫತುಲ್ ಮಸೀಹ್‌ರು ಅವರ ಮೇಲೆ ಇರಿಸಿರುವ ಭರವಸೆಗೆ ಧಕ್ಕೆ ಉಂಟುಮಾಡುತ್ತಿದ್ದೇವೆ ಎಂಬ ತಮ್ಮ ತಪ್ಪಿನ ಅರಿವು ಕನಿಷ್ಠ ಪಕ್ಷ ಅವರಿಗೆ ಉಂಟಾಗುವುದು. ಈ ರೀತಿಯಾಗಿ ಒಟ್ಟಾಗಿ ಒಂದು ಅವಲೋಕನ ನಡೆಸುವುದರ ಜೊತೆಗೆ ವೈಯಕ್ತಿಕವಾಗಿಯೂ ಶೂರಾದ ಪ್ರತಿನಿಧಿಗಳು ಮತ್ತು ಹುದ್ದೇದಾರರು ತಮ್ಮ ಆತ್ಮಾವಲೋಕನ ನಡೆಸಬೇಕು. ಇಸ್ತಿಗ಼್್‌ಫಾರ್ ಮಾಡಬೇಕು ಹಾಗೂ ಕಾರ್ಯಗತಗೊಳ್ಳದೇ ಆಗಲು ಕಾರಣವೇನೆಂದು ಕಂಡು ಹಿಡಿಯಬೇಕು. ಈ ಅವಲೋಕನವೇ ಜಮಾಅತಿನ ವ್ಯವಸ್ಥೆಯನ್ನು ಸರಿಯಾದ ಮಾರ್ಗದಲ್ಲಿ ನಡೆಸುವುದು. ಅದಲ್ಲದೆ ಕೇವಲ ಬಾಯಿಮಾತುಗಳಿಂದ ಯಾವುದೇ ಪ್ರಯೋಜನ ಲಭಿಸದು.

ಒಂದು ಸ್ಥಳದಲ್ಲಿ ಒಂದು ಜಮಾಅತ್ ತನ್ನ ಪ್ರಾಯೋಗಿಕ ಮತ್ತು ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿದ್ದರೆ, ಅದು ತನ್ನ ವಿಧಾನಗಳನ್ನು ಹಂಚಿಕೊಳ್ಳುವ ಮೂಲಕ ಹತ್ತು ಇತರ ಜಮಾಅತ್‌ಗಳಿಗೆ ಪ್ರಯೋಜನವನ್ನು ನೀಡಬಹುದು.

ಕಳೆದ ಮೂರು ವರ್ಷಗಳಲ್ಲಿ ಶೂರಾದ ನಿರ್ಧಾರಗಳು ಎಷ್ಟರಮಟ್ಟಿಗೆ ಅನುಷ್ಠಾನಗೊಂಡಿವೆ ಮತ್ತು ಅನುಷ್ಠಾನಗೊಳ್ಳುತ್ತಿವೆ ಎಂಬುದನ್ನು ಕೆಲವು ಜಮಾಅತ್‌ಗಳು ಅಥವಾ ದೇಶಗಳು ಪರಾಮರ್ಶಿಸಿ ಪ್ರಯೋಜನ ಪಡೆದಿವೆ ಮತ್ತು ನಂತರ ಅದರ ತ್ರೈಮಾಸಿಕ ಪರಿಶೀಲನಾ ವರದಿಯ ಕೇಂದ್ರಕ್ಕೆ ಕಳುಹಿಸುತ್ತಾರೆ. ಅವರಲ್ಲಿ ನಾವು ಈ ಪ್ರಸ್ತಾವನೆಯನ್ನು ಎರಡು ವರ್ಷಗಳ ಹಿಂದೆ ಮಂಡಿಸಿದ್ದೇವೆ, ಆದ್ದರಿಂದ ಮಂಡಿಸುವುದಿಲ್ಲ ಎಂದು ಸುಮ್ಮನೆ ಕುಳಿತುಕೊಳ್ಳಬಾರದು ಎಂಬ ಭಾವನೆ ಅವರಲ್ಲಿದೆ, ಆದರೆ ಈ ಯೋಜನೆಯನ್ನು ನಾವು ಈ ಮಟ್ಟಿಗೆ ಜಾರಿಗೆ ತಂದಿದ್ದೇವೆ ಎಂದು ಕೇಂದ್ರವು ವರದಿಯನ್ನು ನೀಡಬೇಕು. ಇಲ್ಲಿಯವರೆಗೆ ತನ್ನ ಗುರಿಯನ್ನು ಸಾಧಿಸಿದೆ ಮತ್ತು ಹೆಚ್ಚಿನ ಪ್ರಯತ್ನಗಳು ಪ್ರಗತಿಯಲ್ಲಿವೆ. ಇದು ಅಂತಹ ಜಮಾಅತ್‌ಗಳಲ್ಲಿ ಮತ್ತೆ ಜವಾಬ್ದಾರಿ ಪ್ರಜ್ಞೆಯನ್ನು ಹೆಚ್ಚಿಸಿದೆ. ನಾವು ಕೇವಲ ಪದಗಳಿಂದ ಜಗತ್ತನ್ನು ಗೆಲ್ಲಲು ಸಾಧ್ಯವಿಲ್ಲ, ಅದಕ್ಕೆ ಕ್ರಿಯೆಯ ಅಗತ್ಯವಿದೆ.

ದೃಢವಾದ ಯೋಜನೆಯ ಅಗತ್ಯವಿರುವಲ್ಲಿ, ನಮ್ಮ ಆರಾಧನೆಯಲ್ಲಿ ಗುಣಮಟ್ಟವನ್ನು ಸಾಧಿಸಲು ಪ್ರಾಯೋಗಿಕ ಪ್ರಯತ್ನದ ಅಗತ್ಯವೂ ಇದೆ. ಶೂರಾದ ಪ್ರತಿನಿಧಿಗಳು ಮತ್ತು ಹುದ್ದೆದಾರರು ತಮ್ಮ ಆರಾಧನೆಯ ಗುಣಮಟ್ಟವನ್ನು ಸುಧಾರಿಸುವತ್ತ ಗಮನಹರಿಸಿದರೆ ಮತ್ತು ಮಸೀದಿಗಳನ್ನು ಜನಸಂಖ್ಯೆ ಮಾಡಲು ತಮ್ಮ ಪ್ರಾಯೋಗಿಕ ಮಾದರಿಗಳನ್ನು ತೋರಿಸಿದರೆ, ಮಸೀದಿಗಳ ಜನಸಂಖ್ಯೆಯು ಮೂರರಿಂದ ನಾಲ್ಕು ಪಟ್ಟು ಹೆಚ್ಚಾಗಬಹುದು. ಇದರ ಬಗ್ಗೆ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು.

ತಮ್ಮ ಕೃತ್ಯರೂಪದ ಮಾದರಿಗಳು, ಜನರ ಜೊತೆಗೆ ಪ್ರೀತಿ ಮತ್ತು ಸ್ನೇಹದ ಸಂಬಂಧ, ಅವರ ನೋವು ಹೃದಯದಲ್ಲಿ ಇರಿಸುವುದು, ಖ಼ಲೀಫತುಲ್ ಮಸೀಹ್‌ರೊಂದಿಗೆ ಅನುಸರಣೆಯ ಮಟ್ಟವನ್ನು ಉನ್ನತಗೊಳಿಸುವುದು ಪ್ರತಿ ಹುದ್ದೇದಾರನ ಮತ್ತು ಶೂರಾ ಸದಸ್ಯನ ವಿಶಿಷ್ಟ ಗುಣವಾದರೆ ಮಾತ್ರ ಕ್ರಾಂತಿಕಾರಿಯಾದ ಪರಿವರ್ತನೆ ಒಟ್ಟಾಗಿ ಜಮಾಅತಿನಲ್ಲಿ ಉಂಟಾಗುವುದಾಗಿ ಕಾಣುವಿರಿ.

ನಮ್ಮ ಮುಂದೆ ದೊಡ್ಡ ಕಾರ್ಯವಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅವರ ಧ್ಯೇಯೋದ್ದೇಶವು ಕ್ಷುಲ್ಲಕ ಕಾರ್ಯವಲ್ಲ. ಇಸ್ಲಾಂ ಧರ್ಮದ ಸುಂದರ ಸಂದೇಶವನ್ನು ಜಗತ್ತಿಗೆ ಸಾರುವ ಮೂಲಕ ಜಗತ್ತನ್ನು ಕೇವಲ ದೇವರ ಆರಾಧಕನನ್ನಾಗಿ ಮಾಡಲು ನಿರಂತರ ಪ್ರಯತ್ನ ಬೇಕು.

ನಾವು ನಮ್ಮ ಕೃತ್ಯರೂಪದ ಅವಸ್ಥೆಗಳನ್ನು ಸರಿಪಡಿಸಲು ಯೋಜನೆ ಮಾಡುವುದರ ಜೊತೆಗೆ ಏಕದೇವನ ಸಂದೇಶವನ್ನು ತಲುಪಿಸಲು ಹಾಗೂ ಲೋಕವನ್ನು ಹಝ಼್ರತ್ ಪೈಗಂಬರ್(ಸ)ರ ಧ್ವಜದ ಅಡಿಗೆ ತರಲಿಕ್ಕಾಗಿ ಯೋಜನೆ ಮಾಡಿಕೊಂಡು ಒಂದು ಕ್ರಾಂತಿಯನ್ನು ಉಂಟುಮಾಡಲಿಕ್ಕಾಗಿ ಶೂರಾವನ್ನು ನಡೆಸಲಾಗುತ್ತದೆ.

ಈ ಎಲ್ಲಾ ಕೆಲಸಗಳನ್ನು ಮಾಡಲು ಖರ್ಚು ಕೂಡ ಬೇಕು, ಸಂಪತ್ತು ಕೂಡ ಬೇಕು ಎಂಬುದನ್ನು ಸದಾ ನೆನಪಿನಲ್ಲಿಡಿ. ಆದ್ದರಿಂದ, ನಿಮ್ಮ ಹಣಕಾಸಿನ ಬಜೆಟ್ ಅನ್ನು ಕಡಿಮೆ ವೆಚ್ಚದಲ್ಲಿ ನಾವು ಗರಿಷ್ಠ ಫಲಾನುಭವಿಗಳಾಗಿರುವ ರೀತಿಯಲ್ಲಿ ಮಾಡಿ. ಜಮಾಅತ್‌ನ ಸದಸ್ಯರಲ್ಲಿ ಹೆಚ್ಚಿನವರು ಬಡವರು ಮತ್ತು ಮಧ್ಯಮ ವರ್ಗದವರಾಗಿದ್ದಾರೆ. ಆದುದರಿಂದ ನಮ್ಮ ಚಂದಗಳ ಆಮದ್ ಅನ್ನು ಕನಿಷ್ಠ ವೆಚ್ಚದಲ್ಲಿ ಧರ್ಮ, ತಬ್ಲೀಗ್ ಪ್ರಕಾಶನದ ಕೆಲಸವನ್ನು ಕೈಗೊಳ್ಳುವ ರೀತಿಯಲ್ಲಿ ಯೋಜಿಸಬೇಕು, ಧರ್ಮನಿಷ್ಠೆಯನ್ನು ಮೆಟ್ಟಿನಿಲ್ಲುವ ಮೂಲಕ ನಮ್ಮ ಜವಾಬ್ದಾರಿಗಳನ್ನು ಮತ್ತು ಅಮಾನತ್‌ಗಳನ್ನು ಪೂರೈಸಬೇಕು ಎಂದು ಅರ್ಥಮಾಡಿಕೊಳ್ಳುವವರಾಗಿರಿ. ಧರ್ಮಸೇವೆಯು ಸರ್ವಶಕ್ತನಾದ ಅಲ್ಲಾಹನ ಅನುಗ್ರಹವಾಗಿದೆ ಎಂದು ಭಾವಿಸಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಧರ್ಮನಿಷ್ಠೆಯ ಮೇಲೆ ನಡೆಯಲು ಸಲಹೆ ನೀಡುತ್ತಾ ಒಂದು ಸ್ಥಳದಲ್ಲಿ ಹೀಗೆ ನುಡಿಯುತ್ತಾರೆ: **“ಯಾ ಅಯ್ಯುಹಲ್ಲಝೀನ ಆಮನೂ ಇನ್ ತತ್ತಖುಲ್ಲಾಹ ಯಜ್‌ಅಲ್ಲಕುಮ್ ಫುರ್ಖಾನೌ ವ್ವಯುಕಫ್ಫಿರ್ ಅನ್‌ಕುಮ್ ಸಯ್ಯಿಆತಿಕುಮ್** (ಅಲ್–ಅನ್‌ಫಾಲ್: 30) ಮತ್ತೆ ನುಡಿಯುತ್ತಾರೆ **ವ ಯಜ್‌ಅಲ್ಲಕುಮ್ ನೂರನ್ ತಮ್‌ಶೂನ ಬಿಹೀ** (ಅಲ್–ಹದೀದ್: 29) ಅಂದರೆ: ಅಂದರೆ, ಓ ಸತ್ಯವಿಶ್ವಾಸಿಗಳೇ! ನೀವು ಧರ್ಮನಿಷ್ಠರಾಗಿರಲು ಮತ್ತು ಅಲ್ಲಾಹನ ಮೇಲಿನ ಭಕ್ತಿಯ ಗುಣಲಕ್ಷಣದಲ್ಲಿ ದೃಢವಾಗಿ ಉಳಿಯುತ್ತಿದ್ದರೆ, ಅಲ್ಲಾಹನು ನಿಮ್ಮ ನಡುವೆ ಮತ್ತು ನಿಮ್ಮ ನಡುವೆ ಇಲ್ಲದವರ ನಡುವೆ ವ್ಯತ್ಯಾಸವನ್ನುಂಟುಮಾಡುತ್ತಾನೆ. ವ್ಯತ್ಯಾಸವೆಂದರೆ ನಿಮಗೆ ದೈವಪ್ರಕಾಶನ್ನು ನೀಡಲಾಗುವುದು, ಅದರೊಂದಿಗೆ ನೀವು ನಿಮ್ಮ ಎಲ್ಲಾ ಮಾರ್ಗಗಳಲ್ಲಿ ನಡೆಯುತ್ತೀರಿ, ಅಂದರೆ, ನಿಮ್ಮ ಎಲ್ಲಾ ಕ್ರಿಯೆಗಳು ಮತ್ತು ಪದಗಳು ಮತ್ತು ನಿಮ್ಮ ಇಂದ್ರಿಯಗಳಿಗೆ ಪ್ರಕಾಶವು ಲಭಿಸುವುದು. ನಿಮ್ಮ ಬುದ್ಧಿಯಲ್ಲಿ, ನಿಮ್ಮ ಊಹಾಪೋಹದ ಮಾತುಗಳಲ್ಲಿ, ಮತ್ತು ನಿಮ್ಮ ಕಣ್ಣುಗಳಲ್ಲಿ, ಮತ್ತು ನಿಮ್ಮ ಕಿವಿಗಳಲ್ಲಿ, ಮತ್ತು ನಿಮ್ಮ ನಾಲಿಗೆಯಲ್ಲಿ, ಮತ್ತು ನಿಮ್ಮ ಮಾತಿನಲ್ಲಿ, ಮತ್ತು ನಿಮ್ಮ ಪ್ರತಿಯೊಂದು ಚಲನೆ ಮತ್ತು ಶಾಂತಿಯಲ್ಲಿ ಮತ್ತು ನೀವು ಮಾಡುವ ಮಾರ್ಗಗಳಲ್ಲಿ ಪ್ರಕಾಶವಿರುತ್ತದೆ. ಯಾವ ಮಾರ್ಗದಲ್ಲಿ ನೀವು ನಡೆಯುತ್ತೀರೋ ಆ ಮಾರ್ಗವೂ ಪ್ರಕಾಶಮಯವಾಗುತ್ತದೆ. ಆದ್ದರಿಂದ, ನಿಮ್ಮ ಮಾರ್ಗಗಳು ಮತ್ತು ನಿಮ್ಮ ಇಂದ್ರಿಯಗಳ ಮಾರ್ಗಗಳು, ಅವೆಲ್ಲವೂ ಪ್ರಕಾಶದಿಂದ ತುಂಬಿರುತ್ತವೆ ಮತ್ತು ನೀವು ಪ್ರಕಾಶದಲ್ಲಿ ನಡೆಯುತ್ತೀರಿ. (ಆಈನ ಕಮಾಲಾತೆ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ–5, ಪುಟ–177–178)

ಅಲ್ಲಾಹನು ನಮ್ಮೆಲ್ಲರನ್ನು ದೇವಭಕ್ತಿಯಲ್ಲಿ ನಡೆಸುತ್ತಾ ತಮ್ಮ ಜವಾಬ್ದಾರಿಗಳನ್ನು ನಿಭಾಯಿಸಲು ಸೌಭಾಗ್ಯ ನೀಡಲಿ. ಅಲ್ಲಾಹನು ನಮ್ಮ ತಪ್ಪುಗಳನ್ನು, ಕೊರತೆಗಳನ್ನು ಮತ್ತು ದೌರ್ಬಲ್ಯಗಳನ್ನು ಮರೆಮಾಚಿಕೊಂಡು ತನ್ನ ಕೃಪೆಯನ್ನು ನಮಗೆ ಸದಾ ದಯಪಾಲಿಸುತ್ತಾ ಹೋಗಲಿ – **ಆಮೀನ್.**

...*...*...*...

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ**
**ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.